ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 ಸಂಚಿಕೆ 40 ರೂ. 2.00 1 ಅಕ್ಟೋಬರ್ 1995

ಒಳಪುಟಗಳಲ್ಲಿ

ಸಾರ್ವಜನಿಕ ಹಣದಿಂದ ರಾಜಕೀಯ ಪ್ರಚಾರ ಪಡೆಯಲು

ವಿಧಾನಸಭೆಯಲ್ಲಿ ಕಾಂಗ್ರೆ ಬಿಜೆಪಿ ಅಪವಿತ್ರ ಮೈತ್ರಿ

-ಎಸ್.ಕೆ. ಉಪಾಧ್ಯಾಯ

ಕರ್ನಾಟಕದ ರಾಜಕೀಯದಲ್ಲಿ ಹಿಂದೆಂದೂ ಕಾಣದ ಹೊಸ ರಾಜಕೀಯ ಬೆಳವಣಿಗೆ ಬೆಳೆದು ಬಂದಿರುವುದನ್ನು ಕಾಣಬಹುದಾಗಿದೆ. ಎರಡೂ ವಿರೋಧಿ ಪಕ್ಷಗಳು ಕಾಂಗ್ರೆ ಮತ್ತು ಬಿಜೆಪಿ ಈ ಸಲದ ವಿಧಾನ ಸಭೆ-ವಿಧಾನ ಪರಿಷತ್ ಗಳಲ್ಲಿ ಒಟ್ಟಾಗಿ ಕಾರ್ಯಾಚರಣೆ ಮಾಡುತ್ತಿರುವ ಒಟ್ಟಾಗಿ ವಿಚಾರ ವಿನಿಮಯ ನಡೆಸುವ ಒಟ್ಟಾಗಿ ರಾಜ್ಯಪಾಲರಿಗೆ ಮನವಿ ಅರ್ಪಿಸುವ ಒಂದೇ ಅಭಿಪ್ರಾಯ ಓಂದೇ ನಿಲುಮೆ ತೆಗೆದುಕೊಳ್ಳುವ ಘಟನೆ ಸಾರ್ವಜನಿಕರಲ್ಲಿ ಹುಬ್ಬೇರಿಸುವಂತೆ ಮಾಡಿದೆ. ತನ್ನ ಗುರಿಸಾಧನೆಗಾಗಿ ಬಿಜೆಪಿ ಮಾತ್ರ ಎಂಥ ಕೀಳಟ್ಟದ, ತತ್ವಹೀನವಾದ ಕಾರ್ಯಾಚರಣೆಗೂ ಸಿದ್ಧವೆಂಬುದನ್ನು ಉತ್ತರ ಪ್ರದೇಶದಲ್ಲಿ ಮಾಯಾವತಿ ಸರ್ಕಾರಕ್ಕೆ ಬೆಂಬಲ ನೀಡುವ ಮೂಲಕ ತೋರ್ಪಡಿಸಿದೆ. ಆದರೆ ಕಾಂಗ್ರೆ ಪಕ್ಷ ಅವರ ಒಳಸಂಚಿಗೆ ಶಾಸಕರು, ವಿಧಾನಸಭೆ ವಿಧಾನ ಪರಿಷತ್ ಗಳಂತ ಜವಾಬ್ದಾರಿಯುತ ಸಂಘಟನೆಗಳನ್ನು ನಿಷ್ಕ್ರಿಯಗೊಳಿಸಿ, ಸಾರ್ವಜನಿಕ ಹಣವನ್ನು ಪೋಲುಮಾಡುವಂಥ ಅಸಹ್ಯ ಕೃತ್ಯದಲ್ಲಿ ಭಾಗಿದಾರರಾಗುತ್ತಾರೆಂಬ ವಿಷಯ ನಿಜವಾಗಿಯೂ ತತ್ವಹೀನ ಕೃತಿಯೇ ಸರಿ. ವಿಧಾನಸಭೆ ವಿಧಾನ ಪರಿಷತ್ ಗಳಲ್ಲಿ ಕಾಂಗ್ರೆ-ಬಿಜೆಪಿ ಶಾಸಕರ ವರ್ತನೆ ಅತ್ಯಂತ ಖಂಡನೀಯ. ಅದು ಪ್ರಜಾಪ್ರಭುತ್ವ ಪದ್ಧತಿಗೆ ಮಾರಕ.

ಮಳೆಯ ಅಭಾವದಿಂದಾಗಿ ರಾಜ್ಯದಲ್ಲಿ ಉಂಟಾಗಿರುವ ಭೀಕರ ಬರಗಾಲ ಪರಿಸ್ಥಿತಿಯ ಕುರಿತು ಚರ್ಚಿಸಬೇಕೆಂಬ ವಿರೋಧ ಪಕ್ಷಗಳ ಆಗ್ರಹದ ಮೇರೆಗೆ ಈ ಸಲದ ವಿಧಾನಸಭೆಯ ಅಧಿವೇಶನದ ಪ್ರಾರಂಭವಾಗಿತ್ತು. ಆದರೆ ದುರಾದೃಷ್ಟದಿಂದ ಈ ಅಧಿವೇಶನ ಬರೇಸಭಾತ್ಯಾಗಗಳ ಧರಣೆಗಳ, ಬಹಿಷ್ಕಾರಗಳ ಅಧಿವೇಶನವಾಗಿಯೇ ಉಳಿದು ವಿನಾಕಾರಣ ಸಾರ್ವಜನಿಕ ಹಣದ ಪೋಲಿಗಷ್ಟೇ, ಕಾಂಗ್ರೆ-ಬಿಜೆಪಿಗಳ ರಾಜಕೀಯ ಪ್ರಚಾರಗಳಿಗಷ್ಟೇ ಸೀಮಿತವಾಗುಳಿದಿರುವುದು ದುರದೃಷ್ಟಕರ.

ಮುಖ್ಯಮಂತ್ರಿ ದೇವೇಗೌಡರು ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ 5 ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಬಿಡುಗಡೆ ಮಾಡಿದ್ದರ ವಿರುದ್ಧ ಕಾಂಗ್ರೆ-ಬಿಜೆಪಿ ಶಾಸಕರು, ವಾಟಾಳ್ ಪಕ್ಷ ರೈತ ಸಂಘದ ಶಾಸಕರೊಡನೆ ಸೇರಿ ಹತ್ತು ದಿವಸ ಮೇಲ್ಪಟ್ಟು ವಿಧಾನಸಭೆ, ವಿಧಾನ ಪರಿಷತ್ತುಗಳ ಕಾರ್ಯಕಲಾಪಗಳಿಗೆ ಅಡ್ಡಿ -ಆತಂಕಗಳನ್ನುಂಟುಮಾಡಿ, ಅತಿಮಹತ್ವದ ಬರಗಾಲ ಪರಿಸ್ಥಿತಿ, ಅದಕ್ಕೆ ಪರಿಹಾರದ ಕುರಿತು ಚರ್ಚೆ ಮಾಡಲಿಕ್ಕೆ ಅವಕಾಶಮಾಡಿಕೊಡದೆ ಮಹಾಪರಾಧ ಮಾಡಿದರು.

ಅಧಿಕಾರದಲ್ಲಿದ್ದಾಗ ತಾವೇ ಕಾವೇರಿ ಟ್ರಿಬ್ಯೂನಲ್ಲಿಗೆ ಮಾಡಿದ 'ಸಂಕಷ್ಟ ಪರಿಸ್ಥಿತಿಯ ಸೂತ್ರ"ದ ಆಧಾರದಲ್ಲಿ ದೇವೇಗೌಡರು ವರ್ತಿಸಿರುವಾಗ ಕಾಂಗ್ರೆ ಶಾಸಕರು ಬಿಜೆಪಿ ಜೊತೆ ಸೇರಿಕೊಂಡರು. ಅಷ್ಟರಿಂದ ಬುದ್ಧಿ ಕಲಿಯದೆ ರಾಜಕೀಯ ಲಾಭಕ್ಕಾಗಿ ಯಡಿಯೂರಪ್ಪನವರೂ ಬಿಜೆಪಿ ಶಾಸಕರು ದೇವೇಗೌಡ ಸರಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವಾಗ ಮುಖ್ಯಮಂತ್ರಿಯವರ ಕಚೇರಿಯನ್ನು ಅವರ ಗೈರುಹಾಜರಿಯಲ್ಲಿ ಅವರ ಮಗ ದುರುಪಯೋಗಿ ಪಡಿಸಿಕೊಳ್ಳುತ್ತಾರೆಂಬ ಗಂಭೀರ ಆರೋಪ ಹೊರಿಸಿ, ಅದಕ್ಕೆ ಸಂಬಂಧಪಟ್ಟದೆನ್ನಲಾದ ದಾಖಲೆಗಳನ್ನು ವಿಧಾನಪರಿಷತ್ ಅಧ್ಯಕ್ಷರಿಗೆ ಕೊಟ್ಟು, ಆ ದಾಖಲೆಗಳು ನಂಬಲರ್ಹವಲ್ಲೆಂದು ನಿರ್ಣಯಕೊಟ್ಟ ನಂತರ ಪತ್ರಿಕಾ ಹೇಳಿಕೆಯಲ್ಲಿ ಅದನ್ನು ಖಂಡಿಸಿ ತನ್ನ ವಾದವೇ ಸರಿಯೆಂದು ವಿಧಾನ ಸಭೆಯಲ್ಲಿ ಪಟ್ಟು ಹಿಡಿದು ಕಾರ್ಯಕಲಾಪಗಳು ನಡೆಯದಂತೆ ಮಾಡಿದಾಗಲೂ ಕಾಂಗ್ರೆ ಶಾಸಕರು ಜನತಾದಳ ಸರಕಾರವನ್ನು ವಿರೋಧಿಸಬೇಕೆಂಬ ಒಂದೇ ಒಂದು ಕ್ಷುಲ್ಲಕ ಕಾರಣಕ್ಕಾಗಿ ಬಿಜೆಪಿ ಜೊತೆ ಸೇರಿಕೊಂಡಿದ್ದು ರಾಜಕೀಯ ಆತ್ಮಹತ್ಯೆಯೇ ಅಲ್ಲದೆ ಮತ್ತೇನು?

ಅದರ ಬೆನ್ನ ಹಿಂದೆಯೇ ಭುಗಿಲೆದ್ದ ರಾಜ್ಯದ ವಸತಿ ಮತ್ತು ಗ್ರಾಮೀಣಾಭಿವೃದ್ಧಿ ಕಾರ್ಯದರ್ಶಿ ವಾಸುದೇವನ್ ಅವರಿಗೆ ಸುಪ್ರೀಂ ಕೋರ್ಟು ನೀಡಿದ ಜೈಲು ಶಿಕ್ಷೆ, ಅದಕ್ಕೇನುಸಾರ ಅವರು ಜೈಲು ಶಿಕ್ಷೆ ಅನುಭವಿಸಬೇಕಾಗಿ ಬಂದಿರುವ ಪ್ರಶ್ನೆಯಲ್ಲಿ ಕೂಡಾ ಕಾಂಗ್ರೆ-ಬಿಜೆಪಿ ಶಾಸಕರು ಒಟ್ಟಾಗಿ ಒಂದೇ ಪಕ್ಷಕ್ಕೆ ಸೇರಿದವರೆಂಬಂತೆ ಒಂದೆಡೆ ಸೇರಿ, ಒಮ್ಮತದ ನಿರ್ಣಯ ಕೈಗೊಂಡು, ದೇವೇಗೌಡ ಸರ್ಕಾರದ ವಿರುದ್ಧ ರಾಜ್ಯಪಾಲರಿಗೆ ಒಟ್ಟಿಗೆ ಮನವಿ ಸಲ್ಲಿಸಿ ಮುಖ್ಯಮಂತ್ರಿ ದೇವೇಗೌಡರು ಸದನದಲ್ಲಿ ನೀಡಿದ್ದ ಭರವಸೆಯನ್ನು ಈಡೇರಿಸಲು ಈಗ ಒಪ್ಪದಿರುವುದರಿಂದ, ರಾಜ್ಯಪಾಲರು ಅವುಗಳನ್ನು ಪರಿಶೀಲಿಸಿ, ತನಿಖಾ ಆಯೋಗದ ಕಾಯ್ದೆಯಡಿ ಈ ಪ್ರಕರಣವನ್ನು ತನಿಖೆಗೆ ಒಪ್ಪಿಸಲು ಆದೇಶ ನೀಡಬೇಕೆಂದು ಕೋರಿದ್ದಾರೆ. ಅಷ್ಟೆ ಅಲ್ಲದೆ ಈ ಬಾರಿಯ ಉಳಿದ ಅಧಿವೇಶನದ ಕಲಾಪಗಳನ್ನು ಬಹಿಷ್ಕರಿಸಲು ನಿರ್ಧರಿಸಿದ್ದಾರೆ.

ಅದರಂತೆ ಬಹಿಷ್ಕರಿಸಿದ್ದಾರೆ. ವಿರೋಧ ಪಕ್ಷಗಳು ವಿಧಾನಸಭೆಯಲ್ಲಿ ಬಹಿಷ್ಕರಿಸುವುದಾಗಲೀ, ಧರಣಿ ನಡೆಸುವುದಾಗಲೀ ರಾಜ್ಯಪಾಲರಿಗೆ ಮನವಿ ಒಪ್ಪಿಸುವುದಾಗಲೀ, ಸಂವಿಧಾನಾತ್ಮಕವಾಗಿ ತಪ್ಪೇನಿಲ್ಲ. ಅದು ಅವರವರ ಹಕ್ಕು ಪ್ರತಿಪಾದನೆಗೆ ಅಭ್ಯಂತರವಿಲ್ಲ. ಇಲ್ಲಿ ಬಂದಿರುವುದು ಬರೇ ಹಕ್ಕು ಪ್ರತಿಪಾದನೆ ಮಾತ್ರವಲ್ಲ.

ಕಾಂಗ್ರೆ ಪಕ್ಷದವರು, ರೈತ ಸಂಘ, ವಾಟಾಳ್ ಪಕ್ಷಗಳ ಜೊತೆ ಬಿಜೆಪಿಯೊಡನೆ ಸೇರಿ ಅತ್ಯಂತ ಉತ್ಸಾಹದಿಂದ ರಾಜಕೀಯವಾಗಿಯೂ ಸೈದ್ಧಾಂತಿಕವಾಗಿಯೂ ಯಾವುದೇ ಭಿನ್ನಾಭಿಪ್ರಾಯವೇ ಇಲ್ಲವೆಂಬ ರೀತಿಯಲ್ಲಿ ವೀರಪ್ಪಮೊಯಿಲಿ, ಮಲ್ಲಿಕಾರ್ಜುನ ಖರ್ಗೆ ಮತ್ತು ಯಡಿಯೂರಪ್ಪನವರು ವರ್ತಿಸುತ್ತಿರುವುದು, ಮಾತಾಡುತ್ತಿರುವುದು ಪ್ರತಿಪಾದಿಸುತ್ತಿರುವಾಗ ನಮ್ಮ ರಾಜ್ಯದಲ್ಲಿ ಕಾಂಗ್ರೆ ರಾಜಕೀಯ ಎಷ್ಟು ಕೊಳೆತು ನಾರುತ್ತಿದೆಂಬುದನ್ನು ಕಾಣಬಹುದು. ಬಿಜೆಪಿಯವರಂತೆಯೇ ವರ್ತಿಸುತ್ತಿರುವ ಆ ಮೂಲಕ ಬಿಜೆಪಿಗೆ ರಾಜಕೀಯ ಪ್ರಾಶಸ್ತ ನೀಡಿ ತನ್ನ ಸ್ವತಂತ್ರ ಅಸ್ತಿತ್ವಕ್ಕೆ ತಿಲಾಂಜಲಿ ನೀಡುತ್ತಿರುವ ಕಾಂಗ್ರೆ ಶಾಸಕಾಂಗ ಪಕ್ಷಕ್ಕೆ ಕೆ.ಪಿ.ಸಿ.ಸಿ.ಯ ಹೊಸ ಅಧ್ಯಕ್ಷರಾದ ಡಿ.ಕೆ. ನಾಯ್ಕರ್ ಕೂಡ ಎಚ್ಚರಿಕೆ ನೀಡುವಲ್ಲಿ ಹಿಂದೆ ಬಿದ್ದಿದ್ದಾರೆ. ಕಾಂಗ್ರೆ ಶಾಸಕಾಂಗ ಪಕ್ಷದಲ್ಲಿಯೇ ವಾಸುದೇವನ್ ಪ್ರಕರಣದ ಕುರಿತು ಇರುವ ಭಿನ್ನಾಭಿಪ್ರಾಯ ವಿಧಾನಸಬೆಯಲ್ಲಿ ಕಾಂಗ್ರೆನ ಹಿರಿಯ ಸದಸ್ಯ ಹಾರ್ನಹಳ್ಳಿ ರಾಮಸ್ವಾಮಿಯವರು ಸುಪ್ರೀಂ ಕೋರ್ಟಿನ ತೀರ್ಪನ್ನು ಪ್ರಶ್ನಿಸುವಂತೆ ಮತ್ತು ಮುಖ್ಯಮಂತ್ರಿ ದೇವೇಗೌಡರಿಗೆ ಅನುಕೂಲವಾಗುವ ರೀತಿಯಲ್ಲಿ ವಾದ ಮಂಡಿಸುತ್ತಿದ್ದಾರೆಂದು ಮೂರ್ತಿ ಮತ್ತು ಓಂಪ್ರಕಾಶ್ ಕಣಗಲಿ ಅವರು ಸಭಾತ್ಯಾಗ ಮಾಡಿದಾಗಲೇ ಬಹಿರಂಗವಾಗಿದೆ.

ರಾಜ್ಯದ ಕಾಂಗ್ರೆ ಶಾಸಕಾಂಗ ಪಕ್ಷದ ನಡವಳಿಕೆ ತಮ್ಮ ಪಕ್ಷಕ್ಕೆ ಮಾರಕವಾಗಲಿದೆಂಬ ಭೀತಿ ಎಐಸಿಸಿ. ಅಧ್ಯಕ್ಷರಾದ, ಪ್ರಧಾನ ಮಂತ್ರಿಯಾದ ನರಸಿಂಹರಾಯರಲ್ಲಿ ಉಂಟಾದಂತೆ ಕಂಡು ಬರುತ್ತಿದೆ. ವಾಸುದೇವನ್ ಪ್ರಕರಣವನ್ನು ಮುಂದಕ್ಕೊಯ್ಯಬಾರದೆಂಬ ಆದೇಶ ಅವರಿಂದ ಬಂದಿದೆಯಂತೆ. ಇದರಿಂದಾಗಿ ಕಾಂಗ್ರೆ ಶಾಸಕಾಂಗ ಪಕ್ಷ ಗೊಂದಲಕ್ಕೀಡಾದಂತೆ ಕಂಡು ಬರುತ್ತದೆ. ವಿಧಾನಪರಿಷತ್ತಿನಲ್ಲಿ ಟಿ.ಎನ್. ನರಸಿಂಹ ಮೂರ್ತಿಯವರು ವಾಕ್ ಔಟ್ ಮಾಡುತ್ತೇವೆಂದು ಹೇಳುವಾಗ ಬೇರೆ ಸದಸ್ಯರು ಬಹಿಷ್ಕಾರ ಹಾಕುತ್ತೇವೆಂದು ಹೇಳಿ ಹೊರಗೆ ನಡೆದರು. ವಿಧಾನಸಭೆಯಲ್ಲಿಯೂ ಇದೇ ರೀತಿಯಾಗಿ ಕೊನೆಗೆ ಬಹಿಷ್ಕಾರವೇ ನಡೆಯಿತು.

ವಾಸುದೇವನ್ ಪ್ರಕರಣಕ್ಕೆ ಹಿಂದಿನ ಸರಕಾರ ಹಾಗೆಯೇ ಇಂದಿನ ಸರಕಾರವೂ ಕಾರಣವಾಗಿದೆಂದರೆ ತಪ್ಪಾಗಲಾರದು. ಈ ಪ್ರಕರಣದ ಕುರಿತು ತನಗೆ ಗೊತ್ತೇ ಇರಲಿಲ್ಲೆಂದು ದೇವೇಗೌಡರು ಹೇಳಿರುವುದನ್ನು ನೋಡುವಾಗ ರಾಜ್ಯದ ಆಡಳಿತೆ ಎಷ್ಟು ಕುಸಿದಿದೆ, ಇಂತಹ ಮಹತ್ವದ ವಿಷಯಗಳೂ ಯಾರ ಗಮನಕ್ಕೆ ಬಾರದೆ ಉಳಿದಿರುತ್ತವೆಂಬುದನ್ನು ನೋಡುವಾಗ ಬಡಜನ ಸಲ್ಲಿಸುವ ಸಾವಿರಾರು ಅರ್ಜಿಗಳ ಗತಿಯೇನೆಂಬುದು ಸ್ಪಷ್ಟವಾಗುತ್ತದೆ.

ಮುಂಬರುವ ಲೋಕಸಭೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಬಂಡವಾಳಶಾಹಿ ಪಕ್ಷಗಳು ಚುನಾಯಿತ ವೇದಿಕೆಗಳನ್ನು ತಮ್ಮ ಸ್ವಂತ ಹಿತಕ್ಕಾಗಿ ಯಾವ ರೀತಿ ಬಳಸಿಕೊಳ್ಳುತ್ತಿವೆ, ಯಾವ ರೀತಿ ಸಾರ್ವಜನಿಕ ಹಣಪೋಲು ಮಾಡುತ್ತಿವೆ, ಯಾವ ರೀತಿ ತಮ್ಮ ರಾಜಕೀಯ ಧೋರಣೆಗಳನ್ನೇ ಮರೆತು ಪ್ರಚಾರ ಪಡೆಯಲು, ರಾಜಕೀಯ ಲಾಭಗಳಿಸಲು ತಮ್ಮ ರಾಜಕೀಯ ಶತ್ರುಗಳ ಜೊತೆಯಲ್ಲಿ ಕೈಗೂಡಿಸಿ ಆಟ ಆಡುತ್ತಿವೆ ಎಂಬ ಅಂಶ ಈ ಸಲದ ವಿಧಾನಸಬೆ, ವಿಧಾನಪರಿಷತ್ ಅಧಿವೇಶನಗಳಲ್ಲಿ ಸ್ಪಷ್ಟವಾಗಿ ಕಂಡುಬಂದಿದೆ.

ರಾಜಕೀಯ ಪಕ್ಷಗಳ, ಶಾಸಕರ ಇಂಥ ಅಪವಿತ್ರ, ಜನ ವಿರೋಧಿ ನಡವಳಿಕೆಗಳನ್ನು ಜನತೆ ಪ್ರತಿಭಟಿಸಬೇಕು. ಶಾಸಕರ, ರಾಜಕೀಯ ಪಕ್ಷಗಳೂ ಸರಿಯಾಗಿ ವರ್ತಿಸುವಂತೆ ಬುದ್ಧಿಕಲಿಸಬೇಕು. ❑

ಸೆಪ್ಟೆಂಬರ್ 15ರಂದು ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಮೇರೆಗೆ ರಾಜ್ಯಾದ್ಯಂತ ಧರಣಿ, ಸತ್ಯಾಗ್ರಹಗಳು ನಡೆದವು. ಬೆಂಗಳೂರಿನಲ್ಲಿ ನಡೆದ ಧರಣಿಯ ಒಂದು ದೃಶ್ಯ. ವರದಿಗಳು ಪುಟ 3ರಲ್ಲಿ



ಚಂದ್ರಸ್ವಾಮಿ ವಿರುದ್ಧ ಸರಿಯಾದ ತನಿಖೆ ನಡೆಯಬೇಕು

-ಪೊಲಿಟ್ ಬ್ಯೂರೋ

ಕ್ರಿಮಿನಲ್ ಆರೋಪಕ್ಕೆ ಗುರಿಯಾಗಿರುವ ಓಂಪ್ರಕಾಶ್ ಶ್ರೀವಾಸ್ತವ ಮುಂಬೈ ಸ್ಫೋಟದ ಮೊಕದ್ದಮೆಯಲ್ಲಿ ಪ್ರಧಾನ ವ್ಯಕ್ತಿಯೆಂದು ಶಂಕಿಸಲ್ಪಟ್ಟಿರುವ ಮಾಫಿಯಾ ದೊರೆ ದಾವೂದ್ ಇಬ್ರಾಹಿಂ ಮತ್ತು ಚಂದ್ರಸ್ವಾಮಿಗೆ ಸಂಪರ್ಕ ಇದೆಯೆಂದು ಹೇಳಿರುವ ಸಂಗತಿ ಆಘಾತಕಾರಿ, ಇದು ಬಹಳ ಗಂಭೀರ ಆತಂಕದ ವಿಷಯ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಹಿಂದೆಯೂ ಚಂದ್ರಸ್ವಾಮಿಯ ಮೇಲೆ ಹಲವು ಇಂತಹ ಅವ್ಯವಹಾರಗಳ ಆಪಾದನೆಗಳಿದ್ದವು. ಹಲವಾರು ಕೇಂದ್ರ ಮಂತ್ರಿಗಳೊಡನೆ ಆತನ ಸಂಪರ್ಕಗಳಿಂದಾಗಿ ತನಿಖಾ ದಳಗಳು ಆತನ ವಿರುದ್ಧ ಕ್ರಮ ಜರುಗಿಸಲು ಸಾಧ್ಯವಾಗಿರಲಿಲ್ಲ ಎಂದು ಕಾಣಿಸುತ್ತದೆ ಎಂದಿರುವ ಪೊಲಿಟ್ ಬ್ಯೂರೋ ಚಂದ್ರಸ್ವಾಮಿಯ ವಿರುದ್ಧ ಸರಿಯಾದ ತನಿಖೆ ನಡೆಸಿ ತಕ್ಕ ಶಿಕ್ಷೆ ನೀಡಬೇಕು ಎಂದುಆಗ್ರಹಪಡಿಸಿದೆ.

ಚಂದ್ರಸ್ವಾಮಿಯ ಬಂಧನದ ಆಜ್ಞೆ ಹೊರಡಿಸಿದ ಗೃಹ ರಾಜ್ಯ ಮಂತ್ರಿ ರಾಜೇಶ್ ಪೈಲಟ್ ರನ್ನು ಆ ಸ್ಥಾನದಿಂದ ವರ್ಗಾಯಿಸಿದ್ದು, ಕಾಂಗ್ರೆ ಎಂ.ಪಿ.ಗಳು ಪೈಲಟ್ ಕ್ರಮದ ಪರ-ವಿರುದ್ಧ ಕಿತ್ತಾಡುತ್ತಿರುವುದು, ಆಳುವ ಪಕ್ಷದಲ್ಲಿ ಈ ವ್ಯಕ್ತಿ ಹೊಂದಿರುವ ಪ್ರಭಾವವನ್ನು ತೋರಿಸುವ ಜತೆಗೇ, ಆಳುವ ಪಕ್ಷದ ಮುಖಂಡರ ನಿಜಸ್ವರೂಪವನ್ನು ಮತ್ತೊಮ್ಮೆ ಬಯಲಿಗೆ ತಂದಿದೆ.

ಕಾಂಗ್ರೆಗೊಂದು ಒರೆಗಲ್ಲು: ಸರಕಾರ ಚಂದ್ರಸ್ವಾಮಿಯ ವಿರುದ್ಧ ಮೊಕದ್ದಮೆಯನ್ನು ಕೈಬಿಟ್ಟರೆ ರಾಜಕೀಯವನ್ನು ಸ್ಥಬ್ಧಗೊಳಿಸಲು ಅವರ ಬದ್ಧತೆಯ ಮಟ್ಟ ಏನು ಎಂದು ತೋರಿಸಿಕೊಟ್ಟಂತಾಗುತ್ತದೆ -ಎಂದು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ನುಡಿದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್‌ರವರು ರಾಜಕೀಯದ ಅಪರಾಧೀಕರಣದ ವಿರುದ್ಧ ಹೋರಾಡುವಲ್ಲಿ ಕಾಂಗ್ರೆಸ್ ಸರಕಾರ ಎಷ್ಟು ಗಂಭೀರ ಆಸಕ್ತಿ ಹೊಂದಿದೆ ಎಂಬುದಕ್ಕೆ ಇದೊಂದು ಒರೆಗಲ್ಲು ಎಂದಿದ್ದಾರೆ. ನಿಜವಾಗಿ ಈಗಾಗಲೇ 'ಧರ್ಮ ಪುರುಷ'ನ ವಿರುದ್ಧ ಕ್ರಮಕೈಗೊಳ್ಳುವಲ್ಲಿ ಆಗಿರುವ ವಿಳಂಬ ಸರಕಾರದ ನಿಜಸ್ವರೂಪವನ್ನು ಪರಿಣಾಮಕಾರಿಯಾಗಿ ಬಯಲಿಗೆಳೆದಿದ್ದಾರೆ ಎಂದು ಅವರು ಹೇಳಿದ್ದಾರೆ.

ದಾವೂದ್ ಇಬ್ರಾಹಿಂ ಮತ್ತಿತರ ಮಾಫಿಯಾ ದೊರೆಗಳೊಂದಿಗೆ ಚಂದ್ರಸ್ವಾಮಿಯ ಸಂಪರ್ಕಗಳ ಬಗ್ಗೆ ತನಿಖೆ ನಡೆಸಬೇಕೆಂದು ಸಿಪಿಐ(ಎಂ) ಹಿಂದಿನಿಂದಲೂ ಒತ್ತಾಯ ಮಾಡುತ್ತಲೇ ಬಂದಿದೆ, ಬಹುಶಃ ಮೇಲಟ್ಟದಲ್ಲಿರುವ ಪ್ರಭಾವೀ ವ್ಯಕ್ತಿಗಳಿಂದ ಆತನಿಗೆ 'ರಕ್ಷಣೆ' ದೊರೆತಿರಬಹುದು ಎಂದು ಅವರು ಅಭಿಪ್ರಾಯಪಟ್ಟರು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರು ಪೈಲಟ್‌ರನ್ನು ವರ್ಗಾಯಿಸಿರುವುದನ್ನು ಟೀಕಿಸುತ್ತಾ ಅವರು ಇದರಿಂದ ನಿಜ ಹೇಳುವ ಧೈರ್ಯ ತೋರಿದಕ್ಕೆ ಅವರನ್ನು ಶಿಕ್ಷಿಸಲಾಗಿದೆ ಎಂಬ ಅರ್ಥ ಬರುವಂತಾಗಿದೆ ಎಂದಿದ್ದಾರೆ. ❑

ಇತಿಹಾಸದ ಪುಟಗಳಿಂದ

ಈ ಶತಮಾನದಲ್ಲಿ ರಾಷ್ಟ್ರೀಯ ವಿಮೋಚನೆ ಮತ್ತು ಸಾಮಾಜಿಕ ಬದಲಾವಣೆಯ ಹೋರಾಟಗಳಿಗೆ ಸ್ಫೂರ್ತಿ ತುಂಬಿದ ಚಾರಿತ್ರಿಕ ಘಟನೆಗಳು ನಾಲ್ಕು - ಅಕ್ಟೋಬರ್ ಕ್ರಾಂತಿ, ಫ್ಯಾಸಿಸಂ ಮೇಲೆ ವಿಜಯ, ಚೀಣೀ ಕ್ರಾಂತಿ ಹಾಗೂ ವಿಯೆಟ್ನಾಂ ಕ್ರಾಂತಿ. ವಿಯೆಟ್ನಾಂ ಕ್ರಾಂತಿ 50 ವರ್ಷಗಳನ್ನು ಪೂರೈಸಿರುವ ಸಂದರ್ಭದಲ್ಲಿ ಒಂದು ನೆನಪು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರಿಂದ

ವಿಯೆಟ್ನಾಂ ಕ್ರಾಂತಿಗೆ 50 ವರ್ಷ

"ಫ್ರೆಂಚರು ಓಡಿಹೋಗಿದ್ದಾರೆ, ಜಪಾನೀಯರು ಶರಣಾಗಿದ್ದಾರೆ, ಸಾಮ್ರಾಟ ಸಿಂಹಾಸನ ಬಿಟ್ಟೋಡಿದ್ದಾನೆ. ನಮ್ಮ ಜನ ಸುಮಾರು ಒಂದು ಶತಮಾನ ತಮ್ಮನ್ನು ಕಟ್ಟಿಟ್ಟಿದ್ದ ಸಂಕೋಲೆಯನ್ನು ಮುಗಿದೆಸೆದಿದ್ದಾರರೆ, ತಮ್ಮ ಪಿತೃ ಭೂಮಿಗೆ ಸ್ವಾತಂತ್ರ್ಯ ಗಳಿಸಿದ್ದಾರೆ" ಇದು ಐವತ್ತು ವರ್ಷಗಳ ಹಿಂದೆ ಅಂದರೆ ಸೆಪ್ಟೆಂಬರ್ 2, 1945ರಂದು ಸೈಗಾನ್ ನಗರದಿಂದ ಇಡೀ ವಿಯೆಟ್ನಾಂ ನಲ್ಲಿ ಅಣುರಣನಗೊಂಡ ಘೋಷಣೆ ವಿಯೆಟ್ನಾಂ ಕ್ರಾಂತಿಯ ನೇತಾರ ಕಾಂ. ಹೋಚಿಮಿನ್ಹರು ಮುಂದುವರಿದು -"ವಿಯೆಟ್ನಾಂಗೆ ಸರ್ವತಂತ್ರ ಸ್ವತಂತ್ರವಾಗಿರುವ ಹಕ್ಕಿದೆ. ನಿಜವೆಂದರೆ ಅದು ಈಗಾಗಲೇ ಸ್ವತಂತ್ರವಾಗಿದೆ. ತಮ್ಮ ಸ್ವಾತಂತ್ರ್ಯ ಮತ್ತು ಸ್ವಾಧೀನತೆಯನ್ನು ಕಾಯ್ದುಕೊಳ್ಳಲು ತಮ್ಮ ತನ-ಮನ-ಧನ ಅರ್ಪಿಸಲು ವಿಯೆಟ್ನಾಂ ನ ಜನತೆ ದೃಢ ನಿರ್ಧಾರ ಮಾಡಿದ್ದಾರೆ" ಎಂದರು.

ಒಂದು ವಾರದ ಹಿಂದೆ ಅಂದರೆ ಆಗಸ್ಟ್ 25, 1945 ರಂದು ದೊರೆ ಬಾವೊ ದಾಯ್ ಸಿಂಹಾಸನ ಬಿಟ್ಟೋಡಿದಾಗ ಸೈಗಾನ್ ಚೌಕದಲ್ಲಿ ಹತ್ತು ಲಕ್ಷ ವಿಯೆಟ್ನಾಮೀಯರು ನೆರೆದು 80 ವರ್ಷಗಳ ವಸಾಹತುಶಾಹೀ ಪ್ರಾಬಲ್ಯ ಕೊನೆಗೂ ಕೊನೆಗೊಂಡಿತು ಎಂದು ಕುಣಿದಾಡಿದರು.

ಹೋರಾಟದ ಇತಿಹಾಸ

ಏಪ್ರಿಲ್ 15,1847ರಂದು ಐದು ಶಸ್ತ್ರಸಜ್ಜಿತ ಫ್ರೆಂಚ್ ನೌಕೆಗಳು ವಿಯೆಟ್ನಾಮಿನ ಬಂದರು ಪಟ್ಟಣ ದಾನಾಂಗ್ ಮೇಲೆ ಧಾಳಿ ನಡೆಸಿದವು. ಆದರೆ ಫ್ರೆಂಚ್ ಸಾಮ್ರಾಜ್ಯಶಾಹಿಗಳು ಕೊನೆಗೂ ವಿಯೆಟ್ನಾಂನ್ನು ವಸಾಹತುಶಾಹೀ ಶೋಷಣೆಗೆ ಒಳಪಡಿಸಿದ್ದು 18ರಲ್ಲಿ. ವಿಯೆಟ್ನಾಂ ಜನತೆಯ ಧೀರ ಪ್ರತಿರೋಧ ಹಾಗಿತ್ತು. ಕೊನೆಗೆ ಫ್ರೆಂಚರ ಬಾರೀ ಮುಂದುವರಿದ ಶಸ್ತ್ರಾಸ್ತ್ರ, ಯುದ್ಧ ತಂತ್ರದ ಎದುರು ಶರಣಾಗಿದ್ದು ವಿಯೆಟ್ನಾಮೀ ಜನತೆಯಲ್ಲ, ಅಲ್ಲಿಯ ರಾಜಮನೆತನ. ರಾಜಮನೆತನ ಕೈಕೊಟ್ಟರೂ ಜನರ ಪ್ರತಿರೋಧ ನಿಲ್ಲಲಿಲ್ಲ. 1896ರಲ್ಲಷ್ಟೇ ಇಡೀ ವಿಯೆಟ್ನಾಮನ್ನು ವಶಪಡಿಸಿ ಕೊಳ್ಳುವುದು ಫ್ರೆಂಚರಿಗೆ ಸಾಧ್ಯವಾದದ್ದು.

ಮೊದಲ ಮಹಾಯುದ್ಧ ಮುಗಿಯುತ್ತಿದ್ದಂತೆ ಫ್ರೆಂಚರ ದಮನವೂ ತೀವ್ರಗೊಂಡಿದ್ದು ಇದರಿಂದಾಗಿ ವಿಯೆಟ್ನಾಮೀನ ಸ್ವಾತಂತ್ರ್ಯ ಹೋರಾಟ ತಣ್ಣಗಾಗುವ ಬದಲು ಇನ್ನಷ್ಟು ವ್ಯಾಪಕಗೊಂಡಿತು. ಹೊಸ ಸಾಮಾಜಿಕ ಶಕ್ತಿಗಳು ರಂಗ ಪ್ರವೇಶಿಸಿದವು. ಫ್ರೆಂಚರ ವಸಾಹತುಶಾಹೀ ದವಂನದೊಂದಿಗೆ ಅದಕ್ಕೆ ವಿರೋಧವೂ ತೀವ್ರಗೊಂಡಿತು. ಅತ್ತ ಅಂತರ್‍ರಾಷ್ಟ್ರೀಯ ರಂಗದಲ್ಲಿ ಹೊಸ ಯುಗ ಆರಂಭಿಸಿದ ಅಕ್ಟೋಬರ್ ಕ್ರಾಂತಿಯಿಂದ ವಸಾಹತುಗಳಲ್ಲಿ ರಾಷ್ಟ್ರೀಯ ವಿಮೋಚನೆಯ ಹೊಸ ಸಾಧ್ಯತೆಗಳು ತೆರೆದುಕೊಂಡವು.

ಈ ವೇಳೆಗೆ ವಿಯೆಟ್ನಾಂ ಸ್ವಾತಂತ್ರ್ಯ ಆಂದೋಲನದಲ್ಲಿ ಮೂರು ಪ್ರವಾಹಗಳಿದ್ದವು. ಒಂದು ಬಂಡವಾಳಶಾಹೀ ಪ್ರಜಾಪ್ರಭುತ್ವದ ಆಲೋಚನಾ ಧಾಟಿಯೆದ್ದು - ಕ್ರಮೇಣ ಪಾಳೆಯಗಾರೀ ವ್ಯವಸ್ಥೆಯನ್ನು ರದ್ದುಪಡಿಸಿ ವಸಾಹತುಶಾಹಿಗಳ ಆಳ್ವಿಕೆಯೊಳಗೇ ಪ್ರಜಾಪ್ರಭುತ್ವ ಹಕ್ಕುಗಳನ್ನು ಗೆದ್ದುಕೊಳ್ಳಬೇಕೆಂದು ವಾದ ಮಾಡುತ್ತಿದ್ದ ದಾರಿ. ಎರಡನೆಯದ್ದು ಅಕ್ಟೋಬರ್ ಕ್ರಾಂತಿಯಿಂದ ಪ್ರೇರಣೆ ಪಡೆದ ದಾರಿ. ಹೊಚಿಮಿನ್ಹ್ ಅವರ ಅತ್ಯಂತ ಪ್ರಮುಖ ಪ್ರತಿನಿಧಿಯಾಗಿದ್ದರು. ಫ್ರಾನ್ಸಿನಲ್ಲಿದ್ದ ಇವರು 1924ರಲ್ಲಿ ಕ್ಯಾಂಟನ್ ಗೆ ಬಂದು ಒಂದು ಕ್ರಾಂತಿಕಾರಿ ಸಂಘಟನೆ ಕಟ್ಟಿದರು. 'ಕ್ರಾಂತಿಕಾರಿ ಮಾರ್ಗ' ಎಂಬ ಇವರ ಕೃತಿ ವಿಯೆಟ್ನಾಮೀ ಜನಮಾನಸದ ಮೇಲೆ ಭಾರೀ ಪ್ರಭಾವ ಬೀರಿತು. 1929ರಲ್ಲಿ ಮೂಡಿಬಂದಿದ್ದ ಮೂರು ಕಮ್ಯುನಿಸ್ಟ್ ವಿಚಾರಧಾರೆಯ ಗುಂಪುಗಳು ಸೇರಿ ಫೆಬ್ರವರಿ 3, 1930ರಂದು ವಿಯೆಟ್ನಾಮ್ ಕಮ್ಯುನಿಸ್ಟ್ ಪಕ್ಷ ಜನ್ಮತಾಳಿತು. ಪಕ್ಷ ಮೊತ್ತ ಮೊದಲ ಬಾರಿಗೆ ರಾಷ್ಟ್ರೀಯ ಪ್ರಶ್ನೆಯನ್ನು ರೈತ ಪ್ರಶ್ನೆಯೊಂದಿಗೆ ಬೆಸೆಯಿತು. ಫ್ರೆಂಚ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ, ರಾಷ್ಟ್ರೀಯ ಸ್ವಾತಂತ್ರ್ಯವನ್ನು ಮತ್ತೆ ಗಳಿಸಿಕೊಳ್ಳುವುದು, ಪಾಳೆಯಗಾರಿಕೆಯರ ವಿರುದ್ಧ ಹೋರಾಡಿ ರೈತರಿಗೆ ಭೂಮಿ ಕೊಡಿಸುವುದು- ಇವು ಈ ಪಕ್ಷ ತನ್ನ ಮುಂದಿಟ್ಟುಕೊಂಡ ಗುರಿಗಳನ್ನು ಕ್ರಾಂತಿಯ ಚಾಲಕ ಶಕ್ತಿಗಳೆಂದರೆ ಕೆಲವು ಧೀರ ವ್ಯಕ್ತಿಗಳಲ್ಲ - ರೈತ ಮತ್ತು ಕಾರ್ಮಿಕ ಜನಸಮೂಹಗಳು ಎಂದು ಈ ಪಕ್ಷ ಸಾರಿತು.

ಸಂಯುಕ್ತ ರಂಗದ ಕರೆ

ಎರಡನೇ ಮಹಾಯುದ್ಧದ ವೇಳೆಗೆ ಜಪಾನು ತೈವಾನ್ ದ್ವೀಪವನ್ನು ಆಕ್ರಮಿಸಿಕೊಂಡಿತು, ಅತ್ತ ಫ್ರಾನ್ಸ್ ನಲ್ಲಿ ಬಲಪಂಥೀಯ ಸರಕಾರ ಬಂದಾಗ ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷ ಫ್ಯಾಸಿಸ್ಟರೊಂದಿಗೆ ಫ್ರೆಂಚ್, ಬ್ರಿಟಿಶ್ ಆಳರಸರ ರಾಜೀ ನಿಲುವನ್ನು ಖಂಡಿಸುತ್ತಾ ಜಪಾನೀ ಆಕ್ರಮಣ ಎದುರಿಸಲು "ಇಂಡೋ ಚೀನಾ ಪ್ರಜಾಪ್ರಭುತ್ವ ರಂಗ' ಎಂಬ ಸಂಯುಕ್ತ ರಂಗ ರಚಿಸಲು ಕರೆ ನೀಡಿತು.

1940ರಲ್ಲಿ ವಿಯೆಟ್ನಾಂನಲ್ಲಿ ಫ್ರೆಂಚರ ಸೋಲಿನಿಂದಾಗಿ ವಸಾಹತುಶಾಹೀ ಆಳ್ವಿಕೆ ಜಪಾನೀಯರ ಕೈಗೆ ಬಂತು. ಆದರೆ 1941-45ರ ಅವಧಿಯಲ್ಲಿ ವಿಯೆಟ್ನಾಮೀ ಜನ ಫ್ರೆಂಚ್ ಮತ್ತು ಜಪಾನೀ ವಸಾಹುತಶಾಹಿಗಳ ಶೋಷಣೆ ಎದುರಿಸಬೇಕಾಯಿತು. ಇವರನ್ನು ಎದುರಿಸಲು ಗೆರಿಲ್ಲಾ ಪಡೆ ರಚಿಸಿಕೊಂಡಿತು. ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ದೇಶದ ಹಲವೆಡೆ ಬಂಡಾಯಗಳು ನಡೆಯಲಾರಂಭಿಸಿದವು.

ಮೇ 1941ರಲ್ಲಿ ನಡೆದ ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷದ 8ನೇ ಮಹಾಧಿವೇಶನ ಫ್ಯಾಸಿಸಂ-ವಿರೋಧಿ ಹೋರಾಟದ ಹಿನ್ನೆಲೆಯಲ್ಲಿ ವಿಯೆಟ್ನಾಂ ಕ್ರಾಂತಿ ನಡೆಸುವ ಕಣ್ಣೋಟವನ್ನು ಅಂಗೀಕರಿಸಿತು. ಮೊದಲು ರಾಷ್ಟ್ರೀಯ ವಿಮೋಚನೆ ನಡೆಯಬೇಕು ಎಂದು ಎಲ್ಲಾ ವರ್ಗಗಳ ಸಂಯುಕ್ತ ರಾಷ್ಟ್ರೀಯ ರಂಗ ರಚಿಸಲು ಮುಂದಾಯಿತು.

ಕಮ್ಯುನಿಸ್ಟ್ ಪಕ್ಷದ ಮುತುವರ್ಜಿಯಿಂದ ರಚನೆಗೊಂಡ 'ವಿಯೆಟ್ ಮಿನ್ಹ್' ಸಂಯುಕ್ತ ರಂಗ ಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆ ತಂದಿತು. ಬುದ್ಧಿ ಜೀವಿಗಳು ಮತ್ತು ಬಂಡವಾಳಶಾಹಿಗಳ ಒಂದು ವರ್ಗವೂ ವಿಮೋಚನಾ ಹೋರಾಟದಲ್ಲಿ ಧುಮುಕಿತು.

1945ರಲ್ಲಿ ಮಹಾಯುದ್ಧದಲ್ಲಿ ಫ್ಯಾಸಿಸ್ಟ್ ಅಕ್ಷಕೂಟದ ಸೋಲು ಸನ್ನಿಹಿತವಾದಾಗ ಫ್ರೆಂಚರು ವಿಯೆಟ್ನಾಂನಲ್ಲಿ ತಮ್ಮ ಆಳ್ವಿಕೆ ಉಳಿಸಿಕೊಳ್ಳುವ ಬಗ್ಗೆ ಯೋಚಿಸಲಾರಂಭಿಸಿದರು. ಆದರೆ ಜಪಾನೀಯರು ಅವರನ್ನು ಶಸ್ತ್ರಾಸ್ತ್ರಗಳನ್ನೆಲ್ಲಾ ಕಿತ್ತುಕೊಂಡು ಬಾವೊದಾಯ್ ಕೈಗೊಂಬೆ ಸರಕಾರವನ್ನು ಪ್ರತಿಷ್ಠಾಪಿಸಿದರು. ಈ ಹಿನ್ನೆಲೆಯಲ್ಲಿ ಸಭೆ ಸೇರಿದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಕ್ರಾಂತಿ ನಡೆಸಬಹುದಾದ ಸನ್ನಿವೇಶ ರೂಪುಗೊಳ್ಳುತ್ತದೆ ಎಂದಿತು. ಜನಸಮೂಹಗಳನ್ನು ಅಧಿಕಾರ ಕಸಿದುಕೊಳ್ಳುವ ಹೋರಾಟಕ್ಕೆ ಅಣಿಗೊಳಿಸಬೇಕೆಂದು ಕರೆ ನೀಡಿತು. ಅದರ ಪ್ರಕಾರ ಸಶಸ್ತ್ರ ಗೆರಿಲ್ಲಾ ಚಟುವಟಿಕೆಗಳನ್ನು ತೀವ್ರಗೊಳಿಸಲಾಯಿತು. ಕ್ರಾಂತಿಕಾರಿ ಪಡೆಗಳನ್ನು ಸೇರಿಸಿ ವಿಮೋಚನಾ ಸೇನೆ ವೋನುರಗ್‌ಯೆನ್ ಗಿಯಾಪ್‌ರವರ ನೇತೃತ್ವದಲ್ಲಿ ರಚನೆಗೊಂಡಿತು. ವಿವಿಧ ಹಂತಗಳಲ್ಲಿ ರಾಷ್ಟ್ರೀಯ ವಿಮೋಚನಾ ಸಮಿತಿಗಳನ್ನು ರಚಿಸಲಾಯಿತು ಜಪಾನೀ ಅಕ್ಕಿ ಭಂಡಾರಗಳನ್ನು ರೈತರು ವಶಪಡಿಸಿಕೊಳ್ಳಲಾರಂಭಿಸಿದರು. ಪಟ್ಟಣಗಳಲ್ಲಿ ರಾಜಕೀಯ ಚಟುವಟಿಕೆಗಳು ತೀವ್ರಗೊಂಡವು.

ಅಂತರ್‍ರಾಷ್ಟ್ರೀಯ ರಂಗದಲ್ಲಿನ ಬೆಳವಣಿಗೆಗಳೂ ಕ್ರಾಂತಿಕಾರೀ ಆಂದೋಲನಕ್ಕೆ ನೆರವಾದವು. ಜಪಾನೀಯರು ಶರಣಾಗಿ ಮಹಾಯುದ್ಧ ಮುಗಿಯುತ್ತಿದ್ದಂತೆ 'ವಿಯೆತ್ ಮಿನ್ಹ್' ಸಂಯುಕ್ತ ರಂಗದ ರಾಷ್ಟ್ರೀಯ ಸಮ್ಮೇಳನ ನಡೆದು ಮಿತ್ರ ಪಕ್ಷಗಳ (ಬ್ರಿಟನ್, ಅಮೇರಿಕಾ, ಫ್ರಾನ್ಸ್ ಇತ್ಯಾದಿ) ಪಡೆಗಳು ಜಪಾನೀಯರನ್ನು ನಿರಾಯುಧಗೊಳಿಸಲು ಆಗಮಿಸುವ ಮೊದಲೇ ಜಪಾನೀಯರಿಂದ ಹಾಗೂ ಕೈಗೊಂಬೆ ಸರಕಾರದಿಂದ ಅಧಿಕಾರ ಕಿತ್ತುಕೊಳ್ಳಬೇಕು ಎಂದು ನಿರ್ಧರಿಸಲಾಯಿತು.

ಹೊಚಿಮಿನ್ಹ್ ರವರ ನೇತೃತ್ವದಲ್ಲಿ ವಿಯೆಟ್ನಾಂ ಪ್ರಜಾಸತ್ತಾತ್ಮಕ ಗಣರಾಜ್ಯದ ತಾತ್ಕಾಲಿಕ ಸರಕಾರ ಏರ್ಪಟ್ಟು ಎಲ್ಲೆಡೆ ವಿಮೋಚನಾ ಹೋರಾಟ ಅಂತಿಮ ಘಟ್ಟ ತಲುಪಿತು. ಆಗಸ್ಟ್ 17, 1945ಲ್ಲಿ ಕೈಗೊಂಬೆ ಸರಕಾರದ ಬೆಂಬಲಾರ್ಥ ಏರ್ಪಾಟಾಗಿದ್ದ ಸಭೆ ವಿಯೆಟ್ ಮಿನ್ಹ್ ಪರವಾದ ಭಾರೀ ರ್‍ಯಾಲಿಯಾಗಿ ಪರಿವರ್ತನೆಗೊಂಡಿತು. ಆಗಸ್ಟ್ 19 ರಂದು ಒಂದು ಸಾರ್ವತ್ರಿಕ ಮುಷ್ಕರ ನಡೆಯಿತು. ಲಕ್ಷಾಂತರ ಜನ ಬೀದಿಗೆ ಬಂದದ್ದನ್ನು ಕಂಡ ಕೈಗೊಂಬೆ ಬಾವೊ ದಾಯ್ ಸರಕಾರ ರಾಜೀನಾಮೆ ನೀಡಿತು. ಆರಂಭದಲ್ಲಿ ಹೇಳುವಂತೆ ಆಗಸ್ಟ್ 25 ರಂದು 80 ವರ್ಷಗಳ ವಸಾಹತುಶಾಹೀ ಶೋಷಣೆ ಕೊನೆಗೊಂಡಿತು.

ಆದರೆ ಸಾಮ್ರಾಜ್ಯಶಾಹಿಯ ಒಂದು ವಿಭಾಗವಷ್ಟೇ ಮಣ್ಣುಮುಕ್ಕಿತು. ಎರಡನೇ ಮಹಾಯುದ್ಧದಲ್ಲಿ ಅದರ ಎದುರಿದ್ದ ಇನ್ನೊಂದು ಸಾಮ್ರಾಜ್ಯಶಾಹಿ ಬಣಕ್ಕೆ ವಿಯೆಟ್ನಾಮಿನಲ್ಲಿ ಕ್ರಾಂತಿಕಾರಿ ಸರ್ಕಾರ ಸ್ಥಾಪನೆಗೊಂಡದ್ದು ಹಿಡಿಸಲಿಲ್ಲ. ಫ್ರೆಂಚ್ ಸಾಮ್ರಾಜ್ಯಶಾಹಿಗಳ ನೆರವಿನಿಂದ ಅಮೇರಿಕನ್ ಸಾಮ್ರಾಜ್ಯಶಾಹಿ ವಿಯೆಟ್ನಾಮಿನ ದಕ್ಷಿಣ ಭಾಗದಲ್ಲಿ ಒಂದು ಕೈಗೊಂಬೆ ಸರಕಾರ ಸ್ಥಾಪಿಸಿ ವಿಯೆಟ್ನಾಮಿಯರ ಆಕಾಂಕ್ಷೆಗಳನ್ನು ಮಣ್ಣುಗೂಡಿಸುವ ಪ್ರಯತ್ನ ಆರಂಭಿಸಿತು. ಆದರೆ ಮೂರು ದಶಕದಗಳ ವಿಯೆಟ್ನಾಮೀಯರ ಧೀರ ಹೋರಾಟದ ನಂತರ ಕೊನೆಗೂ ವಿಯೆಟ್ನಾಮ್ ಮಾರ್ಚ್ 20, 1975ರಂದು ಸಂಪೂರ್ಣ ವಿಮೋಚನೆಗೊಂಡದ್ದು ಇತಿಹಾಸದ ಇತ್ತೀಚಿನ ಉಜ್ವಲ ಅಧ್ಯಾಯ.

"ದೇಶಪ್ರೇಮ"ದ ಉಪದೇಶ ನೀಡುವವರ ಪೂರ್ವಾಪರ - ಒಂದು ನಿರ್ದಶನ

ತಮ್ಮ 'ಹಿಂದುತ್ವ'ದ ವಿಚಾರವನ್ನು ಒಪ್ಪದವರ ಮತ್ತು ಈ ದೇಶದ ಅಲ್ಪಸಂಖ್ಯಾತರ ದೇಶಪ್ರೇಮವನ್ನೇ ಪ್ರಶ್ನಿಸುವ ಕಾವಿ ಕೂಟದ ಮಂದಿ ಸ್ವತಃ ಎಷ್ಟು ದೇಶಪ್ರೇಮಿಗಳು ಅಥವಾ ಅವರ 'ದೇಶಪ್ರೇಮ'ದ ಅರ್ಥವೇ ಬೇರೆಯಿರಬಹುದೇ? ಇತಿಹಾಸದ ದಾಖಲೆಗಳಿಂದ ಇತ್ತೀಚೆಗೆ ಬೆಳಕಿಗೆ ಬಂದ ಒಂದು ಘಟನೆಯ ಈ ನಿರ್ದರ್ಶನ ನೋಡಿ ನೀವೇ ನಿರ್ಧರಿಸಿ!

ಇಂದು 'ಮಹಾದೇಶ ಪ್ರೇಮಿ' ಎಂದು ಕರೆದು ಕೊಳ್ಳಲ್ಪಡುವ, ಕರೆದು ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿ ಅವರು, 1942ರಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟಗಾರರ ವಿರುದ್ಧ ಕೋರ್ಟ್ ನಲ್ಲಿ ಬ್ರಿಟಿಷ್ ಸರಕಾರದ ಪರವಾಗಿ ಸಾಕ್ಷಿ ಹೇಳಿದ್ದ ಅಂಶ ಇದೀಗ ಬೆಳಕಿಗೆ ಬಂದಿದೆ.

ಅಂದು ಭಾರತದ ಸ್ವಾತಂತ್ರ್ಯಕ್ಕಾಗಿ ಪ್ರಾಣ ಮುಡಿಪಿಟ್ಟು ಹೋರಾಡುತ್ತಿದ್ದ ಇಬ್ಬರು ಹೋರಾಟಗಾರರನ್ನು ಬ್ರಿಟಿಷರಿಗೆ ಹಿಡಿದುಕೊಟ್ಟ 'ಕೀರ್ತಿ' ಇವರದು. ಇದಲ್ಲದೆ ವಾಜಪೇಯಿ ಅವರ ಹೇಳಿಕೆಯಿಂದ ಇಡೀ ಒಂದು ಗ್ರಾಮವೇ ಸರಕಾರಕ್ಕೆ ಒಂದು ಸಾವಿರ ರೂ. ದಂಡ ತೆರಬೇಕಾದ ಘಟನೆ ನಡೆದಿತ್ತು ಎಂದು ಈಗ ತಿಳಿದು ಬಂದಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ 'ಒಟ್ಟೇಶ್ವರ್' ಗ್ರಾಮದ ಜನ ಪಾಲ್ಗೊಂಡಿದ್ದರ ಪರಿಣಾಮವಾಗಿ 1942 ಸೆಪ್ಟೆಂಬರ್ 1 ರಂದು ಬ್ರಿಟಿಷ್ ಮಿಲಿಟಟರಿ ಈ ಗ್ರಾಮಕ್ಕೆ ನುಗ್ಗಿ ದಾಂದಲೆ, ದೌರ್ಜನ್ಯ ನಡೆಸುವ ಸಂದರ್ಭ. ಬ್ರಿಟಿಷ್ 'ಆರಣ್ಯ ಕಾಯ್ದೆ'ಯನ್ನು ಉಲ್ಲಂಘಿಸಿದ 'ಆಗ್ರ' ಬೀಚ್ ಕಲ್ಲಿ'ಯ ಜನ ಅಲ್ಲಿರುವ ಅರಣ್ಯ ಕಛೇರಿಯನ್ನು ವಶಪಡಿಸಿಕೊಂಡರು.

ಸ್ವಾತಂತ್ರ್ಯ ಹೋರಾಟದ ಭಾಗವಾಗಿ ನಡೆದ ಈ ಜನಾಂದೋಲನಕ್ಕೆ ನೇತೃತ್ವ ನೀಡಿದ ಮುಖಂಡರನ್ನು ಕಂಡು ಹಿಡಿಯಲು ಗ್ರಾಮದ ಮನೆ ಮನೆಗೆ ನುಗ್ಗಿದ ಬ್ರಿಟಿಷ್ ಮಿಲಿಟರಿ ರಾಕ್ಷಸಿ ದಾಂದಲೆ ನಡೆಸಿತು. ಆದರೂ ಸಹ ಹಲ್ಲೆಯನ್ನು ಸಹಿಸಿಯೂ ಜನ ನಾಯಕರ ಬಗೆಗೆ ಕಿಂಚಿತ್ತು ಸುಳಿವು ನೀಡಲಿಲ್ಲ.

ಈ ಸಂದರ್ಭದಲ್ಲಿ 1942 ಸೆಪ್ಟೆಂಬರ್ 1 ರಂದು ಆಗ್ರದಲ್ಲಿದ್ದ ಬ್ರಿಟಿಷ್ ಮ್ಯಾಜಿಸ್ಟ್ರೇಟ್ ಎಸ್. ಅಸನ್ ಅವರ ಎದುರು ಅಟಲ್ ಬಿಹಾರಿ ವಾಜಪೇಯಿ ಹಾಜರಾಗಿ ಹೇಳಿಕೆ ನೀಡಿದರು.

ಅದಕ್ಕೆ ಸಂಬಂಧಿಸಿದ ದಾಖಲೆಗಳು ಹಾಗೂ ಹೇಳಿಕೆಯನ್ನು ಗಮನಿಸಿ

ಹೆಸರು "ಅಟಲ್ ಬಿಹಾರಿ ವಾಜಪೇಯಿ'
ತಂದೆಯ ಹೆಸರು "ಗೌರಿ ಶಂಕರ್"
ಜಾತಿ "ಬ್ರಾಹ್ಮಣ"
ವಯಸ್ಸು 20
ಕೆಲಸ: ಗ್ವಾಲಿಯರ್ ಕಾಲೇಜು ವಿದ್ಯಾರ್ಥಿ
ವಿಳಾಸ: ಬರ್ಟೇಶ್ವರ್, ಪಿ.ಎಸ್. ಬಾಹ, ಆಗ್ರಾ ಜಿಲ್ಲೆ


1942 ಆಗಸ್ಟ್ 27 ಬರ್ಟೇಶ್ವರ್ ಬಜಾರ್ ನಲ್ಲಿ ಆಲ್ಹಾನಿಗಾಗಿ ಪ್ರಾರ್ಥನೆ ನಡೆಯುತ್ತಿರುವ ಸಮಯ, ಮಧ್ಯಾಹ್ನ 2 ಗಂಟೆಯಾಗಿರಬಹುದಾದ ಸಮಯ. ಕಾಕುವ ಎಂದು ಕರೆಯುವ ಲೀಲಾಧರ್ ಮತ್ತು ಮಹಾವನ್ ಎನ್ನುವವರು ಅಲ್ಲಿಗೆ ಬಂದರು. ಅವರು ಅಲ್ಲಿಗೆ ಬಂದ ಕೂಡಲೇ ಒಂದು ಭಾಷಣ ಮಾಡಿ ಬ್ರಿಟಿಷರ 'ಅರಣ್ಯ ಕಾಯ್ದೆ'ಯನ್ನು ಉಲ್ಲಂಘಿಸಲು ಕರೆ ನೀಡಿದರು. ನಂತರ 200ಕ್ಕಿಂತ ಹೆಚ್ಚು ಜನ ಅರಣ್ಯ ಇಲಾಖೆಯ ಕಛೇರಿಗೆ ಹೋದರು. ಆ ಜನರ ಹಿಂದೆ ನಾನು ನನ್ನ ಸಹೋದರನು ಈ ಕಛೇರಿಯನ್ನು ಮುತ್ತಿಗೆ ಹಾಕುವಾಗ ನಾವು ದೂರ ನಿಂತು ನೋಡುತ್ತಿದ್ದೆವು. 'ಅರಣ್ಯ ಇಲಾಖೆ'ಯ ಕಚೇರಿಗೆ ನುಗ್ಗಿದ ಹಾಕುವ ಮತ್ತು ಮಹಾನವ ಅವರುಗಳನ್ನು ಗುರುತಿಸಬಲ್ಲೆ ಇತರರನ್ನು ಗುರುತಿಸಲಾಗದು. ಅವರು ಒಳಗೆ ನುಗ್ಗಿದ ನಂತರ ಗೋಡೆಗಳನ್ನು ಒಡೆಯುವ ಶಬ್ದ ಕೇಳಿಬಂತು. ಅದನ್ನು ಯಾರು ಒಡೆದದ್ದೆಂದು ನಾನು ನೋಡಿಲ್ಲ, ಆದರೆ ಗೋಡೆ ಬೀಳುವ ಸದ್ದನ್ನು ನಾವು ಕೇಳಿದೆವು. ಆದರೆ ನಾವು ಈ ಯಾವುದರಲ್ಲಿ ಭಾಗವಹಿಸಲಿಲ್ಲ ನಂತರ ಈ ಜನರ ಗುಂಪು ಬೀಚ್‌ಕಲ್ಲಿಗೆ ಹೋದರು. ಅರಣ್ಯ ಇಲಾಖೆಯ ಕಚೇರಿಯಲ್ಲಿ ಹತ್ತು ಹನ್ನೆರಡು ಜನ ಇದ್ದಿರಬಹುದು. ಕಚೇರಿಗೂ ನನಗೂ ನಡುವೆ ಸುಮಾರು 6 ಅಡಿಗಳ ಅಂತರವಿತ್ತು. ಆದರೆ ಸರ್ಕಾರಿ ಕಟ್ಟಡವನ್ನು ಒಡೆಯಲು ನಾನಾಗಲಿ, ನನ್ನ ಸಹೋದರರನಾಗಲಿ ಯಾವ ಸಹಾಯವನ್ನು ಮಾಡಿಲ್ಲ ನಂತರ ನಾನು ನನ್ನ ಸೋದರನು ಮನೆಗೆ ಹೋದೆವು."

ವಾಜಪೇಯಿ ಅವರ ಈ ಹೇಳಿಕೆಯನ್ನು ದಾಖಲೆ ಮಾಡಿದ ಮ್ಯಾಜಿಸ್ಟ್ರೇಟ್ ಅವರ ಸ್ವಯಂ ಹಸ್ತಾಕ್ಷರದಲ್ಲಿಹೀಗೆ ಬರೆದಿದ್ದಾರೆ.-

"ಈ ರೀತಿಯಾಗಿ ಸ್ವಯಂ ಪ್ರೇರಿತವಾಗಿ ನೀಡುವ ಹೇಳಿಕೆಯನ್ನು ಪಡೆಯಲು ಸಮ್ಮತಿ ಇಲ್ಲವಾದರೂ ನಾನು ಈ ಹೇಳಿಕೆಯನ್ನು ದಾಖಲಿಸುತ್ತಿದ್ದೇನೆ. ಈ ವಿಷಯವನ್ನು ಆರೋಪಿಗಳು ಒಳಿಸಿಕೊಳ್ಳಲು ಸಾಧ್ಯತೆ 'ಗೌರಿಶಂಕರ ಮಗನಾದ ಅಟಲ್ ಬಿಹಾರಿ ವಾಜಪೇಯಿಯನ್ನು ಆತನು ನೀಡಿದ ಹೇಳಿಕೆಯು ಸ್ವಯಂ ಪ್ರೇರಿತವೋ ಅಥವಾ ಬ್ರಿಟೀಷ್ ಪೋಲೀಸರ ನಿರ್ದೇಶನದಂತೆ ನೀಡಲಾಗಿಯೇ ಎಂದು ಪ್ರಶ್ನಿಸಿದೆ. ಆದರೆ ವಾಜಪೇಯಿಯು ತಾನು ಸ್ವಯಂ ಪ್ರೇರಿತನಾಗಿ ಹೇಳಿಕೆ ನೀಡಿರುವುದಾಗಿ ತಿಳಿಸಿದ. ನಂತರ ಆತನು ನೀಡಿದ ಹೇಳಿಕೆಯನ್ನು ಆತನ ಮುಂದೆ ಓದಿ, ತಿಳಿಸಲಾಯ್ತು. ಮತ್ತು ಅದು ಪೂರ್ಣವಾಗಿದೆಯೇ?, ಸತ್ಯವಾಗಿದೆಯೇ ಎಂದು ಪ್ರಶ್ನಿಸಲಾಯ್ತು. ವಾಜಪೇಯಿಯು, ಹೇಳಿಕೆಯು ಪೂರ್ಣವಾಗಿಯೂ ಸತ್ಯವಾಗಿಯೂ ಇದೆ ಎಂದು ಸ್ಪಷ್ಟಪಡಿಸಿದನು.

ಉರ್ದು ಭಾಷೆಯಲ್ಲಿ ಈ ಹೇಳಿಕೆಗಳನ್ನು ದಾಖಲೆ ಮಾಡಲಾಗಿದೆ. ವಾಜಪೇಯಿ ಅವರು ಇಂಗ್ಲಿಷ್‌ನಲ್ಲಿ ಈ ಹೇಳಿಕೆಯ ಕೆಳಗೆ ಸಹಿ ಮಾಡಿದ್ದಾರೆ. ಅವರ ಹೇಳಿಕೆಯು ಕಳಗೆ ಮಾಜಿಸ್ಟ್ರೇಟ್ ಅವರ ವಾಕ್ಯಗಳನ್ನು ನಮೂದಿಸಲಾ

ಪುಟ 6 ನೋಡಿ



ಕರ್ನಾಟಕ ಸುದ್ದಿ ಸಮಾಚಾರ

ಸಾಮೂಹಿಕ ಸಂಘಟನೆಗಳ ವೇದಿಕೆ ರಾಜ್ಯಾದ್ಯಂತ ಪ್ರತಿಭಟನಾ ದಿನಾಚರಣೆ

ಬಿಜಾಪುರ: ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಮೇರೆಗೆ ಸೆ. 15ರಂದು ಸಾಮೂಹಿಕ ಸಂಘಟನೆಗಳ ವೇದಿಕೆ ರಾಜ್ಯಾದ್ಯಂತ ಪ್ರತಿಭಟನಾ ದಿನಾಚರಣೆ. ಮೂರು ನೂರಕ್ಕೂ ಹೆಚ್ಚು ಕಾರ್ಮಿಕ ಕರೆ, ರೈತರ, ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಮತಪ್ರದರ್ಶನ ನಡೆಸಿ ಕೇಂದ್ರ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಘೋಷಣೆ ಕೂಗಿದರಲ್ಲದೆ ಬಿಜಾಪುರ ಜಿಲ್ಲೆಯಲ್ಲಿ ಸಾಕಷ್ಟು ಮಳೆಯಾಗದೆ ಅಭಾವ ಪರಿಸ್ಥಿತಿ ಉಂಟಾಗಿರುವುದರಿಂದ ಬರಗಾಲ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಬೇಕೆಂದೂ ಒತ್ತಾಯಿಸಲಾಯಿತು. ಕೃಷ್ಣಾ ಮೇಲ್ದಂಡೆ ಯೋಜನೆಯ ಕೆಲಸವನ್ನು ತುರ್ತುಗೊಳಿಸಬೇಕೆಂದೂ ಒತ್ತಾಯಿಸುವ, ಕೊಜೆಂಟ್ರಿಕ್ಸ್ ಯೋಜನೆಯನ್ನು ಕೈಬಿಡಬೇಕೆಂದೂ ಹೇಳುವ ಘೋಷಣೆಗಳು ಮೊಳಗಿದವು. ನೂರಾರು ಮಹಿಳೆಯರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಎನ್.ಕೆ. ಉಪಾಧ್ಯಾಯ, ಭೀಮ್ಸಿ ಕಲಾದಗಿ, ಮನ್ನೂಸಾಬ ಕಲಾದಗಿ ಮೊದಲಾದವರು ಧರಣಿಕಾರರನ್ನುದ್ದೇಶಿಸಿ ಮಾತನಾಡಿ ಕೇಂದ್ರ ಸರಕಾರದ ಆರ್ಥಿಕ ನೀತಿಯ ದುಷ್ಪರಿಣಾಮಗಳನ್ನು ತಿಳಿಸಿದರು. ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ಪ್ರಾರಂಭವಾಗುವ ಮುಂಚೆ, ರೈತ ಸಂಘದ ಕಛೇರಿಯಿಂದ ಹೊರಟ ಮೆರವಣಿಗೆ ಊರಲ್ಲಿ ಸುತ್ತಾಡಿ ಕೇದ್ರ ಸರಕಾರದ ಜನವಿರೋಧಿ ನೀತಿಯ ವಿರುದ್ಧ ಪ್ರಚಾರ ಕೈಗೊಂಡಿತು.

ಬಳ್ಳಾರಿ: ಜಿಲ್ಲೆಯ ಸಾಮೂಹಿಕ ಸಂಘಟನೆಗಳ ವೇದಿಕೆಯು ನೇತೃತ್ವದಲ್ಲಿ ಎಲ್ಲಾತಾಲೂಕುಗಳಿಂದಒಂದುಸಾವಿರಕ್ಕೂ ಹೆಚ್ಚು ಪ್ರತಿಭಟನಾಕಾರರು ಜಿಲ್ಲಾ ಕೇಂದ್ರದ ಜಿಲ್ಲಾಧಿಕಾರಿಗಳ ಕಛೇರಿ ಎದುರು ನಡೆದ ಧರಣಿಯಲ್ಲಿ ಭಾಗವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರರಾವ್ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಕೃಷಿ, ವಿದ್ಯುತ್, ನೀರಾವರಿ ಯೋಜನೆಗಲನ್ನು ಉತ್ತಮಪಡಿಸಲು ಕೇಂದ್ರ ಸರಕಾರವನ್ನು ಒತ್ತಾಯಿಸಿದರು. ಇದರ ಜಾರಿಗೆ ಸಂಘಟನೆಗಳು ಚಳುವಳಿಯನ್ನು ತೀವ್ರಗೊಳಿಸುವ ಅಗತ್ಯವನ್ನು ಒತ್ತಿ ಹೇಳಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಪ್ರಸನ್ನಕುಮಾರ್ ಉದ್ದೇಶಪೂರ್ವಕವಾಗಿ ಜಿಲ್ಲಾಧಿಕಾರಿಗಳು ಮತ್ತು ಇತರ ಅಧಿಕಾರಿಗಳು ಗೈರು ಹಾಜರಾಗಿದ್ದುದನ್ನು ಖಂಡಿಸಿದರು. ಸಭೆಯ ದಿನಾಂಕವನ್ನು ಗೊತ್ತುಪಡಿಸಲು ಒತ್ತಾಯಿಸಿ ಕಾರ್ಯಕ್ರಮದ ವಿವರಣೆ ನೀಡಿದರು. ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯು.ಬಸವರಾಜ್, ಎಸ್ಎಫ್ಐನ ಎಲ್.ಮಂಜುನಾಥ್, ರೈತ ಸಂಘದ ಅಧ್ಯಕ್ಷರಾದ ವೀರಸಂಗಯ್ಯ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಹುಬ್ಬಳ್ಳಿ: ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯಿಂದ ಕೇಂದ್ರ ಸರಕಾರದ ಆರ್ಥಿಕ ನೀತಿಯನ್ನು ಹಿಮ್ಮೆಟ್ಟಿಸಲು ಅವಿಶ್ರಾಂತವಾಗಿ ಹೋರಾಡುವಂತೆ ಸಿಐಟಿಯು ಧುರೀಣರಾದ ಕಾಂ.ನಿತ್ಯಾನಂದಸ್ವಾಮಿ ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ಜಿಲ್ಲಾ ಸಾಮೂಹಿಕ ಸಂಘಟನೆಗಳ ಆಶ್ರಯದಲ್ಲಿ ಆಗಸ್ಟ್ 15ರಂದು ನಡೆದ ಬಹಿರಂಗ ಸಭೆಯಲ್ಲಿ ಕರೆ ಕೊಟ್ಟರು. ಇಂದು ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶದಿಂದ ನಮ್ಮ ದೇಶದ ಸ್ವಾತಂತ್ರ್ಯ, ಸ್ವಾವಲಂಬನೆಗೆ ಬಂದಿರುವ ಗಂಡಾಂತರವನ್ನು ವಿವರಿಸುತ್ತಾ ಅವುಗಳನ್ನು ಹಿಮ್ಮೆಟ್ಟಿಸಲು ಐಕ್ಯ ಹೋರಾಟದ ಅಗತ್ಯವನ್ನು ವಿವರಿಸಿದರು. ಬಹಿರಂಗ ಸಭೆ ಮುನ್ನ ವಿವಿಧ ಸಂಘಟನೆಗಳ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ವಿವಿಧ ಸಂಘಟನೆಗಳ ಮುಖಂಡರು ಈ ಮೆರವಣಿಗೆಯ ನೇತೃತ್ವ ವಹಿಸಿದ್ದರು. ರೈತ ಸಂಘದ ಮುಖಂಡರಾದ ಈಶ್ವರ ಚಂದ್ರ ಹೊಸಮನಿ, ಟೆಲಿಕಾಂ ನೌಕರರ ಸಂಘದ ಮುಖಂಡ ಎಂ.ಸದಾನಂದ ಈ ಸಭೆಯಲ್ಲಿ ಉಪಸ್ಥಿತರಿದ್ದು ಮಾತನಾಡಿದರು. ಸಭೆಯು ಪ್ರಾರಂಭದಲ್ಲಿ ಜಿಲ್ಲಾ ಸಮೂಹಿಕ ಸಂಘಟನೆಗಳ ವೇದಿಕೆಯ ಸಂಚಾಲಕರಾದ ಕಾಂ.ಸಿ.ಆರ್. ಭಟ್ ಸ್ವಾಗತಿಸಿದರು. ಕೊನೆಯಲ್ಲಿ ಎಂ.ಎಚ್.ಮುಲ್ಲಾ ವಂದಿಸಿದರು.

ಬೆಂಗಳೂರು: ಸೆ. 15ರಂದು ನಗರದ ಚಿಕ್ಕಲಾಲ್ ಬಾಗ್ ನಿಂದ ಬೃಹತ್ ಮೆರವಣಿಗೆ ಮತ್ತು ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಬೃಹತ್ ಧರಣಿ ಕಾರ್ಯಕ್ರಮದೊಂದಿಗೆ ಆಚರಿಸಲಾಯಿತು. ಧರಣಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಗರದ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಕಾಂ.ಕೆ.ಎಸ್.ಸುಬ್ರಮಣ್ಯನವರು ವಹಿಸಿದ್ದರು. ಸಿಐಟಿಯು ರಾಜ್ಯಾಧ್ಯಕ್ಷರಾದ ಕಾಂ.ಎಸ್. ಸೂರ್ಯನಾರಾಯಣರಾವ್, ಕೃಷಿಕೂಲಿಕಾರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ.ಪಿ.ಜಗನ್ನಾಥ್, ಡಿವೈಎಫ್ಐ ರಾಜ್ಯ ಕಾರ್ಯದರ್ಶಿಯಾದ ಕಾಂ.ಗುರುಶಾಂತ್, ಜನವಾದಿ ಮಹಿಳಾ ಸಂಘಟನೆಯ ಕಾಂ.ಶಾರದ, ಬ್ಯಾಂಕ್ ನೌಕರರ ಮುಖಂಡ ಜಯರಾಂ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ.ಆರ್.ಶ್ರೀನಿವಾಸ್ ಮಾತನಾಡಿದರು. ಸಂಘಟನೆಯ ಪ್ರತಿನಿಧಿಗಳು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಕಾರವಾರ: ನಗರದ ಜಿಲ್ಲಾಧಿಕಾರಿಗಳ ಕಛೇರಿ ಎದುರು ಜಿಲ್ಲೆಯ ಮೂಲೆ ಮೂಲೆಗಳಿಂದ ಬಂದಿದ್ದ ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು, ಕಲಾವಿದರು, ರೈತರು ಮತ್ತು ಕೃಷಿ ಕೂಲಿಕಾರರು ಕೇಂದ್ರ ಸರಕಾರದ ಹಾಗೂ ರಾಜ್ಯ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಮತ್ತು ಕೋಮುವಾದದ ವಿರುದ್ಧ ಧರಣಿ ನಡೆಸಿದರು. ಧರಣಿ ನಡೆಸುವ ಮೊದಲು ಕಾರವಾರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆ ಮತ್ತು ಧರಣಿ ಕಾರ್ಯಕ್ರಮದ ಮುಖಂಡತ್ವವನ್ನು ಕಾಂ.ಟಿ.ಎಸ್.ನಾಯ್ಕ, ಕಂಬಾಳಿ, ಸಿ.ಆರ್. ಶ್ಯಾನುಭಾಗ್, ಸುರೇಶ್ ತಾಂಡೇಲ, ತಿಲಕಗೌಡ, ಎಸ್.ವಿ.ಸಾವಂತ, ಗುರುಪಾದ ಮರಾಠೆ, ಪುಲ್ಲಯ್ಯ, ಮಂಜುನಾಥ ಪುಲಕರ, ಹರೀಶ ನಾಯ್ಕ ವಹಿಸಿದ್ದರು. ಮನವಿ ಪತ್ರವನ್ನು ವೇದಿಕೆಯ ಪರವಾಗಿ ಕಾಂ.ಸಿ.ಆರ್. ಶಾನುಭಾಗರು ಜಿಲ್ಲಾಧಿಕಾರಿಗಳ ಕೇಂದ್ರ ಕಛೇರಿ ಸಹಾಯಕ ವಿ.ಎಸ್.ನಾಯಕ ಅವರಿಗೆ ಸಲ್ಲಿಸಿದರು.

ಬಾಲಕಾರ್ಮಿಕರ ಬವಣೆ ಕುರಿತು ಕಾರ್ಯಾಗಾರ

ಮೂಡಬಿದ್ರಿ: ಆಗಸ್ಟ್ 24 ಮತ್ತು 25ರಂದು ಬಾಲ ಕಾರ್ಮಿಕರ ಸಮಯ್ಸೆ ಕುರಿತು ಸಿಐಟಿಯು-ಐಎಲ್ಒ ಕಾರ್ಯಾಗಾರವನ್ನು ನಗರದಲ್ಲಿ ಉದ್ಘಾಟಿಸುತ್ತಾ ಸಿಐಟಿಯುನ ಉಪಾಧ್ಯಕ್ಷರಾದ ಸಿ.ನಂಜುಂಡಪ್ಪನವರು ಬಾಲ ಕಾರ್ಮಿಕರ ಸಮಸ್ಯೆಯ ಪರಿಹಾರಕ್ಕೆ ಸರಕಾರ ಸಾಕಷ್ಟು ಗಮನ ಕೊಡಲಿಲ್ಲವೆಂದು ದೂರಿದರು. ಸಿಐಟಿಯು ಕಾರ್ಮಿಕ ವರ್ಗದ ಚಳುವಳಿಯ ಒಂದು ಭಾಗವಾಗಿ ಈ ಬಾಲಕಾರ್ಮಿಕರ ಸಮಸ್ಯೆಯನ್ನು ತೆಗೆದುಕೊಂಡು ಪರಿಹಾರಕ್ಕಾಗಿ ವಿವಿಧ ರೀತಿಯ ಪ್ರಚಾರ, ಚಳುವಳಿಯ ಕಾರ್ಯಕ್ರಮವನ್ನು 1996ರ ಮಾರ್ಚ್ ತಿಂಗಳವರೆಗೆ ಹಮ್ಮಿಕೊಂಡಿರುವುದಾಗಿ ವಿವರಿಸಿದರು.

ಆರಂಭದಲ್ಲಿ ಮೂಡಬಿದರೆ ಬೀಡಿ ಕಾರ್ಮಿಕರ ಸಂಘದ ಜತೆ ಕಾರ್ಯದರ್ಶಿಯವರಾದ ಪ್ರದೀಪರವರು ಸ್ವಾಗತಿಸಿದರು. ಸಂಘದ ಅಧ್ಯಕ್ಷರಾದ ರಮಣಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಕರ್ನಾಟಕ ರಾಜ್ಯದ ದುಡಿಯುವ ಮಹಿಳೆಯ ಮುಂದಾಳು ವರಲಕ್ಷ್ಮಿಯವರು ಮಾತನಾಡುತ್ತಾ ಬಾಲಕಾರ್ಮಿಕರ ಸಮಸ್ಯೆಯ ಕುರಿತು ಹಾಗೂ ದುಡಿಯುವ ಮಹಿಳೆಯರ ಸಂಘಟನೆ ಮತ್ತು ಹೋರಾಟದ ಬಗ್ಗೆ ವಿವರಿಸಿದರು.

ಸಿಐಟಿಯು ಮುಂದಾಳು ಡೇವಿಡ್ ಕರ್ಕಡರವರು ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದು ಸಲಹೆ ನೀಡಿದರು. ಚರ್ಚೆಯಲ್ಲಿ 15ಮಂದಿ ಮಹಿಳೆಯರು ಭಾಗವಹಿಸಿದ್ದರು.

ಕುಂದಾಪುರ: ಆಗಸ್ಟ್ 20 ರಂದು ನಗರದ ನೆಹರು ಸ್ಪೋರ್ಟ್ಸ್ ಆವರಣದಲ್ಲಿ ಬೀಡಿ ಕಾರ್ಮಿಕರ ಸಂಘಗಳ ನೇತೃತ್ವದಲ್ಲಿ ಬಾಲ ಕಾರ್ಮಿಕರ ಸಮಸ್ಯೆಯ ಕುರಿತು ಸಿಐಟಿಯು-ಐಎಲ್ಒದಿಂದ 2 ದಿವಸಗಳ ಕಾರ್ಯಾಗಾರವನ್ನು ಸಿಐಟಿಯು ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಯವರಾದ ವಿ.ಜೆ.ಕೆ.ನಾಯರ್ ರವರು ಉದ್ಘಾಟಿಸಿದರು. ಕರ್ನಾಟಕ ರಾಜ್ಯ ಬೀಡಿ ವರ್ಕರ್ಸ್ ಫೆಡರೇಶನ್ ನ ಪ್ರಧಾನ ಕಾರ್ಯದರ್ಶಿಯವರಾದ ಕಾ.ಹಿ.ಶಂಕರ್ ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾ.ಮಹಾಬಲ ಒಡೇರಹೋಬಳಿಯವರು ಸ್ವಾಗತಿಸಿ ಕಾರ್ಯಾಗಾರದ ಮಹತ್ವವನ್ನು ವಿವರಿಸಿದರು. ಕುಂದಾಪುರ ಮತ್ತು ಬ್ರಹ್ಮಾವರ ಬೀಡಿ ಕಾರ್ಮಿಕ ಸಂಘಗಳಿಂದ 60 ಮಂದಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಕಾ. ವಿ.ಜೆ.ಕೆ.ನಾಯರ್ ರವರು ಮಾತನಾಡುತ್ತಾ ಕಾರ್ಮಿಕ ವರ್ಗದ ಚಳುವಳಿಯ ಒಂದು ಭಾಗವಾಗಿ ಬಾಲ ಕಾರ್ಮಿಕರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಚಾರ ಹಾಗೂ ಚಳುವಳಿಯನ್ನು ಸಿಐಟಿಯು ಆರಂಭಿಸಿದೆ. ರಾಷ್ಟ್ರೀಯ ಮಟ್ಟದಲ್ಲಿ ಜೀವನಾವಶ್ಯಕ ಕನಿಷ್ಠ ಕೂಲಿ, ಭೂರಹಿತರಿಗೆ ಭೂಮಿ ಹಂಚಿಕೆ, ಕೃಷಿ ಕೂಲಿಗಾರರಿಗೆ ಕೆಲಸ ಮತ್ತು ಅವರ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಇತ್ಯಾದಿ ಬೇಡಿಕೆಗಳಿಗಾಗಿ ಸಿಐಟಿಯು ಐಕ್ಯ ಹೋರಾಟವನ್ನು ನಡೆಸಲಿದೆ ಎಂದು ಹೇಳಿದರು.

ಕಾ.ವಾಸುದೇವ ಉಚ್ಚಿಲ್‌ರವರು ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡಿ ಬಾಲ ಕಾರ್ಮಿಕರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಎಲ್ಲಾ ವಿಭಾಗದ ಜನರ ಹಾಗೂ ಕಾರ್ಮಿಕರ ಸಹಕಾರ ಬೇಕೆಂದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಂಗಳೂರು ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರು ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡುತ್ತಾ ಬಾಲ ಕಾರ್ಮಿಕರ ಸಂಬಂಧಪಟ್ಟ ಕಾಯಿದೆ ಹಾಗೂ ಸಮಸ್ಯೆಯ ಕುರಿತು ವಿವರಿಸಿ ಬಡತನ ನಿವಾರಣೆಗೆ ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿದೆ ಎಂದರು.

ಸಿಐಟಿಯುನ ದ.ಕ. ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಬಿ.ಮಾಧವರವರು ಕಾರ್ಯಾಗಾರದಲ್ಲಿ ಭಾಗವಹಿಸಿ ಬಾಲ ಕಾರ್ಮಿಕರ ಸಮಸ್ಯೆಯ ಹಿನ್ನೆಲೆ ಹಾಗೂ ಸಾಮಾಜಿಕ ವ್ಯವಸ್ಥೆ ಮತ್ತು ಪರಿಹಾರ ಕಂಡುಕೊಳ್ಳುವ ಕ್ರಮಗಳ ಬಗ್ಗೆ ವಿವರಣೆ ನೀಡಿದರು.

ರಾಜ್ಯದ ದುಡಿಯುವ ಮಹಿಳಾ ಮುಂದಾಳುಗಳಾದ ವರಲಕ್ಷ್ಮಿಯವರು ಭಾಗವಹಿಸಿ, ಬಾಲ ಕಾರ್ಮಿಕರ ಸಮಸ್ಯೆಯ ಕುರಿತು ಮತ್ತು ದುಡಿಯುವ ಮಹಿಳೆಯರ ಸಂಘಟನೆ ಕುರಿತು ಮಾತನಾಡಿ ಬಾಲ-ಬಾಲಕಿಯರನ್ನು ಕೆಲಸಕ್ಕೆ ಕಳುಹಿಸದೇ ಶಿಕ್ಷಣ ಕೊಡುವುದರ ಮಹತ್ವವನ್ನು ವಿವರಿಸಿದರು.

ಅಧ್ಯಯನ ಶಿಬಿರ

ಕುಂದಾಪುರ: ಇತ್ತೀಚೆಗೆ ನಗರದಲ್ಲಿ ವಿಜ್ಞಾನ ಮತ್ತು ಸಮಾಜ ಎಂಬ ವಿಷಯದ ಬಗ್ಗೆ ಅಧ್ಯಯನ ಕಾರ್ಯಾಗಾರವನ್ನು ಏರ್ಪಡಿಸಿತ್ತು. ದಿ.ಕೋ.ಲ. ಕಾರಂತ ಸಂಸ್ಮರಣ ನಡೆದ ಈ ಅಧ್ಯಯನದ ಕಾರ್ಯಾಗಾರವನ್ನು ಬೆಂಗಳೂರಿನ ಆಸ್ಟ್ರೋಸಂಸ್ಥೆಯ ಮುಖ್ಯಸ್ಥರಾದ ಪ್ರೋ. ಉಡುಪಿ ಶ್ರೀನಿವಾಸ್ ರವರು ಉದ್ಘಾಟಿಸುತ್ತಾ ವಿಜ್ಞಾನ, ತಂತ್ರಜ್ಞಾನದ ಪ್ರಯೋಜನ ಜನಸಾಮಾನ್ಯರಿಗೆ ಸಿಗಬೇಕು ಎಂದು ಹೇಳಿದರು. ನಮ್ಮ ಸುತ್ತಮುತ್ತ ಲಭ್ಯವಿರುವ ವಸ್ತುಗಳನ್ನು ಸದುಪಯೋಗಪಡಿಸಿಕೊಂಡು ಹಳ್ಳಿಯ ಜನ ಕಡಿಮೆ ಖರ್ಚಿನಲ್ಲಿ ಅಚ್ಚುಕಟ್ಟಾದ ಜೀವನ ನಡೆಸಲು ಅಸ್ತ್ರಾ ಸಂಸ್ಥೆಯು ಹೇಗೆ ಸಹಕಾರಿಯಾಗಿದೆ ಎಂದು ವಿವರಿಸಿದರು.

ಉದ್ಘಾಟನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ವಾಸುದೇವ ಉಚ್ಚಿಲ್ ರಪರು ವಿಜ್ಞಾನ ತಂತ್ರಜ್ಞಾನದಿಂದಾಗಿ ಈ ದೇಶ ಸ್ವಾವಲಂಬಿಯಾಗಬೇಕಾಗಿದೆ ಎಂದು ನುಡಿದರು. ಪ್ರಾಸ್ತಾವಿಕ ಪರಿಚಯು ಭಾಷಣ ಮಾಡಿದ ಡಾ.ರಾಜೇಂದ್ರ ಉಡುಪ ಅವರು ಸಮುದಾಯದ ಸ್ವಾವಲಂಬನೆಯ ಚಿತ್ತಾರ ಅಧ್ಯಯನದ ಸರಣಿಯ ಉದ್ದೇಶ ಕೂಡಾ ಸ್ವಾವಲಂಬೀ ಭಾರತ ಎಂದರು.

ಬೆಂಗಳೂರಿನ ಐಐಎನ ವಿಜ್ಞಾನಿಯಾದ ವಿಜ್ಞಾನ ಮತ್ತು ಸಂಸ್ಕೃತಿಯ ಬಗ್ಗೆ ಆಳವಾದ ಪಾಂಡಿತ್ಯ ಹೊಂದಿರುವ ಡಾ. ಸವ್ಯಸಾಚಿ ಚಟರ್ಜಿಯವರು ಸಮುದಾಯದ ಆಹ್ವಾನಿತ ಅಧ್ಯಯನಾಕಾಂಕ್ಷಿಗಳಿಗೆ ವಿಜ್ಞಾನ ತಂತ್ರಜ್ಞಾನದ ಸ್ವರೂಪ, ಸ್ವತಂತ್ರ ಭಾರತದಲ್ಲಿ ಅದರ ಬಳಕೆ ಇತ್ತೀಚಿನ ಆರ್ಥಿಕ ಉದಾರೀಕರಣ ಜಾಗತೀಕರಣದಿಂದಾಗಿ ದೇಶೀ ವಿಜ್ಞಾನ ತಂತ್ರಜ್ಞಾನದ ಮೇಲೆ ಪರಿಣಾಮಗಳ ಬಗ್ಗೆ ಸರಳವಾಗಿ ಪ್ರಭಾವಶಾಲಿಯಾಗಿ ಕಾರ್ಯಾಗಾರವನ್ನು ನಡೆಸಿಕೊಟ್ಟರು. ಸಮುದಾಯದ ಕಾರ್ಯದರ್ಶಿ ಜಿ.ವಿ.ಕಾರಂತ ಸ್ವಾಗತಿಸಿ, ಕೆ. ಪ್ರಭಾಕರನ್ ವಂದಿಸಿದರು.

ದೈಹಿಕ ಶಿಕ್ಷಕರ ನೇಮಕಾತಿಗೆ ಒತ್ತಾಯ

ಪ್ರಾಥಮಿಕ ಶಿಕ್ಷಕರ ನೇಮಕಾತಿಯಲ್ಲಿ ದೈಹಿಕ ಶಿಕ್ಷಕರಿಗೆ ಪ್ರಾಶಸ್ತ್ಯ ನೀಡಬೇಕೆಂದು ಡಿವೈಎಫ್ಐನ ಕರ್ನಾಟಕ ರಾಜ್ಯ ಸಮಿತಿಯು ಸರಕಾರವನ್ನು ಆಗ್ರಹಪಡಿಸಿದೆ.

ಶಾಲೆಗಳಲ್ಲಿ ಸಾವಿರಾರು ದೈಹಿಕ ತರಬೇತಿ ಶಿಕ್ಷಕರ ಹುದ್ದೆಗಳು ಖಾಲಿಯಿದ್ದರೂ ಈ ಬಾರಿಯ ಪ್ರಾಥಮಿಕ ಶಿಕ್ಷಕರ ನೇಮಕಾತಿಯಲ್ಲಿ ಇದನ್ನು ಪರಿಗಣಿಸಿಯೇ ಇಲ್ಲ. ಶಿಕ್ಷಣದ ಬಹುಮುಖ್ಯ ಅಂಗವಾಗಿರುವ ದೈಹಿಕ ಶಿಕ್ಷಣದ ನಿರ್ಲಕ್ಷ್ಯ ಖಂಡನೀಯವಾದುದು. ಈ ಕೂಡಲೆ ಶಿಕ್ಷಣ ಸಚಿವರು ಗಮನ ಹರಿಸಿ ಸೂಕ್ತ ಕ್ರಮ ವಹಿಸಬೇಕಾಗಿ ಡಿವೈಎಫ್ಐ ಒತ್ತಾಯಿಸಿದೆ.

ಡಿವೈಎಫ್ಐ ಸಮಾವೇಶ

ಬೆಳ್ತಂಗಡಿ: ಆಗಸ್ಟ್ 20ರಂದು ಬೆಳ್ತಂಗಡಿ ತಾಲೂಕು ಡಿವೈಎಫ್ಐನ ವಾರ್ಷಿಕ ಸಮಾವೇಶ ತಾಲೂಕು ಸಮಿತಿ ಅಧ್ಯಕ್ಷರಾದ ಎಸ್.ಎಂ.ಹರಿದಾಸ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ತಾಲೂಕು ಸಮಿತಿ ಕಾರ್ಯದರ್ಶಿ ನ್ಯಾಯವಾದಿ ಬಿ.ಎಂ.ಭಟ್ ಅವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು. ವಾರ್ಷಿಕ ವರದಿ ಮಂಡಿಸಲಾಯಿತು. ಸಂಘಟನೆ ಬಲಪಡಿಸಲು ಹಾಗೂ ಇನ್ನೂ ಹೆಚ್ಚಿನ ಘಟಕಗಳನ್ನು ಮಾಡಲು ಸಮಾವೇಶ ತೀರ್ಮಾನಿಸಿತು. ಈ ಸಂದರ್ಭದಲ್ಲಿ ನೂತನ ಸಮಿತಿಯನ್ನು ರಚಿಸಲಾಯಿತು ಅಧ್ಯಕ್ಷರಾಗಿ ಹರಿದಾಸ್ ಉಪಾಧ್ಯಕ್ಷರಾಗಿ ಪರಮೇಶ್ವರದಾಸ್(ಪಟ್ರಮೆ), ಕಾರ್ಯದರ್ಶಿಯಾಗಿ ನ್ಯಾಯವಾದಿ ಬಿ.ಎಂ.ಭಟ್, ಸಹ ಕಾರ್ಯದರ್ಶಿಯಾಗಿ ಸೆಲಮೋನ್ ಪುದುವೆಚ್ಚು, ಖಜಾಂಚಿಯಾಗಿ ಜಯಪ್ರಕಾಶ್ ಬೆಳಾಲು ಮತ್ತು 13 ಜನರ ಸಮಿತಿಯನ್ನು ರಚಿಸಲಾಯಿತು.

ತರಬೇತಿ ಶಿಬಿರ

ಸಿಪಿಐ(ಎಂ) ಸುಂಕದ ಕಟ್ಟೆ ಶಾಖೆಯು ಸೆ. 3ರಂದು ಒಂದು ದಿನದ ರಾಜಕೀಯ ತರಬೇತಿ ಶಿಬಿರವನ್ನು ಪಕ್ಷದ ಸದಸ್ಯರಿಗೆ ಹಮ್ಮಿಕೊಂಡಿತ್ತು. ಸಿಪಿಐ(ಎಂ) ರಾಜ್ಯ ಮುಖಂಡರಾದ ಎಸ್.ಸೂರ್ಯನಾರಾಯಣರಾವ್, ಜಿಲ್ಲಾ ಕಾರ್ಯದರ್ಶಿ ಆರ್. ಶ್ರೀನಿವಾಸ್ ರವರು ಭಾಗವಹಿಸಿ ಪಕ್ಷವನ್ನು ಬಲಗೊಳಿಸುವ ಬಗ್ಗೆ, ಕಾರ್ಮಿಕ ಚಳುವಳಿಯನ್ನು ಮುಂದಕ್ಕೊಯ್ಯಲು ಬೇಕಾದ ತಿಳುವಳಿಕೆಯನ್ನು ನೀಡಿದರು. ಈ ಶಿಬಿರದಲ್ಲಿ 100ಕ್ಕೂ ಹೆಚ್ಚು ಜನ ಕಾರ್ಯಕರ್ತರು ಭಾಗವಹಿಸಿದ್ದರು.

ಬಿಜಾಪುರ ಜಿಲ್ಲಾ ಪತ್ರ

ಮನೆ ಜಾಗ ಮಂಜೂರಿಗಾಗಿ ಸತ್ಯಾಗ್ರಹ: ಕಳೆದ 7-8 ವರ್ಷಗಳಿಂದ ಮುನಿಸಿಪಾಲಿಟಿಯ ಮತ್ತು ಸರಕಾರದ ಖುಲ್ಲಾ ಜಾಗದಲ್ಲಿ ಮನೆ ಇಲ್ಲದ 400ಕ್ಕೂ ಹೆಚ್ಚು ಬಡ ಜನರು ಗುಡಿಸಲು ಹಾಕಿ ವಾಸವಾಗಿದ್ದು, ಸರಕಾರದ ಹೊಸ ಧೋರಣೆ ಪ್ರಕಾರ ಅವರಿಗೆ ಪಟ್ಟಾ ಕೊಡಬೇಕೆಂದು ಒತ್ತಾಯಿಸಿ ಹೋರಾಡುತ್ತಾ ಬಂದರೂ ಕೂಡಾ ಅಧಿಕಾರಿಗಳು ಅದರತ್ತ ಗಮನ ಹರಿಸಲು ಹಿಂದೇಟು ಹಾಕಿದ ಕಾರಣ, ಸರಕಾರದ ಮೇಲೆ ಒತ್ತಡ ತರಲು ಸೆ. 13ರಿಂದ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ನೂರಾರು ಜನ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ. ಸಿಪಿಐ(ಎಂ)ನ ಬಿಜಾಪುರ ನಗರ ಶಾಖೆ ಕಾರ್ಯದರ್ಶಿಗಳಾದ ಮ ನ್ನೂಸಾಬ ಕಲಾದಗಿ ಮತ್ತು ವಿ.ಎಂ.ಸೊನ್ನದ ಮಾರ್ಗದರ್ಶನ ನೀಡುತ್ತಿದ್ದಾರೆ. ಮಹಿಳೆಯರು ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಿದ್ದಾರೆ.

ಬಿಜಾಪುರ ಜಿಲ್ಲೆ ಅಭಿವೃದ್ಧಿ ಚಿಂತನೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಜಿಲ್ಲಾ ವಿಕಾಸ ವೇದಿಕೆ, ವಾಣಿಜ್ಯ ಮಹಾ ಮಂಡಲಿ, ನ್ಯಾಯವಾದಿಗಳ ಸಂಘ, ಲಯನ್ಸ್ ಕ್ಲಬ್, ರೋಟರಿ ಕ್ಲಬ್, ಬಸವೇಶ್ವರ ವಿದ್ಯಾವರ್ಧಕ ಸಂಘ ಮೊದಲಾದ ಸಂಘ ಸಂಸ್ಥೆಗಳು ಸೇರಿ ಬಿಜಾಪುರ ಜಿಲ್ಲೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಜಿಲ್ಲೆಯ ಅಬಿವೃದ್ಧಿಗೆ ಸಲಹೆ ಸೂಚನೆಗಳನ್ನು ಚಿಂತನಾ ಕಾರ್ಯಕ್ರಮವನ್ನು ದಿ.17ರಂದು ಶಿವಾನುಭವ ಮಂಟಪದಲ್ಲಿ ಏರ್ಪಡಿಸಿತ್ತು. ಇದಕ್ಕೆ ಜಿಲ್ಲೆಯ ಮಂತ್ರಿಗಳನ್ನೂ, ಶಾಸಕರನ್ನೂ ಆಮಂತ್ರಿಸಲಾಗಿತ್ತು.

ಹಿಂದುಳಿದ ಬಿಜಾಪುರ ಜಿಲ್ಲೆಯ ಅಭಿವೃದಿಗೆ ನೀರು ಮತು ವಿದು.ತ್ ಅತ.ವಶ.ವಾಗಿದ್ದು ಇದರ ಕುರಿತು ಮಂತ್ರಿಗಳ, ಶಾಸಕರ ಗಮನ ಸೆಳೆಯಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅಧ್ಯಕ್ಷತೆ ವಹಿಸಿದ್ದ ಸಿದ್ದೇಶ್ವರ ಸ್ವಾಮಿಗಳು "ನಾವು ನೀರನ್ನು ಕೇಳುತ್ತಿದ್ದೇವೆ. ಅವರಿವರಂತೆ ಮತ್ತೇನನ್ನೂ ಕೇಳುತ್ತಿಲ್ಲ. ನಮಗೆ ಕೃಷ್ಣೆಯ ನೀರು ಕೊಡಿ, ಸ್ವಾತಂತ್ರ್ಯ ಸಿಕ್ಕು 50 ವರ್ಷಗಳಾದವು. ಆದರೆ ನಮ್ಮ ನೀರಿನಸಮಸ್ಯೆಗೆ ಇನ್ನೂ ಸ್ವಾತಂತ್ರ್ಯ ಸಿಕ್ಕಿಲ್ಲ, ಈ ಕುರಿತು ಎಲ್ಲರೂ ಚಿಂತಿಸಬೇಕು" ಎಂದು ಹೇಳಿದರು.

ಸಿಪಿಐ(ಎಂ) ಪಕ್ಷದ ಹಿರಿಯ ಮುಖಂಡರಾದ ಎನ್.ಕೆ.ಉಪಾಧ್ಯಾಯರು ಕೃಷ್ಣಾ ನದಿಯ ನೀರಿನ ಯೋಜನೆಗಳಿಗಾಗಿ 1960ರಿಂದಲೇ ನಡೆಸಿಕೊಂಡು ಬಂದ ಹಾಗೆಯೇ 1964ರಿಂದ ಸತ್ಯಾಗ್ರಹದ ಮೂಲಕ ಆಲಮಟ್ಟಿಯಲ್ಲಿ ಆಣೆಕಟ್ಟಿನ ಕೆಲಸ ಪ್ರಾರಂಭಿಸಿದ ಹಿಂದಿನ ಹೋರಾಟಗಳ ಚರಿತ್ರೆಯನ್ನು ವಿವರಿಸಿ, ಕರ್ನಾಟಕದ ನೀರಾವರಿ ಯೋಜನೆಗಳ ಕುರಿತು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಅನಾಸ್ಥೆಗಳನ್ನು ಖಂಡಿಸಿ, ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ತಿಗೊಳಿಸುವಂತೆ ಸರಕಾರದ ಮೇಲೆ ಒತ್ತಾಯ ತರಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದರು ಸಮಾಜ ಕಲ್ಯಾಣ ಮಂತ್ರಿ ರಮೇಶ ಜಿಗಜಿಣಗಿ, ಹಾಗೆಯೇ ನಾಲ್ಕೈದು ಜನ ಶಾಸಕರೂ ಮಾತಾಡಿ ತಾವೆಲ್ಲಾ ಸೇರಿ ಒಂದು ವೇದಿಕೆ ರಚಿಸಿ ಅದರ ಮೂಲಕ ಬಿಜಾಪುರ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ತ್ವರಿತಗೊಳಿಸಲು ಒಗ್ಗಟ್ಟಿನಿಂದ ಪ್ರಯತ್ನಿಸುವ ಭರವಸೆ ನೀಡಿದರು.

ಬಿಜಾಪುರ ಜಿಲ್ಲೆಯಲ್ಲಿ 5 ನದಿಗಳೂ ಹರಿಯುತ್ತಿದ್ದರೂ, ಉತ್ತಮ ಭೂಮಿಯಿದ್ದರೂ ನೀರಿನ ಅಭಾವದಿಂದಾಗಿ ಗ್ರಾಮಾಂತರ ಪ್ರದೇಶದ ಜನ ಬಡತನ ನೀಗಿಸಲು ತಮ್ಮ ಮನೆ ಮಠ ಬಿಟ್ಟು ಗುಳೇ ಹೋಗುವ ಪರಿಸ್ಥಿತಿಯಿಂದ ಬಿಜಾಪುರ [illegible] ಈಗ ಎಚ್ಚರಗೊಂಡು ಅಂಥ ವೇದಿಕೆಗಳ ಮೂಲಕ ಮಂತ್ರಿಗಳ, ಶಾಸಕರ ಮೇಲೆ ಒತ್ತಾಯ ತರುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸ್ವಾಗತಾರ್ಹ. ಸಾಮೂಹಿಕ ಸಂಘಟನೆಗಳೂ ಎಡಪಕ್ಷಗಳೂ ಅಂಥ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ನೀಡುವುದು ಅಗತ್ಯ.

—ಎನ್. ಕೆ. ಉಪಾಧ್ಯಾಯ

ರಾಜಕೀಯದ ಅಪರಾಧಿಕರಣ ತಪ್ಪಿಸಬೇಕಾದರೆ ಕಾಂಗ್ರೆಸ್ ನೀತಿಗಳನ್ನು, ಮೌಲ್ಯಗಳನ್ನು ತಿರಸ್ಕರಿಸಬೇಕು

-ಪ್ರಕಾಶ್ ಕಾರಟ್

ಇತ್ತೀಚಿನ ಸಂಸತ್ ಅಧಿವೇಶನದಲ್ಲಿ ರಾಜಕೀಯದ ಅಪರಾಧೀಕರಣದ ಬಗ್ಗೆ ಬಹಳ ಚರ್ಚೆ ನಡೆಯಿತು. ಈ ವಿಷಯದ ಮೇಲೆ ವೋರಾ ಸಮಿತಿಯ ವರದಿಯನ್ನು ಸರಕಾರ ಬಿಡುಗಡೆ ಮಾಡಿದ ಹಿನ್ನೆಲೆಯಲ್ಲಿ ನಡೆದ ಚರ್ಚೆ ಇದು. ಆಗಿನ ಕೇಂದ್ರ ಗೃಹ ಕಾರ್ಯದರ್ಶಿ ತಯಾರಿಸಿದ ಈ ಇಲಾಖಾ ವರದಿ ಒಂದು ಸೀಮಿತ ಮಹತ್ವದ ವರದಿ. ಈ ವರದಿಯ ಪ್ರಕಾರ "ದೇಶದಲ್ಲಿ ಮಾಫಿಯಾಗಳು, ಕಳ್ಳಸಾಗಾಣಿಕೆ ಗ್ಯಾಂಗ್‌ಗಳು, ಮಾದಕ ದ್ರವ್ಯ ಸಾಗಾಣಿಕೆದಾರರು ಹಾಗೂ ಆರ್ಥಿಕ ಲಾಬಿಗಳು ಹರಡುತ್ತಿವೆ. ಈ ಕೆಲವು ವರ್ಷಗಳಲ್ಲಿ ಅಧಿಕಾರಶಾಹಿ/ಸರಕಾರೀ ಪದಾಧಿಕಾರಿಗಳು, ರಾಜಕಾರಣಿಗಳು, ಪತ್ರಿಕಾ ಮಾಧ್ಯಮದ ಮಂದಿ ಹಾಗೂ ಸರಕಾರಿಯೇತರ ವಲಯದಲ್ಲಿ ಮಹತ್ವದ ಸ್ಥಾನದಲ್ಲಿರುವ ವ್ಯಕ್ತಿಗಳೊಂದಿಗೆ ಒಂದು ವ್ಯಾಪಕ ಜಾಲ ಏರ್ಪಡಿಸಿಕೊಂಡಿದ್ದಾರೆ. ಮುಂದುವರಿದು "ಮಾಫಿಯಾಗಳ ಈ ಜಾಲ ಒಂದು ಸಮಾನಾಂತರ ಸರಕಾರವನ್ನೇ ನಡೆಸುತ್ತಿದೆ, ಪ್ರಭುತ್ವದ ಯಂತ್ರವನ್ನು ನಿರರ್ಥಕಗೊಳಿಸಿಬಿಟ್ಟಿದೆ" ಎನ್ನುತ್ತದೆ ಈ ವರದಿ. ನ್ಯಾಯಾಂಗ ವ್ಯವಸ್ಥೆಗೆ ಸೇರಿದವರು ಕೂಡಾ "ಈ ಮಾಫಿಯಾದ ಆಲಿಂಗನದಿಂದ ತಪ್ಪಿಸಿಕೊಂಡಿಲ್ಲ" ಎಂದಿರುವ ವರದಿ ಎಷ್ಟರಮಟ್ಟಿಗೆ ಇದು ಪ್ರಭುತ್ವಯಂತ್ರವನ್ನು ಬುಡಮೇಲು ಮಾಡಿದೆ, ತೆರಿಗೆ ಹಾಗೂ ಕಾನೂನು ಪಾಲನಾ ಅಧಿಕಾರಿಗಳನ್ನು ಭ್ರಷ್ಟಗೊಳಿಸಿ, ಅಂತಹವರ ವಿರುದ್ಧ ಏನೂ ಕ್ರಮ ಕೈಗೊಳ್ಳದಂತೆ ಯಶಸ್ವಿಯಾಗಿ ತಡೆದಿದೆ ಎಂದೂ ಬಹಿರಂಗ ಪಡಿಸಿದೆ.

ಒಂದು ಆರೋಪ ಪತ್ರವೇ ಸರಿ!

ಆದರೆ ಇಂತಹ ಕೋಲಾಹಲಕಾರಿ ಟಿಪ್ಪಣಿ ಮಾಡುವುದಕ್ಕಿಂತ ಮುಂದೆ ಹೋಗಲು ಈ ವರದಿಗೆ ಸಾಧ್ಯವಾಗಲಿಕ್ಕಿಲ್ಲ. ಏಕೆಂದರೆ ಅದೊಂದು ಕೇವಲ ಅಧಿಕಾರಶಾಹೀ ಕಸರತ್ತು ಮಾತ್ರ. ಈ ಸಮಸ್ಯೆಯನ್ನು ಎದುರಿಸಲು ಕೆಲವು "ತಾಂತ್ರಿಕ" ಕ್ರಮಗಳನ್ನಷ್ಟೆ ಸೂಚಿಸಲು ಅದಕ್ಕೆ ಸಾಧ್ಯವಾಗಿದೆ. ವಿವಿಧ ಬೇಹುಗಾರಿಕೆ ಹಾಗೂ ಕಾನೂನು ಪಾಲನಾ ಸಂಸ್ಥೆಗಳ ನಡುವೆ ಉತ್ತಮ ಸಂಯೋಜನೆ, ಉಚ್ಚ ಅಧಿಕಾರಿಗಳ ಒಂದು ಉಚ್ಚ ಮಟ್ಟದ ಸಮಿತಿ -ಇವೇ ಅದು ಸೂಚಿಸುವ ಪರಿಹಾರ. ಸಂಘಟಿತ ಅಪರಾಧಗಳು ಭುಗಿಲೆನ್ನಲು ಮೂಲಭೂತ ಕಾರಣ ಏನು, ಪ್ರಭುತ್ವದ ಯಂತ್ರ ಒಳಗೆ ಅದರ ವ್ಯಾಪ್ತಿ, ಎಲ್ಲಕ್ಕೂ ಮಿಗಿಲಾಗಿ ಸಾಮಾಜಿಕ ಪರಿಸ್ಥಿತಿಗಳಿಗೂ ಇದಕ್ಕೂ ಇರುವ ಅಂಗಾಂಗ ಸಂಬಂಧ ಏನು- ಇವೆಲ್ಲಾ ಈ ವರದಿ ಬರೆದ ವ್ಯಕ್ತಿಯ ಅರಿವಿನ ವ್ಯಾಪ್ತಿಯ ಹೊರಗಿನ ವಿಷಯಗಳು. ಆದರೂ ಈ ವರದಿ ಸರಕಾರ ಮತ್ತು ಪ್ರಭುತ್ವ ಹೇಗೆ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಶಾಮೀಲಾಗಿದೆ ಎಂಬುದರ ಬಗ್ಗೆ ಒಂದು ಆಪಾದನಾ ಪತ್ರವೇ ಸರಿ.

ಪೇಚಿನಿಂದ ತಪ್ಪಿಸಿಕೊಳ್ಳಲು ಕಾಂಗ್ರೆ ತಂತ್ರ ಜವಾಬ್ದಾರಿ ತಪ್ಪಿಸಿಕೊಳ್ಳಲು ಬಂಡವಾಳಶಾಹೀ ತಂತ್ರ

ಸಂಸತ್ತಿನ ಎರಡೂ ಸದನಗಳಲ್ಲಿ ಈ ಬಗ್ಗೆ ಚರ್ಚೆ ತನಗೆ ಸೂಕ್ತವಾಗುವ ರೀತಿಯಲ್ಲೇ ಇರುವಂತೆ ಕಾಂಗ್ರೆಸ್ ಪಕ್ಷ ಪ್ರಯತ್ನ ನಡೆಸಿತು. ಕೋಲಾಹಲ ಎಬ್ಬಿಸಿದ ನೈನಾ ಸಾಹ್ನಿ ಕೊಲೆ ಮೊಕದ್ದಮೆ ತನ್ನ ಪಕ್ಷದ ಕೆಲವು ವ್ಯಕ್ತಿಗಳತ್ತ ಬೊಟ್ಟು ಮಾಡುತ್ತಿರುವುದನ್ನು ಕಂಡ ಸರಕಾರ ಈ ವರದಿ ಮಂಡಿಸಿತು. ಆದ್ದರಿಂದ ಈ ಮೊಕದ್ದಮೆಯಿಂದಆಳುವ ಪಕ್ಷಕ್ಕಾದ ಮುಜುಗರವನ್ನು ತಪ್ಪಿಸಲು ಅದು ಎರಡು ರೀತಿಯಲ್ಲಿ ಪ್ರಯತ್ನಿಸಿತು.

ಮೊದಲನೆಯದಾಗಿ, ಕ್ರಿಮಿನಲ್‌ಗಳಿಗೆ ಎಲ್ಲಾ ರಾಜಕೀಯ ಪಕ್ಷಗಳೂ ಆಶ್ರಯ ನೀಡಿವೆ ಎಂದು ಸಾಧಿಸುವುದು. ಎರಡನೆಯದಾಗಿ ಈ ಪ್ರಶ್ನೆಯನ್ನು ಕೇವಲ ರಾಜಕೀಯ ಮತ್ತು ಕ್ರಿಮಿನಲ್‌ಗಳ ನಡುವಿನ ಕೂಟ ಎಂದು ಚಿತ್ರಿಸುವುದು. ಕೆಲವು ಬಂಡವಾಳಶಾಹಿ ವಿರೋಧ ಪಕ್ಷಗಳು ಕಾಂಗ್ರೆಸ್‌ನ ಈ ಬಲೆಗೆ ಬಿದ್ದವು. ಆದರೆ ಸಿಪಿಐ(ಎಂ) ಈ ಎರಡೂ ವಾದಗಳನ್ನು ತಿರಸ್ಕರಿಸುತ್ತದೆ. ಸಿಪಿಐ(ಎಂ) ಮತ್ತು ಎಡರಂಗದ ಪಶ್ಚಿಮ ಬಂಗಾಳ ಸರಕಾರ ಕೂಡಾ ಇತರ ಕಾಂಗ್ರೆಸ್ ಸರಕಾರಗಳಂತೆ ಕ್ರಿಮಿನಲ್ ಗಳು ಆಶ್ರಯ ನೀಡಿದೆ ಎಂದು ಜನಗಳನ್ನು ನಂಬಿಸಲು ಕಮ್ಯುನಿಸ್ಟ್-ವಿರೋಧಿ ಪಕ್ಷಗಳು ಕಳೆದ 18 ವರ್ಷಗಳಿಂದ ಮತ್ತೆ-ಮತ್ತೆ ಪ್ರಯತ್ನಿಸಿದರೂ ಯಶಸ್ವಿಯಾಗಿಲ್ಲ. ಏಕೆಂದರೆ ಜನ ತಮ್ಮ ಅನುಭವಗಳಿಂದಲೇ ಇದು ದೊಡ್ಡ ಸುಳ್ಳು ಎಂದು ಅರಿತಿದ್ದಾರೆ.

ಸಮಾಜದಲ್ಲಿ ಅಪರಾಧೀಕರಣ ಹೆಚ್ಚುತ್ತಿರುವುದು ರಾಜಕಾರಣಿಗಳು ಮತ್ತು ಕ್ರಿಮಿನಲ್‌ಗಳ ನಂಟಿನಿಂದಾಗಿ ಮಾತ್ರ ಎಂದು ಬಿಂಬಿಸಲು ಯತ್ನಿಸುವುದು ಕೂಡಾ ಆಳುವ ವರ್ಗಗಳ ಹಾಗೂ ಬಂಡವಾಳಶಾಹಿ ಮಾಧ್ಯಮದ ಸಾಮಾನ್ಯ ನಿಲುವು. ನಿಜ, ಕ್ರಿಮಿನಲ್ ಚಟುವಟಿಕೆಗಳಿಗೆ ರಾಜಕೀಯ ಆಶ್ರಯ ಅಥವಾ ಕ್ರಿಮಿನಲ್‌ಗಳು ರಾಜಕೀಯ ಪ್ರವೇಶಿಸುತ್ತಿರುವುದು ಒಂದು ಎದ್ದು ಕಾಣುತ್ತಿರುವ ಸಮಸ್ಯೆ. ಆದರೆ ಇದನ್ನು ಪ್ರತ್ಯೇಕವಾಗಿ ನೋಡುವುದು ಸರಿಯಿಲ್ಲ. ಏಕೆಂದರೆ ಇದು ಒಂದು ದೊಡ್ಡ ಕಾಯಿಲೆಯ ಎದ್ದು ಕಾಣುವ ಒಂದು ಲಕ್ಷಣವಷ್ಟೇ. ಈ ಕಾಯಿಲೆ ಗುಣಪಡಿಸಬೇಕಾದರೆ ಇನ್ನಷ್ಟು ಮೂಲಭೂತವಾದ ಸಾಮಾಜಿಕ ಕಾರಣಗಳಿಂ

'ರಾಜಕೀಯದ ಅಪರಾಧೀಕರಣ' ಇದು ಇತ್ತೀಚಿನ ದಿನಗಳಲ್ಲಿ ಬಹಳವಾಗಿ ಕೇಳಬರುತ್ತಿರುವ ಮಾತು. ಇದರರ್ಥ-ರಾಜಕೀಯದಲ್ಲಿ ಕ್ರಿಮಿನಲ್‌ಗಳ ಪ್ರವೇಶವಾಗಿದೆ ಅವರಿಗೆ ರಾಜಕಾರಣಿಗಳು ಪೋಷಣೆ ನೀಡುತ್ತಿದ್ದಾರೆಂದಷ್ಟೇ ಅಲ್ಲ, ಕ್ರಿಮಿನಲ್‌ಗಳು ರಾಜಕಾರಣಿಗಳಾಗುತ್ತಿದ್ದಾರೆ ಎಂದು. ಆದರೆ ಈ ಸಮಸ್ಯೆಯ ಆಳವಾದ ವಿಶ್ಲೇಷಣೆ ನಡೆಯುತ್ತಿಲ್ಲ - ನಡೆಯುದಂತೆ ಪ್ರಯತ್ನ ನಡೆದಿವೆ. ಒಂದೆಡೆ ಆಳುವ ಕಾಂಗ್ರೆಸ್(ಐ) ಮುಖಂಡರು ಎಲ್ಲಾ ಪಕ್ಷಗಳು ಇದಕ್ಕೆ ಹೊಣೆ ಎಂದು ತಮ್ಮ ಹೊಣೆಯಿಂದ ನುಣುಚಿಕೊಳ್ಳಲು ಪ್ರಯತ್ನಿಸಿದರೆ, ಇನ್ನೊಂದೆಡೆ ಆಳುವ ವರ್ಗಗಳು ಇದನ್ನು ರಾಜಕೀಯಕ್ಕಷ್ಟೆ ಸೀಮಿತಗೊಳಿಸಿ ತಾವು ಮೂಲಭೂತ ಕಾರಣ ಎಂಬ ಸತ್ಯ ಬಯಲಿಗೆ ಬರದಂತೆ ಪ್ರಯತ್ನಿಸುತ್ತಿದ್ದಾರೆ. ಈ ಸಮಸ್ಯೆಯ ಸ್ವರೂಪವೇನು, ಕಾರಣಗಳೇನು, ಆಳುವ ವರ್ಗಗಳು ಇದನ್ನು ತಮ್ಮ ಪ್ರಯೋಜನಕ್ಕೆ ಹೇಗೆ ಬಳಸಿಕೊಳ್ಳುತ್ತಿವೆ ಎಂಬ ಬಗ್ಗೆ ಎರಡು ಲೇಖನಗಳು.



ಉದಾರೀಕರಣವೂ, ಅಪರಾಧವೂ

-ಮಾನಿನಿ ಚಟರ್ಜಿ

ನಮ್ಮ ಸಂಸತ್ತು, ಮಾಧ್ಯಮಗಳು 'ರಾಜಕೀಯದ ಅಪರಾಧೀಕರಣ'ದ ಬಗ್ಗೆ ಬಿಸಿ-ಬಿಸಿ ಚರ್ಚೆ ನಡೆಸುತ್ತಿರುವ ವೇಳೆಯಲ್ಲೇ ಭಾರತ ಸರಕಾರ ಭಾರತೀಯ ಪೋಲೀಸರಿಗೆ ತರಬೇತಿ ಮತ್ತು ಸಲಹೆ ನೀಡಲು ಭದ್ರತಾ ಪರಿಣತರನ್ನು 'ಆಮದು' ಮಾಡುವ ಯೋಚನೆಯಲ್ಲಿದೆ ಎಂಬ ಸುದ್ದಿ ಬಂದಿದೆ. ಇದರ ಉದ್ದೇಶವನ್ನು ಹೀಗೆ ಸ್ಪಷ್ಟವಾಗಿ ವಿವರಿಸಲಾಗಿದೆಯಂತೆ-"ಉದಾರೀಕರಣದಿಂದಾಗಿ ಹೆಚ್ಚುತ್ತಿರುವ ಸಾಮೂಹಿಕ ಸಂಘರ್ಷಗಳನ್ನು ಭಾರತೀಯ ವ್ಯವಸ್ಥೆ ಎದುರಿಸಬೇಕಾಗಿ ಬಂದಿರುವ ಸಂದರ್ಭದಲ್ಲಿ ದೇಶೀ ಮತ್ತು ವಿದೇಶೀ ಖಾಸಗೀ ಹಣಹೂಡಿಕೆದಾರರಿಗೆ ಅವರ ಜೀವ ಮತ್ತು ಆಸ್ತಿಯ ಭರವಸೆ ನೀಡಲು ಭಾರತೀಯ ಭದ್ರತಾ ಸಿಬ್ಬಂದಿಗೆ ವಿದೇಶೀ ತರಬೇತಿ ಹಾಗೂ ಸಲಹೆ ಅಗತ್ಯವಾಗಿದೆ"! ಈ ಯೋಜನೆಗೆ ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮ 9.71ಲಕ್ಷ ಪೌಂಡು ಹಣ ನೀಡುತ್ತದೆ, ಭಾರತ ಸರಕಾರ ಇನ್ನೂ 4.67 ಕೋಟಿ ರೂ.ಯನ್ನು ನೀಡಬೇಕು. ಸರಕಾರ ಈ ಸುದ್ದಿಯನ್ನು ನಿರಾಕರಿಸಿಲ್ಲ.

ಅಂದರೆ ಉದಾರೀಕರಣದ ಹೆಸರಿನಲ್ಲಿ ಜಾಗತಿಕ ಬಂಡವಾಳಶಾಹಿಗೆ ಶರಣಾಗಿ ದೇಶದ ಆರ್ಥಿಕ ಸಾರ್ವಭೌಮತೆಯನ್ನು ಒತ್ತೆಯಿಟ್ಟಿರುವ ನರಸಿಂಹರಾವ್ ಸರಕಾರ ಈಗ ದೇಶದ ಸಾಮಾಜಿಕ ವ್ಯವಸ್ಥೆಯನ್ನೂ ತೆರೆದಿಡುತ್ತಿದೆ.

ಜನಸಾಮಾನ್ಯರ ಬಗ್ಗೆ ನಮ್ಮ ಪೋಲೀಸ್ ಪಡೆಯ ನಿಲುವು, ಭ್ರಷ್ಟಾಚಾರ, ಅದಕ್ಷತೆ, ನಿರ್ಲಕ್ಷ್ಯ ನೋಡಿದಾಗ ಈ ಪಡೆಯ ಸುಧಾರಣೆ ಅಗತ್ಯ ಎಂಬ ಬಗ್ಗೆ ಎರಡು ಮಾತಿಲ್ಲ. ಆದರೆ ನರಸಿಂಹರಾವ್ ಸರಕಾರದ ಉದ್ದೇಶ ಇದಲ್ಲ, ಹಿಂದೆ ಬ್ರಿಟಿಷ್ ಆಡಳಿತ ವಸಾಹತುಶಾಹೀ ಕೊಳ್ಳೆಯ ರಕ್ಷಣೆಗೆ ಪೋಲೀಸ್ ವ್ಯವಸ್ಥೆ ರೂಪಿಸಿದಂತೆ ಈಗ ಹೊಸ ಸುಲಿಗೆಕೋರರ, ದುಡ್ಡುಳ್ಳ ಪಟ್ಟಭದ್ರ ಹಿತಾಸಕ್ತಿಗಳ ರಕ್ಷಣೆಗೆ ವಿದೇಶೀ ಪರಿಣತರ ಆಮದು!

ಅಪರಾಧಗಳ ದಾಖಲೆ ಹೊಂದಿದ ದೇಶದ ನೆರವು!

ಆದರೆ ಒಂದು ವಿಷಯಕ್ಕೆ ಸರಕಾರಕ್ಕೆ ನಾವು ಧನ್ಯವಾದ ಹೇಳಬೇಕು. ಏಕೆಂದರೆ ಉದಾರೀಕರಣ ಸಾಮಾಜಿಕ ಸೆಳೆತಗಳನ್ನು, ಸಂಘರ್ಷಗಳನ್ನು ಉಂಟು ಮಾಡುತ್ತಿದೆ, ಇದು ಕಾನೂನು-ವ್ಯವಸ್ಥೆಯ ಸಮಸ್ಯೆಗಳನ್ನು ಹುಟ್ಟಿಸುತ್ತಿದೆ, ಅಪರಾಧೀಕರಣ ನಡೆಸುತ್ತಿದೆ ಎಂದು ಅದು ತನಗೆ ಅರಿವಿಲ್ಲದೆಯೇ ಅದು ಒಪ್ಪಿಕೊಂಡಿದೆ. ಇದನ್ನು ಎದುರಿಸಲು ಅದು ಇತರ ಎಲ್ಲಾ ಬಂಡವಾಳಶಾಹಿ ಸರಕಾರಗಳ ಸಿದ್ಧ ಸೂತ್ರವನ್ನು ಅನುಸರಿಸಲು ಮುಂದಾಗಿವೆ ಅಂದರೆ ಭದ್ರತಾ ಪಡೆಗಳ ಮಾಂಸಖಂಡಗಳನ್ನು ಬಲಗೊಳಿಸುವ ಸನ್ನಹದಲ್ಲಿದೆ.

ಇಲ್ಲಿ ಇನ್ನೊಂದು ತಮಾಷೆಯ ಸಂಗತಿಯೆಂದರೆ ಭಾರತದಲ್ಲಿ ಹೆಚ್ಚುತ್ತಿರುವ ಅಪರಾಧೀಕರಣದ ಸಮಸ್ಯೆಯನ್ನು ಎದುರಿಸಲು ವಿಶ್ವಸಂಸ್ಥೆಯ ಹೆಸರಲ್ಲಿ ನೆರವು ಪಡೆಯುತ್ತಿರುವುದು ಯಾರಿಂದ ಗೊತ್ತೆ? ಅಮೇರಿಕಾ ಸಂಯುಕ್ತ ಸಂಸ್ಥಾನಗಳಿಂದ- ಏಷ್ಯಾದಲ್ಲೇ ಅತೀ ಹೆಚ್ಚು ಅಪರಾಧಗಳು ನಡೆಯುವ ಸ್ಥಳ ಎಂದು ಪಡೆದಿರುವ ಅಮೇರಿಕಾದಿಂದ! ಅಲ್ಲಿಯ ಸರಕಾರೀ ತನಿಖಾ ಸಂಘಟನೆ ಎಫ್.ಬಿ.ಐ. ಪ್ರಕಾರ ಕಳೆದ ಹತ್ತು ವರ್ಷಗಳಲ್ಲಿ ಒಟ್ಟಾರೆ ಅಪರಾಧ ದರ 19.2ಶೇ.ರಷ್ಟು ಏರಿದೆ. ಈಗ ಅಲ್ಲಿನ ಎರಡೂ ರಾಜಕೀಯ ಪಕ್ಷಗಳು ಅಪರಾಧೀಕರಣ ದೇಶದ ಮುಖ್ಯ ಸಮಸ್ಯೆ ಎಂದು ಒಪ್ಪಿಕೊಳ್ಳುತ್ತಾ ಅದಕ್ಕೆ ಪರಿಹಾರವಾಗಿ ಜೈಲುಗಳ ಸಂಖ್ಯೆ ಹೆಚ್ಚಿಸಲು ಹೆಚ್ಚಿನ ಹಣ ಮೀಸಲಿಡಬೇಕು ಎಂದು ಒತ್ತಾಯಿಸುತ್ತಿವೆ. ಕಳೆದ 13 ವರ್ಷಗಳಲ್ಲಿ ಈ ಶ್ರೀಮಂತ ದೇಶದ ಜೈಲಿನಲ್ಲಿರುವವರ ಸಂಖ್ಯೆ 188ಶೇ.ದಷ್ಟು ಹೆಚ್ಚಿದೆಯಂತೆ. ಜೈಲಿನಲ್ಲಿರುವ ತನ್ನ ನಾಗರಿಕರ ಪ್ರಮಾಣ ವಿಶ್ವದಲ್ಲೇ ಅತ್ಯಂತ ಹೆಚ್ಚಿರುವ ಹೆಗ್ಗಳಿಕೆ ಈ ದೇಶದ್ದು! ಆದ್ದರಿಂದ ಈ ದೇಶದ ಭದ್ರತಾ ತಜ್ಞರ ಆಮದು!

ಏಕೀ 'ಅಪರಾಧೀಕರಣ'?

ಅಮೇರಿಕಾದಂತಹ ಶ್ರೀಮಂತ ದೇಶಗಳಲ್ಲಿ ಅಪರಾಧೀಕರಣ ಹೆಚ್ಚಬೇಕಾದರೆ ಅದಕ್ಕೆ ನೇರ ಕಾರಣ ಅಲ್ಲಿಯ ಜನಸಾಮಾನ್ಯರ ಜೀವನಮಟ್ಟದ ಮೇಲೆ ಬಲಪಂಥೀಯ ಆಕ್ರಮಣ. ಅಂದರೆ ಒಂದುಸುಲಿಗೆಕೋರ ಬಂಡವಾಳಶಾಹಿ ತತ್ವ ಎಲ್ಲೆಡೆ ಅಸೆಬುರುಕತನ ಮತ್ತು ಅಸೂಯೆಯ ವಾತಾವರಣ ಸೃಷ್ಟಿಸುತ್ತದೆ. ಏಕೆಂದರೆ ಅದು ಬೆರಳೆಣಿಕೆಯಷ್ಟು ಜನರಿಗೆ ಮಾತ್ರ "ಉತ್ತಮ ಜೀವನ"ದ ಸಾಧನ-ಪರಿಕರಗಳನ್ನು ಪಡೆಯಲು ಅವಕಾಶ ನೀಡುತ್ತದೆ.

ಶೋಷಣೆಗೊಳಗಾದ ಜನಗಳ ಸಿಟ್ಟಿನೆದುರು, ಹೊಸ ಆರ್ಥಿಕ ನೀತಿಗಳಿಗೆ ಅವರ ಪ್ರತಿರೋಧ ಹಾಗೂ ಒಂದು ನೈಜ ಪರ್ಯಾಯ ವ್ಯವಸ್ಥೆಗಾಗಿ ಅವರ ಹೋರಾಟದ ಎದುರು ಅತ್ಯುತ್ತಮ ತರಬೇತಿ ಪಡೆದ, ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜಿತರಾಗಿರುವ ಪೋಲೀಸರ ನೆರವಿನಿಂದ ಭಾರತವನ್ನು "ಬಂಡವಾಳ ಹೂಡಿಕೆಗೆ ನಿರಪಾಯ ಪ್ರದೇಶ"ವಾಗಿಸಲು ಸಾಧ್ಯವಿಲ್ಲ.

ಭಾರತದಲ್ಲೂ ಇದೇ ಪರಿಸ್ಥಿತಿ ನಿರ್ಮಾಣವಾಗಿದೆ. ಪತ್ರಿಕೆಗಳು ನೈನಾಸಾಹ್ನಿ ಕೊಲೆ ಕೇಸಿನ ಬಗ್ಗೆಯಷ್ಟೇ ಗಮನ ಕೇಂದ್ರೀಕರಿಸಿವೆ. ಆದರೆ ಸಮಸ್ಯೆ ಇನ್ನೂ ಬಹಳ ಆಳವಾಗಿದೆ. ಇದು ಆಕಸ್ಮಾತ್ ನಡೆದಿರುವ ಘಟನೆಯೂ ಅಲ್ಲ, ಕೇವಲ ರಾಜಕೀಯಕ್ಕೆ ಸೀಮಿತಗೊಂಡ ಸಂಗತಿಯೂ ಅಲ್ಲ. ಎಲ್ಲವನ್ನೂ ರಾಜಕೀಯದ ಮಂದಿಯ ತಲೆಯ ಮೇಲೆ ಹಾಕಿ ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ, ತಮ್ಮ ಅಪರಾಧಗಳನ್ನು ಮುಚ್ಚಿಕೊಳ್ಳುವ ಒಂದು ಪ್ರವೃತ್ತಿ ಈ ದೇಶದ ಶ್ರೀಮಂತರಲ್ಲಿ, ಮೇಲ್ವರ್ಗದ ಜನರಲ್ಲಿ ಬೆಳೆಯುತ್ತಿದೆ.

ಸಮಾಜದಲ್ಲಿ ಅಪರಾಧೀಕರಣ ಏಕೆ ನಡೆಯುತ್ತದೆ? ಕಾನೂನಿನ ಎದುರು ಎಲ್ಲರೂ ಸಮಾನರು ಎಂಬುದು ನ್ಯಾಯ ವ್ಯವಸ್ಥೆಯ ಸಾರಾಂಶ. ಇದರ ಉಲ್ಲಂಘನೆಯೇ ಅಪರಾಧೀಕರಣದ ಮೂಲ. ಶಕ್ತಿಶಾಲಿಗಳಿಗೊಂದು ಕಾನೂನು, ಬಡವರಿಗೆ-ಬಲಹೀನರಿಗೆ ಇನ್ನೊಂದು ಕಾನೂನು ಎಂಬುದು ನಮ್ಮ ದೇಶದಲ್ಲಿ ಬಹಳಕಾಲದಲ್ಲಿ ಕಂಡುಬಂದಿರುವ ಸಂಗತಿ. ಮಾತಿನಲ್ಲಿ ನ್ಯಾಯ, ಸಮಾನತೆಯ ಬಗ್ಗೆ ಹೇಳಿದರೂ ವಾಸ್ತವದಲ್ಲಿ ಅದನ್ನು ನಿರಾಕರಿಸುವ ಒಂದು ವ್ಯವಸ್ಥೆ ಕಾನೂನಿನ ಬಗ್ಗೆಯೇ ಸಿನಿಕತನ ಹುಟ್ಟಿಸುತ್ತದೆ. ಇದು ಅಪರಾಧೀಕರಣವನ್ನು ಪೋಷಿಸುತ್ತದೆ. ಜನಸಾಮಾನ್ಯರು ತಮ್ಮ ಜೀವನದ ಪ್ರತಿ ಗಳಿಗೆಯಲ್ಲಿ -ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸಲಾಗಲಿ', ಗ್ಯಾಸ್ ಕನೆಕ್ಷನ್ ಪಡೆಯ ಲಾಗಲಿ ಹಣ ಅಥವಾ 'ಸೂಕ್ತ' ಜನಗಳ ಬಾಲ ಹಿಡಿಯಬೇಕಾದ ಪರಿಸ್ಥಿತಿಯಲ್ಲಿ ಇನ್ನೇನಾಗಲೂ ಸಾಧ್ಯ?

ಮೇಲ್ವರ್ಗದ 'ಮಾದರಿ'!

ಹಿಂದೆ ಪಾಳೆಯಗಾರಿ ಸಮಾಜದಲ್ಲಿ ಜನಸಾಮಾನ್ಯರು ತಮ್ಮ ಹಣೆಬರಹವನ್ನು ಹಳಿದು ಸುಮ್ಮನಿರುತ್ತಿದ್ದರು. ಸ್ವಾತಂತ್ರ್ಯದ ಮೊದಲ ಕೆಲವು ವರ್ಷಗಳಲ್ಲಿ ರಾಜಕೀಯದ ಮಂದಿ ಹುಟ್ಟಿಸಿದ್ದ ನ್ಯಾಯ ಹಾಗೂ ಕಲ್ಯಾಣದ ನಿರೀಕ್ಷೆ ಕ್ರಮೇಣ ಹುಸಿಯಾಗಲಾರಂಭಿಸಿತು. ಈಗ 'ಉದಾರೀಕರಣ' ದ ಹೆಸರಿನಲ್ಲಿ ಒಂದು ಅತ್ಯಂತ ನಿರ್ದಯ ಬಂಡವಾಳಶಾಹಿಯನ್ನು ಈಗಾಗಲೇ ಅನ್ಯಾಯದಿಂದ ತುಂಬಿದ ವ್ಯವಸ್ಥೆಯ ಮೇಲೆ ಹೇರಲಾಗಿದೆ. ಹಿಂದೆ ಜಾತಿ, ಕುಟುಂಬದ ಹೆಸರಲ್ಲಿ ಜನ ಮೇಲೇರಲು ಪ್ರಯತ್ನಿಸುತ್ತಿದ್ದರೆ, ಈಗ ಇವಕ್ಕೆಲ್ಲಾ ಹಣದ ಶಕ್ತಿ ಬಳಸಬೇಕಾಗುತ್ತದೆ. 'ದುಡ್ಡು ಮಾಡುವ ದಾರಿಯ ಬಗ್ಗೆ ಏಕೆ ಯೋಚಿಸುತ್ತೀರಿ, ಹೇಗಾದರೂ ಹಣ ಮಾಡುವುದೇ ಮುಖ್ಯ ಎಂಬ ತತ್ವವನ್ನು ಪ್ರತಿದಿನವೆಂಬಂತೆ ನಡೆಯುವ ಕೋಟಿಗಟ್ಟಲೆ ರೂಪಾಯಿಗಳ ಹಗರಣಗಳು ಸಾಕುತ್ತಿರುವಾಗ ಪ್ರತಿದಿನ ಸಣ್ಣ ಪುಟ್ಟ ಕ್ರಿಮಿನಲ್ ಗಳು ಹುಟ್ಟಿಕೊಳ್ಳುವುದು, ಕ್ರಮೇಣ ಅವರು ಸಣ್ಣ ಪುಟ್ಟ ಕ್ರಿಮಿನಲ್ ಗಳಾಗೇ ಉಳಿಯದೆ ತೆಳೆಯುವುದರಲ್ಲಿ ಆಶ್ಚರ್ಯವೇನು? ಟೆಲಿವಿಷನ್

ರಾಧೀಕರಣದ ಪ್ರಕ್ರಿಯೆ ಏಕೆ ದೆ ಎಂಬುದನ್ನು ಸಮಗ್ರವಾಗಿ ವಾಗಿ ಪರಿಶೀಲಿಸಬೇಕಾಗುತ್ತದೆ. ರಾಜಕಾರಣಿ-ಕ್ರಿಮಿನಲ್ ನಂಟು ವಾಗಿ ಹೇಳಿಬಿಡುವುದನ್ನು ನಂಬು ವಾಳ-ಭೂಮಾಲಕ ವರ್ಗಗಳಿಗೆ ನುಕೂಲಕರ. ಏಕೆಂದರೆ ಆಗ ಲ್ಲಾ ಪಕ್ಷಗಳು, ರಾಜಕಾರಣಿಗಳು ಧೀರ...ಕ್ಕೆ ಹೋಣೆ" ಎಂದು ಹೇಳಿ ಪ್ರಾಥಮಿಕ ಜವಾಬ್ದಾರಿಯಿಂದ ಸಾಧ್ಯವಾಗುತ್ತದೆ. ರಾಜಕೀಯದ ದ್ವೇಷವಿರುವ ಮಧ್ಯಮ ವರ್ಗದ ನ್ನು ಇದು ಮತ್ತಷ್ಟು ಪೋಷಿಸು ಅವರು ಸುಲಭವಾಗಿ ಒಪ್ಪಿ ಕೀಯವೇ 'ಹೊಲಸು' ಎಂದು ಬಂಡವಾಳಶಾಹಿ-ಭೂಮಾಲಕ ಲೆಗೆ ಬೀಳುತ್ತಾರೆ.

ಲೆಯ ಮೂಲವನ್ನು ಗುರುತಿಸಿ

ತ್ರಿಗಳು ರಾಜಕೀಯದ ಅಪರಾ ತನ್ನ ಪಕ್ಷದ ಪಾತ್ರದ ಬಗ್ಗೆ ಟೀಕೆ ಸಿಕೊಳ್ಳಲು ಹೆಚ್ಚಿನ ಇಂತಹ ಅಪ ರಾಜ್ಯಗಳಲ್ಲಿ ನಡೆಯುವುದರಿಂದ ಈಗಿನಂತೆ ರಾಜ್ಯ ಸರಕಾರಗಳ



ಬದಿಯ ದೊಡ್ಡ-ದೊಡ್ಡ ಜಾಹೀ ನಮಗೆ ಅಗತ್ಯವಿಲ್ಲದ, ಕೊಳ್ಳಲು ರೂ ಇಲ್ಲದ ಸರಕುಗಳನ್ನು ಕೊಂಡು ಮು ಸತತ ಬೊಬ್ಬೆ ಹಾಕುತ್ತಿದ್ದರೆ. ತ್ತದೆ? ನೇರ ಅವಕಾಶಗಳು ಅಡ್ಡದಾರಿ ಹಿಡಿಯುತ್ತಾರೆ. ಅದಕ್ಕೆ ಮೇಲ್ವ ರ್ಗದ ಜನಗಳೇ ಮಾದ ತ್ತಾರೆ.

ರೀಕರಣದ ಹಿಂದಿರುವ ಶಕ್ತಿಗ ಲ್ಲ ಗೊತ್ತಿಲ್ಲವೆಂದೇನಲ್ಲ. ಅತೀ ಪತ್ತು, ಅವಕಾಶಗಳು ಇರುವ ತನ್ನ ಜನಗಳನ್ನೂ ಸಂತೃಪ್ತರಾಗಿ ರಲ್ಲಿ ವಿಫಲವಾಗಿರುವಾಗ ಎಫ್.-ವಿಶ್ವಬ್ಯಾಂಕ್ ದಾರಿ ಹಿಡಿದು ಸಂಪತ್ತು, ಬಹುಪಾಲು ಜನಸಾ ದಾರಿದ್ರ್ಯವನ್ನು ನೀಡಿರುವ ದೇಶ ತಹ ಸಂತೃಪ್ತಿಯನ್ನು ನಿರೀಕ್ಷಿಸು ಇಲ್ಲ. ಇದರಿಂದ ಸಾಮಾಜಿಕ ಕ್ರೋಧ, ಪ್ರತಿಭಟನೆಗಳು ಹೆಚ್ಚು ರಾಧವೂ ಹೆಚ್ಚುತ್ತವೆ ಎಂದು ಭಯ ರುವ ವಿಶ್ವ ಬಂಡವಾಳಶಾಹಿ ಶಕ್ತಿ ತದಂತಹ ದೇಶಗಳ ಆಂತರಿಕ ವ್ಯವಸ್ಥೆಯ ಉಸ್ತುವಾರಿಯನ್ನು ವೇ ನಡೆಸುವ ಪ್ರಸ್ತಾಪ ಇಟ್ಟಿದೆ. ತಾ ಪರಿಣಿತರ ಆಮದು ಉದಾ ನೀತಿಯ ಅಭಿನ್ನ ಅಂಶ. ಆದರೆ ಳಗಾದ ಜನಗಳ ಸಿಟ್ಟಿನೆದುರು, ರ್ಥಿಕ ನೀತಿಗಳಿಗೆ ಅವರ ಪ್ರತಿ ...ಂದು ನೈಜ ಪರ್ಯಾಯ ಅವರ ಹೋರಾಟದ ಎದುರು ತರಬೇತಿ ಪಡೆದ, ಅತ್ಯಾಧುನಿಕ ಸಜ್ಜಿತರಾಗಿರುವ ಪೋಲೀ ಂದ ಭಾರತವನ್ನು "ಬಂಡವಾಳ ...ಸಿರಿವಾಯ ಪ್ರದೇಶ"ವಾಗಿಸಲು □

ಕೋರಿಕೆಯಿಲ್ಲದೆಯೇ ಇನ್ನು ಮುಂದೆ ನೇರವಾಗಿ ಇಂತಹ ಅಪರಾಧಗಳ ತನಿಖೆ ನಡೆಸಲು ಅಧಿಕಾರ ನೀಡಬೇಕೆಂಬ ಕುಯುಕ್ತಿಯ ಸಲಹೆ ನೀಡಿದರು. ಶೇರು ಹಗರಣದ ತನಿಖೆಯಲ್ಲಿ ಸಿಬಿಐನ ಪಾತ್ರದ ಬಗ್ಗೆ ಜಂಟಿ ಸಂಸದೀಯ ಸಮಿತಿಯ ಸರ್ವಸಮ್ಮತ ವರದಿ ಮಾಡಿರುವ ಟಿಪ್ಪಣಿ ಸಿಬಿಐ ಅನ್ನು ರಾವ್ ಸರಕಾರ ಹೇಗೆ ತನ್ನ ಪ್ರಯೋಜನಕ್ಕೆ ಬಳಸುತ್ತಿದೆ ಎಂಬುದಕ್ಕೊಂದು ಉದಾಹರಣೆ. ಹೀಗಿರುವಾಗ ಸಿಬಿಐಗೆ ಈ ರೀತಿ ಅಧಿಕಾರ ನೀಡುವುದು ರಾಜ್ಯಗಳ ಅಧಿಕಾರಗಳನ್ನು ಮೊಟಕುಗೊಳಿಸಬಹುದಷ್ಟೇ, ರಾಜಕೀಯದ ಅಪರಾಧೀಕರಣದ ಸಮಸ್ಯೆಯನ್ನು ಪರಿಹರಿಸುವುದಿಲ್ಲ. ಅದನ್ನು ಕೇಂದ್ರದ ಆಳುವ ಪಕ್ಷದ ಪ್ರಯೋಜನಕ್ಕೆ ದುರುಪಯೋಗ ಪಡಿಸಿಕೊಳ್ಳಲು ಅವಕಾಶ ನೀಡುತ್ತದಷ್ಟೆ.

ಗುತ್ತೇದಾರಿಗಳ, ಹಳ್ಳಿ-ಪಟ್ಟಣಗಳ ಶ್ರೀಮಂತರ ಅಪರಾಧಗಳನ್ನು ಬಂಡವಾಳಶಾಹಿ-ಭೂಮಾಲಕ ಆಳ್ವಿಕೆಯು ಅಪರಾಧಗಳೆಂದೇ ಭಾವಿಸುವುದಿಲ್ಲ. ಭ್ರಷ್ಟ ರಾಜಕಾರಣಿಗಳ, ಸಿವಿಲ್ ಅಧಿಕಾರಿಗಳ, ಪೋಲೀಸ್ ಅಧಿಕಾರಿಗಳ ಹಾಗೂ ದೊಡ್ಡ ಕಾಂಟ್ರಾಕ್ಟರುಗಳ ಕೂಟ ರಚಿಸುವವರು ಇದೇ ಆಳುವ ವರ್ಗಗಳ ಮಂದಿ. ಅಪರಾಧಿಕರಣದ ಮೂಲ ಇದು.

ಒಟ್ಟಿನಲ್ಲಿ ಅಪರಾಧಗಳು ಹೆಚ್ಚುತ್ತಿರುವುದು ಹಾಗೂ ಇಡೀ ಸಮಾಜವನ್ನು ಅದರ ಕಬಂಧ ಬಾಹುಗಳು ಆಕ್ರಮಿಸಿಕೊಳ್ಳುವುದರ ಬಗ್ಗೆ ಕಾಂಗ್ರೆಸ್ ನ ನಿಲುವು: ಅದನ್ನೇ ಅನುಕರಿಸುತ್ತಿರುವ ಉಳಿದ ಬಂಡವಾಳಶಾಹಿ ಪಕ್ಷಗಳ ನಿಲುವು ಈ ರೋಗದ ಹೊರಲಕ್ಷಣವನ್ನಷ್ಟೇ ಕಾಣುತ್ತದೆಯೇ ಹೊರತು ರೋಗದ ಮೂಲಗಳನ್ನು ಉಪೇಕ್ಷಿಸುತ್ತದೆ. ರಾಜಕೀಯ ಅಪರಾಧೀಕರಣಗೊಳ್ಳುತ್ತಿದೆ ಎಂಬ ಕೂಗನ್ನು ಬಂಡವಾಳಶಾಹಿಗಳ ಗೋಸುಂಬೆತನದ ಸಿದ್ಧಾಂತವನ್ನು ಬೇಧಿಸಿ ನೋಡಿದಾಗ ಸಾಮಾಜಿಕ ಪರಿಸ್ಥಿತಿಗಳಿಂದ ಪ್ರತ್ಯೇಕಿಸಿ ಈ ಸಮಸ್ಯೆಯನ್ನು ಕಾಣಲು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಜನಗಳ ಶೋಷಣೆ ಮತ್ತು ದಾರಿದ್ರ್ಯ ಹೆಚ್ಚಿದಂತೆ "ಅಪರಾಧ"ಗಳೂ ಹೆಚ್ಚುತ್ತವೆ.

ದರಿದ್ರೀಕರಣ ಮತ್ತು ಅಪರಾಧೀಕರಣ

19ನೇ ಶತಮಾನದ ಮಧ್ಯಭಾಗದ ಇಂಗ್ಲೆಂಡಿನ ಪರಿಸ್ಥಿತಿ ಬಗ್ಗೆ ಎಂಗೆಲ್ಸ್ ಗಮನಿಸಿದ್ದ ಈ ಮಾತುಗಳನ್ನು ನೋಡಿ-"ಎಲ್ಲಾ ನಾಗರಿಕ ಸಮಾಜಗಳಲ್ಲಿ ಅಪರಾಧಗಳಲ್ಲಿ ಬಹಳಷ್ಟು ಆಸ್ತಿಯ ವಿರುದ್ಧ ನಡೆದಿರುವ ಅಪರಾಧಗಳು. ಅಂದರೆ ಒಂದಿಲ್ಲೊಂದು ರೀತಿಯ 'ಅಭಾವ'ದಿಂದ' ಉಂಟಾದವುಗಳು. ಏಕೆಂದರೆ ತನ್ನಲ್ಲಿ ಏನಿದೆಯೋ ಅದನ್ನು ಯಾರು ಕದಿಯುವುದಿಲ್ಲ".

ಭಾರತದಲ್ಲಿ ಬಂಡವಾಳಶಾಹೀ ಬೆಳವಣಿಗೆಯಿಂದಾಗಿ ಸತತವಾಗಿ ಉಂಟಾಗುತ್ತಿರುವ ದಿವಾಳೀಕರಣದಿಂದಾಗಿ ಸಹಜವಾಗಿಯೇ ಅಪರಾಧಗಳ ಸಂಖ್ಯೆಯೂ ನಿರಂತರವಾಗಿ ಏರುತ್ತಿದೆ. ಇವುಗಳಲ್ಲಿ ಬಹುಪಾಲು ಆಸ್ತಿಯ ವಿರುದ್ಧವಾದ ಅಪರಾಧ ಮತ್ತು ದಾರಿದ್ರ್ಯ ಅಭಾವದ ಸಾಮಾಜಿಕ ಪರಿಸ್ಥಿತಿಯಿಂದ ಉಂಟಾದದ್ದು ಎನ್ನಬಹುದು. ನಮ್ಮ ಇಡೀ ಕಾನೂನು ವ್ಯವಸ್ಥೆ ಇರುವುದು ಇಂತಹ 'ಅಪರಾಧ'ಗಳನ್ನು ಎದುರಿಸಲು! ಇದನ್ನು ನಮ್ಮ ಜೈಲುಗಳಲ್ಲಿ ಕಾಣಬಹುದು. ಈ ಜೈಲುಗಳು ಸಣ್ಣ ಕಳ್ಳತನದಿಂದ ದರೋಡೆಯವರೆಗೆ ವಿವಿಧ ಅಪರಾಧಗಳ ವಿಚಾರಣೆಗೊಳಪಟ್ಟ ಕೈದಿಗಳಿಂದ ತುಂಬಿ ತುಳುಕುತ್ತಿವೆ. ಆದರೆ ಭಾರತದಲ್ಲಿ ಅಪರಾಧೀಕರಣಕ್ಕೂ 19ನೇ ಶತಮಾನದ ಮಧ್ಯಭಾಗದಲ್ಲಿ ಇಂಗ್ಲೆಂಡಿನ ಬಂಡವಾಳಶಾಹಿ ಸಮಾಜದಲ್ಲಿ ಕಂಡು ಬಂದುದಕ್ಕೂ ವ್ಯತ್ಯಾಸವಿದೆ.

ದಾರಿದ್ರ್ಯವಿರುವ, ವರ್ಗಶೋಷಣೆಯ ಸಮಾಜದಲ್ಲಿ ಕಂಡು ಬರುವ ಹಲವು "ಸಣ್ಣ" ಅಪರಾಧಗಳಿಗೂ ಹೆಚ್ಚು ಮುಂದುವರಿದ ಬಂಡ

ಪುಟ 8 ನೋಡಿ

ಧರ್ಮ ಮತ್ತು ಅಪರಾಧೀಕರಣ!

ದೇಶದಲ್ಲಿ ರಾಜಕೀಯದ ಅಪರಾಧೀಕರಣದ ಬಗ್ಗೆ ಚರ್ಚೆ ನಡೆಯುತ್ತಿರುವಾಗ "ಧರ್ಮದ ಅಪರಾಧೀಕರಣ"ವೆನ್ನಬಹುದಾದ ಘಟನೆಗಳು ಮತ್ತೆ ಬೆಳಕಿಗೆ ಬಂದಿವೆ. ಮಾಫಿಯಾ ದೊರೆ ದಾವೂದ್ ಇಬ್ರಾಹಿಂನೊಂದಿಗೆ ಸಂಪರ್ಕವಿದೆಯೆನ್ನಲಾದ "ಧರ್ಮ ಪುರುಷ" ಚಂದ್ರಸ್ವಾಮಿಯ ಬಂಧನ ತಪ್ಪಿಸುವ ಪ್ರಯತ್ನ ನಡೆಯುತ್ತಿದ್ದರೆ, ಇನ್ನೊಂದೆಡೆ ಒಬ್ಬ ಸ್ವಾಮಿ ಈಗಾಗಲೇ ಬಂಧಿಸಲ್ಪಟ್ಟಿದ್ದಾನೆ.

ಸ್ವಾಮಿ ರಾಮೇಶ್ವರಾನಂದ ಎಂಬ ಈ ವ್ಯಕ್ತಿಯನ್ನು ಕೊಲೆ ಆಪಾದನೆಯ ಮೇಲೆ ಬಂಧಿಸಿರುವುದು. "ಸ್ವಯಂ 'ಘೋಷಿತ ಸಾಧುಗಳು ಮತ್ತು ಧಾರ್ಮಿಕ ಪಂಗಡಗಳ ಪ್ರತಿನಿಧಿಗಳು ಎನ್ನುವವರ ನಡುವೆ ಹೆಚ್ಚುತ್ತಿರುವ ಅಪರಾಧೀಕರಣ ದತ್ತ ಗಮನ ಸೆಳೆದಿದೆ" ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಎ.ಐ.ಡಿ.ಡಬ್ಲ್ಯು.ಎ. ಹೇಳಿದೆ. ಧರ್ಮದ ಹೆಸರಲ್ಲಿ ನಡೆಯುತ್ತಿರುವ ಕುರುಡು ಆಚರಣೆಗಳು ಕೂಡಾ ಮಹಿಳೆಯರು ಇಂತಹ ಕ್ರಿಮಿನಲ್ ವ್ಯಕ್ತಿಗಳಿಗೆ ಬಲಿಯಾಗುವಂತೆ ಮಾಡುತ್ತಿರುವುದನ್ನು ತಪ್ಪಿಸಲು ಸತತ ಪ್ರಚಾರ-ಪ್ರಕ್ಷೋಭೆ, ವಿಶೇಷವಾಗಿ ಇಲೆಕ್ಟ್ರಾನಿಕ್ಸ್ ಮಾಧ್ಯಮದಲ್ಲಿ ನಡೆಯಬೇಕು" ಎಂದು ಎ.ಐ.ಡಿ.ಡಬ್ಲ್ಯು.ಎ. ಹೇಳಿಕೆ ತಿಳಿಸಿದೆ.

"ಈ ಕ್ರಿಮಿನಲ್ ಗಳು -ಸಾಧುಗಳ ವೇಷದಲ್ಲಿರುವ ಆಧುನಿಕ ರಾವಣರು ಮಹಿಳೆಯರು ಹಾಗೂ ಹೆಣ್ಣು ಮಕ್ಕಳನ್ನು ಲೈಂಗಿಕವಾಗಿ ಶೋಷಿಸಿರುವ ಹಲವು ಕೇಸುಗಳಿವೆ. ಆಶ್ರಮಗಳನ್ನು ಈ ಉದ್ದೇಶಗಳಿಗೆ ಬಳಸಲಾಗುತ್ತಿದೆ. ಪ್ರಸ್ತುತ ಕೇಸಿನಲ್ಲೂ ಈ ಸ್ವಾಮಿಯ ಕೊಲೆ ಆಪಾದನೆಯಷ್ಟೇ ಅಲ್ಲ, ಆ ಮಹಿಳೆಯನ್ನು ಆಕೆ 14 ವರ್ಷದ ಬಾಲಕಿಯಾಗಿದ್ದಾಗಿನಿಂದಲೇ ಲೈಂಗಿಕವಾಗಿ ಶೋಷಿಸಿದ, ಜತೆಗೆ ಇತರ ಮಹಿಳೆಯರ ಮೇಲೂ ಅತ್ಯಾಚಾರ ನಡೆಸಿದ ಆರೋಪವೂ ಇದೆ" ಎಂದು ಎಐಡಿಡಬ್ಲ್ಯುಎ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ಹೇಳುತ್ತಾರೆ.

"ಪ್ರಭಾವಶಾಲಿ ರಾಜಕೀಯ ಪಕ್ಷಗಳು ಇಂತಹ ಸಾಧು-ಸ್ವಾಮಿಗಳಿಗೆ ಆಶ್ರಯ ನೀಡಿ ಇಂತಹ ಕ್ರಿಮಿನಲ್ ಗಳಿಗೆ ಗೌರವ ತಂದುಕೊಡುತ್ತಿರುವುದು ಖಂಡನಾರ್ಹ. ಬಿಜೆಪಿ ತನ್ನ ರಾಜಕೀಯ ಉದ್ದೇಶಕ್ಕಾಗಿ ಸಾಧುಗಳನ್ನು ಒಟ್ಟುಗೂಡಿಸುವುದು, ಆಳುವ ಪಕ್ಷದ ಮಂದಿ ಚಂದ್ರಸ್ವಾಮಿ ಯಂತಹ ಆಧ್ಯಾತ್ಮಿಕ ಗುರು'ಗಳೆಂಬ ಢೋಂಗಿಗಳ ಮುಂದೆ ಸಾಷ್ಟಾಂಗ ನಮಸ್ಕಾರ ಹಾಕುವುದರಲ್ಲಿ ಇದನ್ನು ನಾವು ಕಾಣಬಹುದು" ಎಂದಿರುವ ಎಐಡಿಡಬ್ಲ್ಯುಎ ಹೇಳಿಕೆ ಪ್ರಸ್ತುತ ಕೇಸಿನ ಬಗ್ಗೆ ಆಮೂಲಾಗ್ರ ತನಿಖೆ ನಡೆಸಬೇಕು, ದೇಶದ ವಿವಿಧ ಭಾಗಗಳಲ್ಲಿ ಎದ್ದು ಬರುತ್ತಿರುವ ಸಂಪದ್ಭರಿತ ಆಶ್ರಮಗಳ ಬಗ್ಗೆ ಸಾರ್ವಜನಿಕರು ಎಚ್ಚರ ವಹಿಸಬೇಕು ಎಂದು ಆಗ್ರಹಿಸಿದೆ. □

ಸಾಲದ ಬಲೆಯಲ್ಲಿದ್ದೇವೆ ಎಂದು ಒಪ್ಪಿಕೊಳ್ಳುತ್ತಿದ್ದಾರೆ!


ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ವಾರ್ಷಿಕ ವರದಿಯನ್ನು ಹೊರತಂದಿದೆ. ಅದರಲ್ಲಿ ಇತರ ವಿಷಯಗಳ ಜೊತೆಗೆ ಭಾರತದ ವಿದೇಶೀ ಸಾಲದ ಪ್ರಮಾಣ ಎಷ್ಟು ಎಂಬುದನ್ನು ವಿಶ್ಲೇಷಿಸಲಾಗಿದೆ. 1995ರ ಮಾರ್ಚ್ ಕೊನೆಯ ವೇಳೆಗೆ ಭಾರತದ ವಿದೇಶೀ ಸಾಲ ಎಷ್ಟು ಗೊತ್ತೆ? ಅದು 95.32 ಶತಕೋಟಿ ಅಮೇರಿಕನ್ ಡಾಲರುಗಳು. ಅಂದರೆ ಇಂದಿನ ಮೂರು ಲಕ್ಷ ಐದು ಸಾವಿರ ಕೋಟಿ ರೂಪಾಯಿಗಳು!! ಇದು ಕಳೆದ ವರ್ಷಕ್ಕಿಂತ 4247 ದಶಲಕ್ಷ ಡಾಲರುಗಳಷ್ಟು ಹೆಚ್ಚಾಗಿದೆ.

ವಿದೇಶದಿಂದ ದೊಡ್ಡ ಪ್ರಮಾಣದಲ್ಲಿ ಸಾಲಪಡೆದದ್ದರಿಂದಲೇ ಈ ಹೆಚ್ಚಳ ಆಗಿರುವುದಲ್ಲ. ಡಾಲರೇತರ ಸಾಲದಲ್ಲಿ ಪುನರ್ಮೌಲ್ಯೀಕರಣ ಆಗಿದ್ದರಿಂದ ಈ ಹೆಚ್ಚಳ ಆಗಿದೆಯಂತೆ.

ಈ ಒಟ್ಟು ಪ್ರಮಾಣದ ಸಾಲದಲ್ಲಿ ಶೇ. 50 ವಿಶ್ವ ಹಣಕಾಸು ಸಂಸ್ಥೆ (ಇಂಟರ್ ನ್ಯಾಷನಲ್ ಮಾನಿಟರ್)ಯಿಂದ ಪಡೆದದ್ದು.

ಹಾಗೇ ದಿನದಿಂದ ದಿನಕ್ಕೆ ನಮ್ಮ ವಿದೇಶೀ ಸಾಲ ಏರುತ್ತಲೇ ಇದೆ. ಈಗ ಈ ವರ್ಷದಲ್ಲಿ ಆಮದನ್ನು ಇನ್ನೂ ಉದಾರೀಕರಿಸಿರುವುದರಿಂದ, ಭಾರತದಲ್ಲಿ ಬಂಡವಾಳ ಹೂಡುವುದನ್ನು ಮತ್ತು ಲಾಭವನ್ನು ವಿದೇಶಗಳಿಗೆ ವರ್ಗಾಯಿಸಿಕೊಳ್ಳುವುದನ್ನು ಉದಾರೀಕರಿಸಿರುವುದರಿಂದ ಆಮದು ತೀರ ಹೆಚ್ಚಾಗಿ ರಫ್ತು ಕಡಿಮೆಯಾಗುವ ಲಕ್ಷಣಗಳೆಲ್ಲ ಇವೆ. ಇದರಿಂದಾಗಿ ವ್ಯಾಪಾರ ಬಾಕಿ ಸಾಧ್ಯತೆ ಬಹಳ ಹೆಚ್ಚು.

ನರಸಿಂಹರಾವ್ ಸರಕಾರದ 51ನೇ ತಿಂಗಳಲ್ಲಿ



- ಜಿ.ಎಸ್. ಮಣಿ

ಆದರೆ ಸರ್ಕಾರ ಧೈರ್ಯದ ಮುಖವಾಡ ಹಾಕುತ್ತಿದೆ. ಪರಿಸ್ಥಿತಿ ಪೂರ್ತಿ ಹತೋಟಿಯಲ್ಲಿದೆ ಎಂಬಂತೆ ಪೋಸು ಕೊಡುತ್ತಿದೆ. ಆದರೆ ವಾಸ್ತವ ಮಾತ್ರ ಬೇರೆ.

ಬಜೆಟ್ ಖೋತಾ ಗಗನಕ್ಕೆ

ಜನಪರ ಕಾರ್ಯಕ್ರಮಗಳಿಗೆ ಬಡಜನರ ನೋವುಗಳನ್ನು ಪರಿಹರಿಸುವ ಕಾರ್ಯಕ್ರಮಗಳಿಗೆ ಹಣವೇ ಇಲ್ಲ. ಯಾಕೆಂದರೆ ಹೀಗೆ ಹಣ ನೀಡಿದರೆ ಸರ್ಕಾರದ ಬಜೆಟ್ ಖೋತಾ ಹೆಚ್ಚುತ್ತದೆ ಎಂದು ಗೋರ ಗಲಾಟೆ ಮಾಡಿ ಹಲವು ಯೋಜನೆಗಳನ್ನು ಕೈಬಿಟ್ಟು ಬಡಜನರ ನೋವುಗಳನ್ನು ಸರ್ಕಾರ ಹೆಚ್ಚಿಸಿದೆ. ಆದರೆ ಇಷ್ಟೆಲ್ಲ ಮಾಡಿ ಸರ್ಕಾರ ಬಜೆಟ್ ಖೋತಾ ಕಡಿಮೆ ಮಾಡಲು ಸಾಧ್ಯವಾಗಿದೆಯೇ?

ಖಂಡಿತವಾಗಿಯೂ ಇಲ್ಲ. ಭಾರತೀಯ ರಿಸರ್ವ್ ಬ್ಯಾಂಕ್ ನ ಪ್ರಕಾರ ಕೇಂದ್ರ ಸರ್ಕಾರದ ಬಜೆಟ್ ಕೊರತೆ 21786 ಕೋಟಿ ರೂಪಾಯಿಗಳಿಗೆ ಏರಿದೆ. ಆಗಸ್ಟ್ 5, 1993 ರಂದು 21727 ಕೋಟಿ ರೂಪಾಯಿಗಳಷ್ಟಿದ್ದದ್ದು ಆಗಸ್ಟ್ 5, 1995ರಂದು ಈ ಮೊತ್ತಕ್ಕೆ ಏರಿದೆ. ಇದು ಹೇಗೆ ಆಗಿದೆ? ಭಾರತೀಯ ರಿಸರ್ವ್ ಬ್ಯಾಂಕಿನಿಂದ ಕೇಂದ್ರ ಸರ್ಕಾರ ಇಷ್ಟು ಹೆಚ್ಚಿಗೆ ಸಾಲ ಪಡೆದಿರುವುದರಿಂದ ಇದು ಆಗಿದೆ. ಈ ಕೊರತೆ ಪ್ರಮಾಣವನ್ನು ಕಡಿಮೆ ಮಾಡಬೇಕೆಂದು ಭಾರತೀಯ ರಿಸರ್ವ್ ಬ್ಯಾಂಕ್ ಸರಕಾರಕ್ಕೆ ಸೂಚಿಸಿದೆ.

ಹೀಗೆ ಕೇಂದ್ರ ಸರ್ಕಾರ ಈ ಕೊರತೆ ಪ್ರಮಾಣವನ್ನು ಕಡಿಮೆ ಮಾಡದಿದ್ದರೆ ಕೇಂದ್ರ ಸರ್ಕಾರದ ಕಂದಾಯ ಆದಾಯದ ಬಹುತೇಕ ಭಾಗ ಈ ಸಾಲಕ್ಕೆ ಬಡ್ಡಿ ನೀಡಲಿಕ್ಕೇ ಹೋಗಿಬಿಡುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ಕೇಂದ್ರ ಸರ್ಕಾರ ಈ ಕೊರತೆಯನ್ನು ಕಡಿಮೆ ಮಾಡಬೇಕು.

ಇದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ಮೂರು ಕ್ರಮಗಳನ್ನು ಸೂಚಿಸಿದೆ. ಅದರ ಪ್ರಕಾರ ಒಟ್ಟಾರೆ ಸಾರ್ವಜನಿಕ ಸಾಲ ಎತ್ತುವುದನ್ನು ಸರ್ಕಾರ ಕಡಿಮೆ ಮಾಡಬೇಕು, ಕರ ವಸೂಲಿಯ ಪ್ರಮಾಣವನ್ನು ಹೆಚ್ಚಿಸಬೇಕು. ಉದಾರೀಕರಣದೊಂದಿಗೆ ಕರ ವಸೂಲಿ ತನ್ನಷ್ಟಕ್ಕೆ ತಾನೇ ಹೆಚ್ಚಾಗುತ್ತದೆ ಎನ್ನಲಾಗುತ್ತಿತ್ತು. ಆದರೆ ಹಾಗೆ ಆಗಿಲ್ಲ ಎಂಬುದು ಸ್ಪಷ್ಟ. ಇದಲ್ಲದೆ ಸರ್ಕಾರ ಇತರ ಖರ್ಚುಗಳನ್ನು ಕಡಿಮೆ ಮಾಡಬೇಕು.

ಆದರೆ ಕೇಂದ್ರ ಸರ್ಕಾರ ಈ ಕೊರತೆ ಕಡಿಮೆ ಮಾಡುವ ನೆಪದಲ್ಲಿ ಬಡಜನರಿಗೆ ನೀಡಬೇಕಾದ ನೆರವನ್ನು ಕಡಿತಗೊಳಿಸಿದೆಯೇ ಹೊರತು ಇತರ ಖರ್ಚುಗಳನ್ನಲ್ಲ. ಇದೇ ನೀತಿಯನ್ನು ಮುಂದುವರಿಸುವ ಧೋರಣೆಯನ್ನಂತೂ ಅದು ಸ್ಪಷ್ಟವಾಗಿ ಹೊಂದಿರುವಂತಿದೆ.

ಅದುರುತ್ತಿರುವ ರೂಪಾಯಿ

ರೂಪಾಯಿ ಪೂರ್ಣ ಪರಿವರ್ತನೆ ಬಂದಾಗ ಡಾಲರಿನೊಂದಿಗೆ ರೂಪಾಯಿ ಸ್ಪರ್ಧಿಸುವುದು ಸಾಧ್ಯವಿಲ್ಲ. ಆದ್ದರಿಂದ ಈ ಸುಧಾರಣೆ ಅಪಾಯಕಾರಿ ಎಂದು ಹಲವು ಪ್ರಗತಿ ಪರ ಅರ್ಥಶಾಸ್ತ್ರಜ್ಞರು ಹೇಳಿದ್ದರು. ಆದರೆ ಅನಂತರದ ದಿನಗಳಲ್ಲಿ ಅಂದರೆ ತೀರಾ ಇತ್ತೀಚಿನವರೆಗೆ ರೂಪಾಯಿ ಸ್ಥಿರವಾಗಿ ನಿಂತಿತ್ತು. ಇದಕ್ಕೆ ಕಾರಣವೂ ಇಲ್ಲದೆ ಇರಲಿಲ್ಲ. ಉದಾರೀಕರಣದಿಂದಾಗಿ ಅಪಾರ ಪ್ರಮಾಣದಲ್ಲಿ 'ಹಾಟ್ ಮನಿ' (ವಿದೇಶೀ ಹಣ) ಹರಿದು ಬಂತು. ಇದರಿಂದಾಗಿ ಭಾರತೀಯ ರಿಸರ್ವ್ ಬ್ಯಾಂಕ್ ನಲ್ಲಿ ಸಾಕಷ್ಟು ಪ್ರಮಾಣದಲ್ಲಿ ವಿದೇಶೀ ವಿನಿಮಯ (ಮುಖ್ಯವಾಗಿ ಡಾಲರು) ಬಳಸಿಕೊಂಡು ಭಾರತೀಯ ರಿಸರ್ವ್ ಬ್ಯಾಂಕ್ ರೂಪಾಯಿಯ ಬೆಲೆ ಕೆಳಗಿಳಿಯದಂತೆ ನೋಡಿಕೊಂಡಿತು.

ಆದರೆ ಇದನ್ನು ಎಷ್ಟು ದಿನ ಎಷ್ಟು ದೊಡ್ಡ ಪ್ರಮಾಣದಲ್ಲಿ ಮಾಡಲು ಸಾಧ್ಯ? ಈಗ ರೂಪಾಯಿಯ ಬೆಲೆ ದಿನೇ ದಿನೇ ಕುಸಿಯತೊಡಗಿರುವುದರಿಂದ ಎಲ್ಲರಿಗೂ ಭಯ ಮೂಡತೊಡಗಿದೆ.

ಒಂದು ಡಾಲರಿಗೆ ಸುಮಾರು 31.00 ರೂಪಾಯಿಗಳ ವಿನಿಮಯ ಮೌಲ್ಯವಿದ್ದದ್ದು ಕಳೆದವಾರ 33.90 ರೂಪಾಯಿಗಳಿಗೆ ಏರಿದೆ. ಅಂದರೆ ರೂಪಾಯಿಯ ಬೆಲೆ ಕುಸಿದಿದೆ.

ಈಗ ಎಲ್ಲರೂ ಇದಕ್ಕೆ ವಿವರಣೆ ಹುಡುಕತೊಡಗಿದ್ದಾರೆ. ಪೂರ್ಣ ಪರಿವರ್ತನೆ ಬಂದಿದ್ದರಿಂದ ರೂಪಾಯಿಯ ಬೆಲೆ ಏರಿಳಿತವಾಗುವುದು ಸಹಜ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಗೌರ್ನರ್ ಹೇಳಿದ್ದಾರೆ.

ಹಾಗೆಯೇ ಕೇಂದ್ರ ಹಣಕಾಸು ಮಂತ್ರಾಲಯದ ಕಾರ್ಯದರ್ಶಿ ಈ ರೂಪಾಯಿಯ ಬೆಲೆ ಕುಸಿತದಿಂದ ಆತಂಕ ಪಡುವಂತಹದ್ದೇನೂ ಇಲ್ಲ ಎಂದಿದ್ದಾರೆ. ಆದರೆ ಇದೇ ರೀತಿಯಲ್ಲಿ ಇದು ಮುಂದುವರಿದರೆ ಭಾರತದ ಆರ್ಥಿಕ ಪರಿಸ್ಥಿತಿ ಖಂಡಿತವಾಗಿಯೂ ಅಲ್ಲೋಲ ಕಲ್ಲೋಲವಾಗುತ್ತದೆ.

"ಸುಂಕದವರೇ ಸಹಾಯಮಾಡಿ"

ಸುಂಕದವರ ಮುಂದೆ ಕಷ್ಟ ಹೇಳಿಕೊಂಡಂತೆ ಎಂದು ಗಾದೆಯೇ ಇದೆಯಲ್ಲವೆ? ಸುಂಕದವ ಯಾರ ಕಷ್ಟವನ್ನು ಕೇಳಲಾರ. ಯಾಕೆಂದರೆ ಸುಂಕ ಸಂಗ್ರಹಿಸುವುದು ಅವನಿಗೆ ಲಾಭದಾಯಕ.

ಹಾಗೆಯೇ ನಮ್ಮ ನರಸಿಂಹರಾಯರು ಖಾಸಗಿ ವಲಯದವರನ್ನು ದೇಶದ ಬಡತನದ ನಿವಾರಿಸಲು ಸಹಾಯ ಮಾಡಿ ಎಂದು ಕೇಳಿಕೊಂಡಿದ್ದಾರೆ. ಉದಾರೀಕರಣವನ್ನು ತಮ್ಮ ಲಾಭ ಹೆಚ್ಚಿಸಿಕೊಳ್ಳಲು ಪೂರ್ಣವಾಗಿ ಬಳಸಿಕೊಳ್ಳುತ್ತಿರುವ ಇವರು ಬಡಜನರ ನೆರವಿಗೆ ಬರುವುದು ಎಂದಾದರೂ ಸಾಧ್ಯವೇ?

ಉದಾರೀಕರಣದ ರೂವಾರಿ ನರಸಿಂಹರಾಯರೇ, ಇದು ಗೊತ್ತಾಗುವುದಿಲ್ಲವೆ? ಗೊತ್ತಾಗುತ್ತದೆ. ಆದರೂ ಇಂತಹ ಕರೆ ನೀಡಲು ಅವರ ಗ... ...ತ್ತದೆ? ಅಲ್ಲವೆ?



ಹರ್ಯಾಣಾ: ಪ್ರವಾಹ ಪೀಡಿತ ಪ್ರದೇಶಗಳ ದುಸ್ಥಿತಿ

ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರೂ ರಾಜ್ಯ ಸಭಾ ಸದಸ್ಯರೂ ಆಗಿರುವ ಇ.ಬಾಲಾನಂದನ್ ನೇತೃತ್ವದ ಸಿಪಿಐ(ಎಂ)ನ ನಿಯೋಗವೊಂದು ಹರ್ಯಾಣಾದ ಪ್ರವಾಹ ಪೀಡಿತ ಜಿಲ್ಲೆ ರೋಹ್ಟಕ್ ನ ಪ್ರವಾಸ ನಡೆಸಿದ್ದು ಅಲ್ಲಿ ಶೋಚನೀಯ ಸ್ಥಿತಿ ಹಾಗೂ ಆಡಳಿತದ ನಿರ್ಲಕ್ಷ್ಯದ ನಿಲುವಿನ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಒಂದು ಮನವಿ ಪತ್ರ ಸಲ್ಲಿಸಲು ನಿರ್ಧರಿಸಿದೆ.

ಈ ಪ್ರದೇಶದ ಪ್ರವಾಹದ ತೀವ್ರತೆಯನ್ನು ಸರಕಾರಿ ವರದಿಗಳಾಗಲಿ, ಪತ್ರಿಕಾ ವರದಿಗಳಾಗಲೀ ಸರಿಯಾಗಿ ಚಿತ್ರಿಸಿಲ್ಲ. ಇಡೀ ಇಡೀ ಪ್ರದೇಶಗಳೇ ನೀರಿನಲ್ಲಿ ಮುಳುಗಡೆಯಾಗಿದ್ದು ಒಂದು ನೂರಕ್ಕೂ ಹೆಚ್ಚು ಜನ ಪ್ರಾಣಗಳಂತೆ ಬದುಕು ಸಾಗಿಸಲೇಬೇಕಾಗಿ ಬಂದಿದೆ. ಈ ಜಿಲ್ಲೆಯಲ್ಲದೆ ಜಿಂದ್, ಭಿವಾನಿ ಮತ್ತಿತರ ಪಕ್ಕದ ಜಿಲ್ಲೆಗಳಲ್ಲೂ ಪ್ರವಾಹ ಭೀಕರ ಸ್ಥಿತಿ ಸೃಷ್ಟಿಸಿದೆ.

ಒಂದು ಗಂಭೀರ ಸಾಂಕ್ರಾಮಿಕ ಕಾಯಿಲೆ ಹರಡುವ ಸಂಭವವಿದೆಯೆಂದು ಸಿಪಿಐ(ಎಂ)ನ ನಿಯೋಗ ಹೇಳಿದೆ. ಸರಕಾರದ ನಿರ್ಲಕ್ಷ್ಯತನದಿಂದಲೂ ಎದೆಗುಂದದೆ ಹಲವು ಸ್ವಯಂ ಸೇವಾ ಸಂಸ್ಥೆಗಳು ಪರಿಸ್ಥಿತಿಯನ್ನು ಎದುರಿಸುವ ಪ್ರಯತ್ನ ನಡೆಸಿವೆ. ಹರ್ಯಾಣಾ ಜ್ಞಾನ ವಿಜ್ಞಾನ ಸಮಿತಿ ಒಂದು ವೈದ್ಯರ ತಂಡವನ್ನು ಸಂಘಟಿಸಿ ಸಾಂಕ್ರಾಮಿಕಗಳು ಹರಡದಂತೆ ಏನು ಮಾಡಬೇಕೆಂದು ತಿಳಿಸುತ್ತಿವೆ. ಆದರೆ ಸರಕಾರ ಮೂಲ ಔಷದಿಗಳನ್ನು ಪೂರೈಸದೇ ಇರುವುದರಿಂದ ಇತರ ಕೆಲಸ-ಕಾರ್ಯಗಳಿಗೂ ಅಡಚಣೆಯಾಗಿದೆ.

ಈ ಗಂಭೀರ ಪ್ರವಾಹಕ್ಕೆ ಮಾನವ ವಿಫಲತೆಯೇ ಮೂಲ ಕಾರಣ. ಒಂದು ತಿಂಗಳಿಂದ ಸಂಗ್ರಹವಾಗುತ್ತಿದ್ದು ಪ್ರವಾಹದ ನೀರು ಹರಿದು ಹೋಗುವಂತೆ ಮಾಡಲು ಸ್ಥಳೀಯ ಆಡಳಿತ ಏನೂ ಕ್ರಮ ವಹಿಸಲಿಲ್ಲ. ಪರಿಸ್ಥಿತಿಯನ್ನು ಎದುರಿಸಲು ಬೇಕಾದ ತುರ್ತು ಕ್ರಮಗಳ ಪಟ್ಟಿ ಮಾಡುತ್ತಾ ಸಿಪಿಐ(ಎಂ) ನಿಯೋಗ ಪ್ರವಾಹ ಪರಿಹಾರಕ್ಕೆ ಕೇಂದ್ರ ಹೆಚ್ಚಿನ ಹಣ ನೀಡಬೇಕು, ಸಾಕಷ್ಟು ಔಷಧಿಗಳ ಪೂರೈಕೆ, ಬಡ ರೈತರು ಮತ್ತು ಭೂ ಹೀನ ಕಾರ್ಮಿಕರೇ ಈ ಪ್ರವಾಹದಿಂದ ಅತೀ ಹೆಚ್ಚು ಸಂಕಷ್ಟಕ್ಕೊಳಗಾಗಿದ್ದು ಅವರಿಗೆ ಹೆಚ್ಚು ಪರಿಹಾರ ನೀಡಬೇಕು, ಅರ್ಧ ಬೆಲೆಯಲ್ಲಿ ಆಹಾರ ಸಾಮಗ್ರಿಗಳ ಪೂರೈಕೆ, ಆಹಾರಕ್ಕಾಗಿ ಕೆಲವು ಯೋಜನೆ ಇತ್ಯಾದಿಗಳ ಬಗ್ಗೆ ನಿಯೋಗದ ಮನವಿ ಪತ್ರ ಒತ್ತಾಯಿಸಿದೆ.

ಒಂದು ಪರ್ಯಾಯ ಪ್ರವಾಹ ಹತೋಟಿ ಯೋಜನೆ ರೂಪಿಸಲು ಹಾಗೂ ಆಡಳಿತ ವಿವಿಧ ಹಂತಗಳಲ್ಲಿ ಈ ದುಸ್ಥಿತಿಗೆ ಜವಾಬ್ದಾರರನ್ನು ಗುರುತಿಸಲು ಒಂದು ಉಚ್ಛ ಮಟ್ಟದ ತನಿಖೆ ಅಗತ್ಯ ಎಂದು ಸಿಪಿಐ(ಎಂ) ನಿಯೋಗ ಹೇಳಿದೆ.

ವಾರಾಣಾಸಿಯಲ್ಲಿ ಭೂ ಹೋರಾಟ: ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರ ಬಂಧನ

ಸೆಪ್ಟೆಂಬರ್ 6ರಂದು 1500 ಸಿಪಿಐ(ಎಂ), ಎಐಕೆಎಸ್, ಎಐಎಡಬ್ಲ್ಯುಯು, ಎಐಡಿಡಬ್ಲ್ಯುಎ ಹಾಗೂ ಡಿವೈಎಫ್ಐ ಕಾರ್ಯಕರ್ತರು ಮಾಲೇಜ, ವಾರಣಾಸಿ ಮಹಾರಾಜ ಹಾಗೂ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕುಲಪತಿ ವಿಭೂತಿ ನಾರಾಯಣ್ ಸಿಂಗ್ ಕಾನೂನುಬಾಹಿರವಾಗಿ ತನ್ನದೆಂದು ಹೇಳಿಕೊಳ್ಳುತ್ತಿರುವ ಒಂದು ಎಕರೆ ಭೂಮಿಯಲ್ಲಿ ಅವರೇ ಗಿಡಗಳನ್ನು ನೆಟ್ಟರು.

ಈ ಭೂಮಿಯನ್ನು ತಲೆತಲಾಂತರದಿಂದ ಪರಿಶಿಷ್ಟ ಜಾತಿಯ ರೈತರು ಉಳುತ್ತಿದ್ದು ಅದನ್ನು ಅವರಿಗೇ ದೊರಕಿಸಿಕೊಡಲು ಕಳೆದ ಆರು ತಿಂಗಳಿಂದ ಹೋರಾಟ ನಡೆಯುತ್ತಿದೆ. ಈ ಹೋರಾಟದ ಭಾಗವಾಗಿ ಈ ಕಾರ್ಯಕ್ರಮ ನಡೆದಾಗ ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯ ಹಾಗೂ ಅಖಿಲ ಭಾರತ ಕೃಷಿ ಕೂಲಿಕಾರ ಸಂಘದ ಜಂಟಿ ಕಾರ್ಯದರ್ಶಿ ಸುನೀತ್ ಚೋಪ್ರಾ, ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಹಿರಾಲಾಲ್ ಯಾದವ್ ಮತ್ತು ಸ್ಥಳೀಯ ಸಿಪಿಐ(ಎಂ) ಕಾರ್ಯದರ್ಶಿ ಬಚನ್ ಸಿಂಗ್ ಮತ್ತಿತರರನ್ನು ಬಂಧಿಸಲಾಯಿತು.

ಅಲಹಾಬಾದ್‌ನಲ್ಲೂ ಇಂತಹ ಹೋರಾಟ ನಡೆಯುತ್ತಿದೆ. ನಾಲ್ಕು ದಶಕಗಳ ಹಿಂದೆ ಹರಿಜನ ಕಲ್ಯಾಣ ವಿಭಾಗಕ್ಕೆ ಮಾರಿದ್ದ ಭೂಮಿಯನ್ನು ಅದರ ಹಿಂದಿನ ಮ್ಯಾನೇಜರೇ ಅನುಭವಿತ್ತಿರುವುದರ ವಿರುದ್ಧ ಈ ಹೋರಾಟ ನಡೆಯುತ್ತಿದೆ. ಮಿರ್ಜಾಪುರ ಮತ್ತಿತರ ಮೂರು ಜಿಲ್ಲೆಗಳಲ್ಲೂ ಇಂತಹ ಹೋರಾಟ ನಡೆಯುತ್ತಿದೆ

ದಿಲ್ಲಿ ವಿಶ್ವವಿದ್ಯಾಲಯ-ಎಡಶಕ್ತಿಗಳ ಮಹತ್ವದ ವಿಜಯ

ಆಗಸ್ಟ್ 31ರಂದು ನಡೆದ ದಿಲ್ಲಿ ವಿಶ್ವವಿದ್ಯಾಲಯ ಅಧ್ಯಾಪಕರ ಸಂಘ(DUTA)ದ ಚುನಾವಣೆಗಳಲ್ಲಿ ಅಧ್ಯಕ್ಷ ಮತ್ತು ಇತರ ಸ್ಥಾನಗಳನ್ನು ಪ್ರಜಾಪ್ರಭುತ್ವವಾದಿ ಅಧ್ಯಾಪಕರ ರಂಗ(DTF) ಗೆದ್ದಿದ್ದು ಉತ್ತರ ಭಾರತದ ಈ ಚುನಾಯಿತ ಅಧ್ಯಾಪಕರ ಸಂಘಟನೆಯಲ್ಲಿ ಮತ್ತೆ ಎಡಶಕ್ತಿಗಳು ಪ್ರಧಾನ ಸ್ಥಾನ ಪಡೆಯುವಂತಾಗಿದೆ.

DTFನ ವಿಜೇಂದ್ರ ಸಿಂಗ್ ಬೆಜೆಪಿ ಬೆಂಬಲಿತ NDTF ಪ್ರತಿಸ್ಪರ್ಧಿ ಡಾ.ಶ್ರೀರಾಂ ಓಬೆರಾಯ್‌ರನ್ನು ಸೋಲಿಸಿದರು.

1990ರಲ್ಲಿ ಕಾಂಗ್ರೆಸ್(ಐ) ಮತ್ತು ಬಿಜೆಪಿ ಒಟ್ಟಾಗಿ ನೇತೃತ್ವ ನೀಡಿದ್ದ ಮಂಡಲ್-ವಿರೋಧಿ ಚಳುವಳಿಯ ಸಂದರ್ಭದಲ್ಲಿ ಆಗಿನ DUTA ಅಧ್ಯಕ್ಷ ಎಂ.ಎಂ.ಪಿ. ಸಿಂಗ್ ರಾಜಿನಾಮೆ ನಂತರ ಕಳೆದೆರಡು ಚುನಾವಣೆಗಳಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆದ್ದಿದ್ದಾರೆ. ಆದರೆ ಈ ವರ್ಷ ಎಡಶಕ್ತಿಗಳು ದಿಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರ ನಡುವೆ ಪ್ರಭಾವ ಗಳಿಸಿರುವುದನ್ನು ಈ ಚುನಾವಣೆಗಳು ತೋರಿಸಿವೆ.

ತ್ರಿಪುರಾ: ಅಲೆಮಾರಿ ಕೃಷಿಕರನ್ನು ನೆಲೆಗೊಳಿಸುವ ಒಂದು ಅಪೂರ್ವ ಪ್ರಯತ್ನ

ಚೆಡಚೆರಾ ತ್ರಿಪುರಾದ ಉತ್ತರ ಭಾರಗದ ಹೊರವಲಯದಲ್ಲಿರುವ ಒಂದು ಕೊಂಪೆ. ಹಸಿದು ಕಂಗಾಲಾಗಿ 2 ಕೆ.ಜಿ. ಅಕ್ಕಿ ಕೊಡಿ ಎಂದು ಆಹಾರ ಇಲಾಖೆಯ ಕಛೇರಿಯೆದುರು ಕೇಳಿದಾಗ ಕಾಂಗ್ರೆಸ್(ಐ)-ಟಿಯುಜೆಎಸ್ ಸರಕಾರ ದ ಪೋಲೀಸರ ಗುಂಡೇಟು ತಿಂದು ತಮ್ಮ ಕೆಲವು ಸಹಚರರನ್ನು ಕಳೆದುಕೊಂಡ ಅಲೆಮಾರಿ ಕೃಷಿಕರ ಒಂದು ಊರು. ಈಗ ಆ ಊರಿನ ಸ್ವರೂಪವೇ ಬದಲಾಗಿದೆ.

ಸೆಪ್ಟೆಂಬರ್ 11ರಂದು ರಾಜ್ಯ ಗೃಹ ಮಂತ್ರಿ ಸಮರ್ ಚೌಧರಿ ರಾಜ್ಯದ ಉನ್ನತ ಅಧಿಕಾರಿಗಳೊಂದಿಗೆ ಬಂದು ಅಲೆಮಾರಿ ಕೃಷಿಕರ ಜೀವನದಲ್ಲಿ ಕ್ರಾಂತಿ ತಂದಿರುವ ಯೋಜನೆಯ ಕಾರ್ಯಾನ್ವಯವನ್ನು ನೋಡಿದರು. ಈ ಬದಲಾವಣೆ ತಂದ ಮಂತ್ರದಂಡವೆಂದರೆ ರಾಜ್ಯ ಸರಕಾರದ "ಲೋಂಗ್ಟ್ರಾಕಣಿವೆ ನವೀನ ಯೋಜನೆ". ರಾಜ್ಯ ಸರಕಾರ ಮತ್ತು ಸ್ವಾಯತ್ತ ಜಿಲ್ಲಾ ಮಂಡಳಿ ಜಂಟಿಯಾಗಿ ಜಾರಿಗೆ ತಂದ ಈ ಕಾರ್ಯಕ್ರಮ ಈ ಅಲೆಮಾರಿ ಕೃಷಿಕರನ್ನು ಬಯಲು ಪ್ರದೇಶದ ರೈತರನ್ನಾಗಿ ನೆಲೆಗೊಳಿಸುವಲ್ಲಿ ಯಶಸ್ವಿಯಾಗಿದೆ.

ಈ ವರ್ಷ ಇಲ್ಲಿ, ಮುಂದಿನ ವರ್ಷದ ಇನ್ನೊಂದೆಡೆ ಎಂದು ತಲೆತಲಾಂತರದಿಂದ ಕಾಡು ಕಡಿದು ಜಮೀನು ಮಾಡಿ ಬೇಸಾಯ ಮಾಡುತ್ತಾ ಬಂದ ಈ ಜನಗಳ ಜೀವನ ವಿಧಾನ ಇವರಿಗೆ ಹೆಚ್ಚೆಂದರೆ 3ರಿಂದ 6 ತಿಂಗಳವರೆಗೆ ಮಾತ್ರ ಸಾಲುವ ಆಹಾರ ಧಾನ್ಯಗಳನ್ನು ಒದಗಿಸಿತ್ತು. ಜತೆಗೆ ಪರಿಸರದ ಸಮಸ್ಯೆಗಳು. ಇವನ್ನು ತಪ್ಪಿಸುವ ಉದ್ದೇಶ 1.59 ಕೋಟಿ ರೂ.ಗಳ ಈ ಯೋಜನೆಯದ್ದು.

ಸರಕಾರ ಬಂಡವಾಳ, ತಂತ್ರಜ್ಞಾನದ ನೆರವು ನೀಡಿ ಈ ಜನರು ತಮ್ಮ ಶ್ರಮದಿಂದಲೇ ತಮ್ಮದೇ ಬಯಲು ಸೀಮೆಯ ಜಮೀನನ್ನು ಮಾಡಿಕೊಳ್ಳುವಂತೆ ಪ್ರೇರೇಪಿಸುವುದು, ಅವರ ಈ ಶ್ರಮಕ್ಕೆ ತಕ್ಕ ಪ್ರತಿಫಲ ನೀಡುವುದು ಈ ಯೋಜನೆಯ ಮುಖ್ಯಾಂಶ. ಚೆಡಚೆರಾದ ನಾಲ್ಕು ಪಂಚಾಯತುಗಳಲ್ಲಿ ಮಾದರಿ ಯೋಜನೆಯಾಗಿ ಕೈಗೆತ್ತಿಕೊಂಡ ಈ ಕಾರ್ಯಕ್ರಮದಿಂದ ಈ ಬಡ ಕೃಷಿಕರು ತಮಗೆ 12 ತಿಂಗಳಿಗೆ ಬೇಕಾಗುವ ಆಹಾರ ಧಾನ್ಯಗಳನ್ನು ಬೆಳೆಯುವುದರೊಂದಿಗೆ ಮಾರಲು ಮಿಗುವಷ್ಟು ಬೆಳೆ ಪಡೆಯಲು ಸಾಧ್ಯವಾಗಿದೆ. ಬಂಜರು ಭೂಮಿಯೆಂದು ಬಿಟ್ಟಿದ್ದನ್ನು ಸರಕಾರದ ನೆರವಿನಿಂದ ಆಧುನಿಕ ವಿಧಾನಗಳಿಂದ ಕೃಷಿಯೋಗ್ಯ ಮಾಡಲು ಸಾಧ್ಯವಾಗಿದೆ.

ದೇಶಪ್ರೇಮದ....

ಪುಟ 2 ರಿಂದ

ಗಿದೆ. ಕೋರ್ಟ್ ಸೀಲ್‌ನ ಜೊತೆಗೆ ಎಸ್.ಅಸನ್ ಎರಡನೇ ದರ್ಜೆ ಮ್ಯಾಜಿಸ್ಟ್ರೇಟ್ ಅವರ ಸಹಿ ಹಾಗೂ 1.9.1942ರ ದಿನಾಂಕ ನಮೂದಿಸಲಾಗಿದೆ. ಮಾಜಿಸ್ಟ್ರೇಟ್ ಅವರ ಬರಹ ಇಂಗ್ಲೀಷ್ ನಲ್ಲಿದೆ.

ಈ ತಪ್ಪೊಪ್ಪಿಗೆ ಹೇಳಿಕೆ ನೀಡಿದ ಕಾರಣ ವಾಜಪೇಯಿ ಅವರು 'ರಕ್ಷಿತ'ರಾದರು. ಧೀರ ಸ್ವಾತಂತ್ರ್ಯ ಹೋರಾಟಗಾರರಾದ ಕಾಕುವ ಮತ್ತು ಮಹಾನವ ಅವರು ಕಠಿಣವಾದ ಪೋಲೀಸ್ ಹಿಂಸೆಯನ್ನು ಅನುಭವಿಸಬೇಕಾಗಿ ಬಂತು. ವಾಜಪೇಯಿ ಅವರ ಹೇಳಿಕೆಯಿಂದ ಇವರಿಗೆ 5 ವರ್ಷ ಕಠಿಣ ಜೈಲು ವಾಸದ ಶಿಕ್ಷೆಯನ್ನು ನೀಡಲಾಯಿತು. ಎಷ್ಟೇ ದಾಳಿ, ದೌರ್ಜನ್ಯ ಹಲ್ಲೆಗಳನ್ನು ಬ್ರಿಟಿಷ್ ಮಿಲಿಟರಿ ನಡೆಸಿದರೂ ಗ್ರಾಮಸ್ಥರು ಹೇಳದ ಹೆಸರುಗಳನ್ನು ನಂತರ ಮಹಾ 'ದೇಶಪ್ರೇಮಿ'ಯೆನಿಸಿಕೊಂಡ ವಾಜಪೇಯಿ ಅವರು ಹೇಳಿದರು.

ಇದರ ಆಧಾರದಲ್ಲಿ ಆ ಗ್ರಾಮಕ್ಕೆ ಒಟ್ಟಾರೆ 10,000 ರೂ. ದಂಡ ವಿಧಿಸಲಾಯಿತು. ಈ ಮೊತ್ತವನ್ನು 1942ರಲ್ಲಿ ಒಂದು ಪುಟ್ಟ ಗ್ರಾಮದ ಜನತೆ ನೀಡಲು ಸಾಧ್ಯವಾಗಲಿಲ್ಲ. ಆ ಕಾರಣವಾಗಿ ಬ್ರಿಟಿಷ್ ಮಿಲಿಟರಿ ಅವರ ಮನೆಗೆ ನುಗ್ಗಿ ಅವರ ಆಸ್ತಿ ಪಾಸ್ತಿ ಪದಾರ್ಥಗಳನ್ನು ದೋಚಿ, ಮನೆಗಳನ್ನು ನೆಲಸಮ ಮಾಡಿತ್ತು. ತಮ್ಮ ಸ್ವಾರ್ಥಕ್ಕಾಗಿ ಒಂದು ಗ್ರಾಮವನ್ನು, ಸ್ವಾತಂತ್ರ್ಯ ಹೋರಾಟಗಾರರನ್ನು ಹಿಡಿದು ಕೊಡುವ ಮೂಲಕ ಈ ಬಿಜೆಪಿ ಮಖಂಡ ಅವರು ಬ್ರಿಟಿಷರ ಏಜೆಂಟರಾಗಿ ಕೆಲಸ ಮಾಡಿರುವುದನ್ನು ಇತಿಹಾಸ ಮರೆಯಬೇಕೆ ಎಂಬುದು ಈಗಿನ ಪ್ರಶ್ನೆಯಾಗಿದೆ.

ವಿದ್ಯಾರ್ಥಿ- ಯುವಜನ ಸಮಾವೇಶದ ಒತ್ತಾಯ

(ಕಳೆದ ಸಂಚಿಕೆಯಲ್ಲಿ ಬೆಂಗಳೂರಿನಲ್ಲಿ ನಡೆದ ವಿದ್ಯಾರ್ಥಿ-ಯುವಜನ ರಾಜ್ಯ ಮಟ್ಟದ ಸಮಾವೇಶದ ಬಗ್ಗೆ ವರದಿಯನ್ನು ಓದಿರುವಿರಿ. ಸ್ಥಳಾಭಾವದಿಂದ ಆ ಸಮಾವೇಶದಲ್ಲಿ ಕೈಗೊಂಡ ನಿರ್ಣಯಗಳ ಬಗ್ಗೆ ಪ್ರಕಟಿಸಲಾಗಲಿಲ್ಲ. -ಈ ವಾರ ಪ್ರಕಟಿಸುತ್ತಿದ್ದೇವೆ.)

ಉದ್ಯೋಗ, ಶಿಕ್ಷಣ ಸಾಮಾಜಿಕ ನ್ಯಾಯ ಸಾಧಿಸುವ, ಆಗರ್ಭವಿರುವ ಪ್ರಾಕೃತಿಕ ಮಾನವ ಸಂಪನ್ಮೂಲದ ಸಾಮರ್ಥ್ಯ ಬಳಸಿ ಸಮಗ್ರ ಅಭಿವೃದ್ಧಿ ಸಾಧಿಸುವ ಪರ್ಯಾಯ ಮಾರ್ಗವಿದೆ. ಅದರ ಸಲುವಾಗಿ ಪ್ರಬಲ ಆಂದೋಲನ ನಡೆಸಲು ನಿರುದ್ಯೋಗ ಸಮಸ್ಯೆಯ ನಿವಾರಣೆ ಮತ್ತು ಶಿಕ್ಷಣದ ಅವಕಾಶಗಳ ವಿಸ್ತರಣೆ ಹಾಗೂ ಕರ್ನಾಟಕ ಅಭಿವೃದ್ಧಿಯ ಸಾಧನೆಗಾಗಿ ನಿರಂತರ ಹೋರಾಟ ನಡೆಸಲು ರಾಜ್ಯ ಸಮಾವೇಶ ನಿರ್ಧರಿಸಿತು. ಕೈಗಾರಿಕೆ, ಕೃಷಿ, ಸೇವಾ ಕ್ಷೇತ್ರಗಳಲ್ಲಿ ಕೇವಲ ಲಾಭಗಳಿಕೆಯ ದೃಷ್ಟಿಯಿಂದಾಗಿ ತರುತ್ತಿರುವ ಆಧುನಿಕ ತಂತ್ರಜ್ಞಾನ ಮಾನವ ಸಂಪನ್ಮೂಲಗಳನ್ನು ನಿರುಪಯುಕ್ತಗೊಳಿಸಿ ನಿರುದ್ಯೋಗವನ್ನು ಹೆಚ್ಚಿಸುತ್ತವೆಯಾದ್ದರಿಂದ ಇಂತಹ ಕ್ರಮಗಳನ್ನು ಸಮಾವೇಶ ವಿರೋಧಿಸಿತು.

ಗ್ರಾಮೀಣ ನಿರುದ್ಯೋಗ ನಿವಾರಣೆಗೆ ಪ್ರಗತಿಪರ ಭೂ ಸುಧಾರಣೆ ಅತ್ಯಗತ್ಯ ಎಂದೂ, ಗಣನೀಯ ಸಣ್ಣ-ಪುಟ್ಟ ಕೈಗಾರಿಕೆಗಳು, ಕುಶಲಕರ್ಮಿಗಳು ಹೊಸ ಕೈಗಾರಿಕಾ ನೀತಿ ಅಡಿಯಲ್ಲಿ ನಾಶಗೊಳ್ಳುತ್ತಿದ್ದು ಇದನ್ನು ಉತ್ಪಾದನಾ ಕ್ಷೇತ್ರದಲ್ಲಿ ಆಧುನೀಕರಣಗೊಳಿಸಿ ಇವುಗಳ ಗುಣಮಟ್ಟ ಮೇಲ್ಮಟ್ಟಕ್ಕೆ ತರುವ ಕ್ರಮಗಳನ್ನು ಕೈಗೊಳ್ಳಬೇಕು.

ಆಹಾರ ಸಂಸ್ಕರಣ ಕೈಗಾರಿಕೆಯಲ್ಲಿ ವಿದೇಶೀಯ ಬಹುರಾಷ್ಟ್ರೀಯ ಕಂಪೆನಿಗಳಿಗೆ ಅವಕಾಶ ಕೊಟ್ಟರೆ ದೇಶದಲ್ಲಿ ಉತ್ಪತ್ತಿಗೆ ಗಮನ ನೀಡಬೇಕು.

ನಿರುದ್ಯೋಗಿಗಳ ನೊಂದಾವಣೆಗೆ ಇರುವ ಅನೇಕ ಅಡ್ಡಿಗಳನ್ನು ನಿವಾರಿಸಬೇಕು, ಎಲ್ಲಾ ತಾಲೂಕುಗಳಲ್ಲಿಯೂ ಉದ್ಯೋಗ ವಿನಿಮಯ ಕೇಂದ್ರಗಳನ್ನು ಆರಂಭಿಸಬೇಕು. ಆ ಕೇಂದ್ರಗಳಲ್ಲಿರುವ ವ್ಯಾಪಕ ಭ್ರಷ್ಟಾಚಾರವನ್ನು ತಡೆಗಟ್ಟಬೇಕು. ಸರ್ಕಾರಿ ಹಾಗೂ ಖಾಸಗೀ ವಲಯದಲ್ಲಿ ಉದ್ಯೋಗ ನೇಮಕಾತಿಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಮಾಡಿಕೊಳ್ಳತಕ್ಕದ್ದು ಎಂದು ಸಮಾವೇಶ ಒತ್ತಾಯಿಸಿವೆ.

ವೃತ್ತಿ ತರಬೇತಿ ಕೇಂದ್ರಗಳ ಹೆಸರಿನಲ್ಲಿ ಎಗ್ಗಿಲ್ಲದೇ ಆರಂಭವಾಗುತ್ತಿರುವುದನ್ನು ತಡೆಯಬೇಕು. ದುಬಾರಿ ಶುಲ್ಕಗಳ ಮೂಲಕ ಹಣ ಸುಲಿಗೆ ನಿಲ್ಲಬೇಕು. ಅಲ್ಲದೇ ಸರ್ಕಾರವೇ ಕಂಪ್ಯೂಟರ್ ತರಬೇತಿ ಕೇಂದ್ರಗಳನ್ನು ಆರಂಭಿಸಬೇಕು. ಅಂತಹವುಗಳನ್ನು ಗ್ರಾಮೀಣ, ದುರ್ಬಲ ವರ್ಗದ ಜನತೆ ವಾಸಿಸುವ ಪ್ರದೇಶದಲ್ಲಿ ತೆರೆಯಬೇಕು. ಮಾತ್ರವಲ್ಲ ಹಾಸ್ಟೆಲ್ ಗಳಲ್ಲಿ, ಸರ್ಕಾರದ ಸ್ಥಳೀಯ ಸಂಸ್ಥೆಗಳೂ ಸಹ ಆರಂಭಿಸುವುದು ಅತ್ಯಗತ್ಯ. ಸದ್ಯದ ಸಾಮಾನ್ಯ ಶಿಕ್ಷಣದ ಮತ್ತು ತರಬೇತಿ ರಂಗದಲ್ಲಿ ಪಠ್ಯಕ್ರಮವು ಕಾಲ ಬಾಹಿರವಾಗಿರುವ ಅಂಶಗಳನ್ನೇ ಒಳಗೊಂಡಿದೆ. ಅವೈಜ್ಞಾನಿಕವಾಗಿದೆ. ಪ್ರಸಕ್ತ ಅಗತ್ಯಗಳಿಗೆ ಅನುಗುಣವಾಗಿ ಪಠ್ಯಕ್ರಮವನ್ನು ಅಮೂಲಾಗ್ರವಾಗಿ ಆಧುನೀಕರಿಸಬೇಕು.

ಸರ್ಕಾರದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಕೂಡಲೇ ನೇಮಕಾತಿ ಮಾಡಿಕೊಳ್ಳಬೇಕು. ಜೀವ ವಿಮೆ, ಬ್ಯಾಂಕ್, ಶಿಕ್ಷಕರು-ದೈಹಿಕ ಶಿಕ್ಷಕರು, ರೈಲ್ವೇ, ಮುಂತಾದ ಇಲಾಖೆಗಳಲ್ಲಿ ನೇಮಕಾತಿ ತಕ್ಷಣ ಆಗಬೇಕು. ರೈಲ್ವೇ ನೈರುತ್ಯ ವಲಯವನ್ನು ಕರ್ನಾಟಕದಲ್ಲಿ ಸ್ಥಾಪಿಸಬೇಕು ಎಂದು ಸಮಮಾವೇಶ ಆಗ್ರಹ ಪಡಿಸಿದೆ.

ಸಮಾವೇಶ ವಿದ್ಯುಚ್ಛಕ್ತಿ ಮತ್ತು ನೀರಾವರಿ ಯೋಜನೆಗಳ ಶೀಘ್ರ ಹಾಗೂ ದಕ್ಷ ಅನುಷ್ಠಾನ ನಡೆಸಬೇಕೆಂದು ಇನ್ನೊಂದು ನಿರ್ಣಯ ಅಂಗೀಕರಿಸಿ ಒತ್ತಾಯಿಸಿತು. ಉದ್ಯೋಗ ಬದುಕಿಗೆ ಅತ್ಯಗತ್ಯ, ಇದನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿಯೆಂದಿರುವ ಮತ್ತೊಂದು ಸಮಾವೇಶದ ನಿರ್ಣಯ ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಸಂವಿಧಾನದಲ್ಲಿ ಸೇರಿಸಬೇಕು ಎಂದು ಒತ್ತಾಯಿಸಿದೆ. ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಚೌಕಿ ತಾಂಡಾದ ಕೂಲಿಕಾರ ಲಂಬಾಣಿ ಮಹಿಳೆಯರ ಮೇಲೆ ನಡೆದಿರುವ ದೌರ್ಜನ್ಯವನ್ನು ಖಂಡಿಸಿರುವ ಇನ್ನೊಂದು ನಿರ್ಣಯದ ಮೂಲಕ ಸಮಾವೇಶ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ವಲಯ ಸಂರಕ್ಷಣಾಧಿಕಾರಿಯವರನ್ನು ಅಮಾನತು ಮಾಡಬೇಕು, ಈ ಮಹಿಳೆಯರು ಸಾಗುವಳಿ ಮಾಡುತ್ತಿದ್ದ ಭೂಮಿಯನ್ನು ಅವರಿಗೆ ಖಾಯಂ ಮಾಡಬೇಕೆಂದು ಒತ್ತಾಯಿಸಿದೆ.

ಸಮುದಾಯ: ನೂತನ ಕಾರ್ಯಕಾರಿ ಸಮಿತಿ

ಗುಲ್ಬರ್ಗಾ: ಹೊಸ ಆರ್ಥಿಕ ನೀತಿ, ಕುಸಿಯುತ್ತಿರುವ ಶಿಕ್ಷಣ ಮಟ್ಟ, ಹೆಚ್ಚುತ್ತಿರುವ ಅನಕ್ಷರತೆ, ಗ್ರಾಮ ಮತ್ತು ನಗರಗಳಲ್ಲಿ ನಡೆಯುತ್ತಿರುವ ವಿಧ್ವಂಸಕ ಕೃತ್ಯಗಳು ಇಂತಹ ಹಲವಾರು ಸಮಸ್ಯೆಗಳ ಮಧ್ಯೆ ನಾವು ಯಾವ ಮೌಲ್ಯಗಳಿಗೆ ಬದ್ಧರಾಗಿದ್ದೇವೆಯೆಂಬುದು ಅರಿಯದೇ ಅಥವಾ ಅರಿತು ಅದಕ್ಕೆ ಸ್ಪಂದಿಸದೆ ಕುಳಿತರೆ ಅಪರಾಧಿ ಪ್ರಜ್ಞೆಯ ಕರಾಳ ಛಾಯೆ ನಮ್ಮನ್ನು ಆವರಿಸುತ್ತದೆ. ಇಂತಹ ಸಂದರ್ಭದಲ್ಲಿ ಸಮುದಾಯದಂತಹ ಸಾಂಸ್ಕೃತಿಕ ಸಂಘಟನೆಯ ಜವಾಬ್ದಾರಿ ಅತ್ಯಂತ ಮಹತ್ವದ್ದೆಂದು ಕೂಡಿದ ಸಮುದಾಯದ ಸರ್ವ ಸದಸ್ಯರ ಸಭೆಯಲ್ಲಿ ಪ್ರೊ. ಆರ್.ಕೆ. ಹುಡಗಿ ಪ್ರಸ್ತಾವಿಕವಾಗಿ ಮಾತನಾಡಿದರು. ಶ್ರೀ. ಶಂಕರಯ್ಯ, ಆರ್. ಘಂಟಿಯವರು ತಮ್ಮ ಕಾರ್ಯದರ್ಶಿ ಅವಧಿಯಲ್ಲಿ ಸಮುದಾಯ ಹಮ್ಮಿಕೊಂಡ ಕಾರ್ಯ ಚಟುವಟಿಕೆಗಳ ವರದಿಯನ್ನು ಸ್ಥೂಲವಾಗಿ ಮಂಡಿಸಿದರು. ವರದಿಯ ಮೇಲೆ ಸರ್ವಸದಸ್ಯರ ದೀರ್ಘವಾದ ಸಂವಾದ ರಚಿಸಲಾಯಿತು. ಅಧ್ಯಕ್ಷರಾಗಿ ಪ್ರೊ. ಕಾಶಿನಾಥ ಅಂಬಲಗೆ, ಉಪಾಧ್ಯಕ್ಷರಾಗಿ ಪ್ರೊ. ಈಶ್ವರಯ್ಯ ಮಠ ಮತ್ತು ಶ್ರೀಮತಿ ಗಿರಿಜಾ.ಧ ಪೂಜಾರ, ಕಾರ್ಯದರ್ಶಿಯನ್ನಾಗಿ ಶ್ರೀ ಖೇಮಣ್ಣ.ವಿ., ಅಲ್ಲಿ ಮತ್ತು ಜಂಟಿ ಕಾರ್ಯದರ್ಶಿ ಹಾಗೂ ಖಜಾಂಚಿಯಾಗಿ ಶ್ರೀ ಕೋದಂಡರಾಮ ಇವರನ್ನು ಸರ್ವಾನುಮತದಿಂದ ಆರಿಸಲಾಯಿತು. ಕೊನೆಗೆ ಪ್ರೊ. ಪ್ರಭು ಖಾನಾಪುರೆಯವರು ಅಧ್ಯಕ್ಷೀಯ ಭಾಷಣ ಮಾಡುತ್ತ ಎಲ್ಲರನ್ನು ವಂದಿಸಿದರು.

ಬೋಸ್ನಿಯಾ ಉರಿಯುತ್ತಿರುವಂತೆ 50 ವರ್ಷ ಮುಗಿಸಿದ ವಿಶ್ವ ಸಂಸ್ಥೆ

ಹಿಂದಿನ ಯುಗೊಸ್ಲಾವಾಕಿಯಾದ ಬೋಸ್ನಿಯಾದಲ್ಲಿ ಅಂತರ್ಯುದ್ಧ ಹಾಗೂ ಅವನ್ನು ನಿಲ್ಲಿಸುವ ಹೆಸರಲ್ಲಿ ಪಶ್ಚಿಮಾತ್ಯ ದೇಶಗಳು ನಾಟೋದ ಮೂಲಕ ನಡೆಸುತ್ತಿರುವ ಕಾರ್ಯಾಚರಣೆಯಲ್ಲಿ ಮುಗ್ಧ ಜೀವಗಳು ಬಲಿಯಾಗುತ್ತಾ ವಿಶ್ವಸಂಸ್ಥೆ 'ಶಾಂತಿಪಾಲನಾ' ಕೆಲಸದ ಮೇಲೆ ಪ್ರಶ್ನೆ ಚಿಹ್ನೆ ದಿನೇ ದಿನೇ ದೊಡ್ಡದಾಗುತ್ತಿರುವಾಗ ವಿಶ್ವ ಸಂಸ್ಥೆ ತನ್ನ 50ನೇ ಅಧಿವೇಶನ ನಡೆಸುತ್ತಿದೆ.

ಬೋಸ್ನಿಯಾ ಮತ್ತಿತರ ಕಡೆ ಅದರ ವಿಫಲತೆ ತನ್ನ ವಿವಿಧ ಅಂಗ ಸಂಸ್ಥೆಗಳ ಮೂಲಕ ಅದು ವಿಶ್ವ ಸಮುದಾಯಕ್ಕೆ ನೀಡಿದ ಕೊಡುಗೆಯನ್ನು ಮರೆಮಾಚುವುದು ಸರಿಯಲ್ಲ ಎಂದು ಕೆಲವರು ವಾದಿಸುತ್ತಿದ್ದರೆ ಇನ್ನೊಂದೆಡೆ ಇನ್ನು ಕೆಲವರು ವಿಶ್ವಸಂಸ್ಥೆ ಅಮೇರಿಕಾ ಮತ್ತಿತರ ಪಾಶ್ಚಿಮಾತ್ಯ ಶಕ್ತಿಗಳ ಕೈಗೊಂಬೆಯಾಗಲಾರಂಭಿಸಿ ತನ್ನ ಸ್ವತಂತ್ರ ಅಸ್ತಿತ್ವವನ್ನು ಕಳಕೊಳ್ಳುತ್ತಿದೆ ಎಂದು ಆತಂಕ ವ್ಯಕ್ತಪಡಿಸುತ್ತಾರೆ.

ವಿಶೇಷ ಸಂಗತಿಯೆಂದರೆ ಹಿಂದೆ ಈಜಿಪ್ಟಿನ ವಿದೇಶಾಂಗ ಮಂತ್ರಿಯೂ ಆಗಿದ್ದ ಈಗ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬುತ್ರೋಸ್ ಬುತ್ರೋಸ್ ಘಲ ಕೂಡಾ ಈ ಆತಂಕಕ್ಕೆ ದನಿಗೂಡಿಸುವಂತಿದೆ.

ಪ್ರಮುಖ ದೇಶಗಳ ಪ್ರಭಾವದಿಂದಾಗಿ ವಿಶ್ವ ಸಂಸ್ಥೆ "ಇಬ್ಬಂದಿ" ಕ್ರಮ ಅನುಸರಿಸುತ್ತಿದೆ ಎಂದು ಅವರು ಕೈರೋದ ಪತ್ರಿಕೆ 'ಅಲ್-ಮುಸಪ್ವರ್' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಅಭಿಪ್ರಾಯವ್ಯಕ್ತಪಡಿಸಿದ್ದಾರೆ. ಬೋಸ್ನಿಯಾದ ಮುಸ್ಲಿಮರ ಮೇಲೆ ಸರ್ಬ್ ಜನಗಳು ಅತ್ಯಂತ ಹೀನ ಅಪರಾಧದಲ್ಲಿ ತೊಡಗಿದ್ದರೂ ಅವರ ವಿರುದ್ಧ ವಿಶ್ವಸಂಸ್ಥೆ ತನ್ನ 'ಏಳನೇ ಅಧ್ಯಾಯ'ದಂತೆ ಕ್ರಮ ಕೈಗೊಳ್ಳುವಲ್ಲಿ ಅಸಮರ್ಥವಾಗಿ ಎಂದು ಒಪ್ಪಿಕೊಳ್ಳುವ ಘಲಿ ಅವರು ಬೋಸ್ನಿಯಾದ ಈಗಿನ ಸ್ಥಿತಿಗೆ ಪ್ರಮುಖ ದೇಶಗಳ ಜವಾಬ್ದಾರಿ, ಅವಕ್ಕೆ ಈ ಬಿಕ್ಕಟ್ಟನ್ನು ಸಹಕರಿಸುವಲ್ಲಿ ಆಸಕ್ತಿಯಿಲ್ಲ, ಏಕೆಂದರೆ ಇಲ್ಲಿ ಅವರ ನೇರ ಹಿತಾಸಕ್ತಿಯೇನೂ ಇಲ್ಲ ಎಂದೂ ಅವರ ಅಭಿಪ್ರಾಯ ವ್ಯಕ್ತಪಡಿಸಿದರು. ಬೋಸ್ನಿಯಾದಲ್ಲಿ ವಿಶ್ವಸಂಸ್ಥೆಯ ವಿಫಲತೆಯಿಂದಾಗಿ ರಾಜೀನಾಮೆ ಕೊಡುತ್ತೀರಾ ಎಂದು ಕೇಳಿದಾಗ ಅದು ನಕಾರಾತ್ಮಕ ನಿಲುವಾಗುತ್ತದೆ, ವಿಶ್ವಸಂಸ್ಥೆ ಹಲವೆಡೆ ಯಶಸ್ವಿಯೂ ಆಗಿದೆ ಎಂದಿದರು.

ಈ ನಡುವೆ ಜುಲೈ 31 ವೇಳೆಗೆ ವಿಶ್ವಸಂಸ್ಥೆಗೆ ತನ್ನ ಸದಸ್ಯ ದೇಶಗಳಿಂದ ಬರಬೇಕಾದ ಬಾಕಿ 2.61 ಶತಕೋಟಿ ಡಾಲರುಗಳಾಗಿದೆ. ಬಾಕಿಯಿಟ್ಟಿರುವಲ್ಲಿ ಮೊದಲ ಹೆಸರು ಅಮೇರಿಕಾದ್ದು!

ಅಣ್ವಸ್ತ್ರ ಪರೀಕ್ಷಣೆ-ಫ್ರಾನ್ಸಿಗೊಂದು ಹೊಲಸು ಹೊಡೆತ

-ಫ್ರೆಂಚ್ ಕಮ್ಯುನಿಸ್ಟ್ ಪಕ್ಷ

ಈ ತಿಂಗಳ ಆರಂಭದಲ್ಲಿ ದೂರದ ದಕ್ಷಿಣ ಶಾಂತಸಾಗರದ ದ್ವೀಪವೊಂದರಲ್ಲಿ ಭೂಗತ ಪರಮಾಣು ಪರೀಕ್ಷಣೆ ನಡೆಸಿದ ಫ್ರೆಂಚ್ ಸರ್ಕಾರದ ಕ್ರಮಕ್ಕೆ ವಿಶ್ವಾದ್ಯಂತ ಪ್ರತಿಭಟನೆ ವ್ಯಕ್ತವಾಗಿದ್ದು, ಫ್ರೆಂಚ್ ಕಮ್ಯುನಿಸ್ಟ್ ಪಕ್ಷವೂ ಇದಕ್ಕೆ ದನಿಗೂಡಿಸಿದೆ. ಆಸ್ಟ್ರೇಲಿಯಾ, ದಕ್ಷಿಣಶಾಂತ ಸಾಗರದ ಇತರ ದೇಶಗಳು ಹಾಗೂ ಫ್ರಾನ್ಸಿನ ಯುರೋಪಿಯನ್ ಮಿತ್ರರೂ ಪ್ರತಿಭಟಿಸಿದ್ದಾರೆ.

"ಈ ಪರೀಕ್ಷಣೆ ನಿಜವಾಗಿಯೂ ಫ್ರಾನ್ಸ್‌ನ ಮೇಲೊಂದು ಹೊಲಸು ಹೊಡೆತ. ನಾವು ನಮ್ಮ ದೇಶದಲ್ಲಿ ಹಾಗೂ ವಿಶ್ವಾದ್ಯಂತ ಈ ಬಗ್ಗೆ ವ್ಯಕ್ತವಾಗಿರುವ ಕ್ರೋಧದಲ್ಲಿ ಪಾಲ್ಗೊಳ್ಳುತ್ತೇವೆ" ಎಂಮ ಫ್ರೆಂಚ್ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ರಾಬರ್ಟ್ ಹ್ಯೂರವರು ಪರೀಕ್ಷಣಾ ಸ್ಫೋಟದ ನಡೆಸಿದಾಗ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಹೇಳಿಕೆಯ ಒಂದು ಪ್ರತಿ ಸಿಪಿಐ(ಎಂ) ಕೇಂದ್ರ ಸಮಿತಿ ಕಛೇರಿ ತಲುಪಿದೆ. ಮೂರು ವರ್ಷಗಳ ಕಾಲ ಇಂತಹ ಪರೀಕ್ಷಣೆಗಳ ಮೇಲೆ ಹಾಕಿದ್ದ ತಡೆಯನ್ನು ಅಧ್ಯಕ್ಷ ಚಿರಾಕ್ ಮುರಿದಿರುವುದಕ್ಕೆ ಯಾವುದೇ ಸಮರ್ಥನೆ ನೀಡಲು ಸಾಧ್ಯವಾಗಿಲ್ಲ, ವಿಶ್ವಾದ್ಯಂತ ಎಲ್ಲಾ ಪರಮಾಣು ಶಸ್ತ್ರಾಸ್ತ್ರಗಳನ್ನು ಸಂಪೂರ್ಣ ನಿಷೇಧಿಸುವ ಬಗ್ಗೆ ಮಾತುಕತೆ ನಡೆಸಬೇಕೆಂದು ಹಿರೋಶಿಮಾ-ನಾಗಾಸಾಕಿ ಬಾಂಬ್ ಸ್ಫೋಟದ 50ನೇ ವಾರ್ಷಿಕದ ಸಂದರ್ಭದಲ್ಲಿ ವಿಶ್ವಾದ್ಯಂತ ಕೂಗೇಳುತ್ತಿರುವಾಗಲಂತೂ ಇದು ಸಂಪೂರ್ಣ ಅಸಮರ್ಥನೀಯ ಎಂದು ಫ್ರೆಂಚ್ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಹೇಳಿದ್ದಾರೆ.

"ಜಾಕ್ವೆಸ್ ಚಿರಾಕ್, ಈ ಎಲ್ಲಾ ಪ್ರತಿಭಟನೆಯ ಕೂಗುಗಳಿಗೆ ಕಿವುಡಾಗಿದ್ದಾರೆ. ಆದರೂ ಬಹುಪಾಲು ಫ್ರೆಂಚ್ ಜನತೆ ಮತ್ತೆ ಪರೀಕ್ಷಣೆ ಆರಂಭಿಸುವುದನ್ನು ವಿರೋಧಿಸುತ್ತಾರೆ. ಆದ್ದರಿಂದ ಈಗ ಗಮನ ಸೆಳೆದಿರುವ ಈ ಆಂದೋಲನ ಬೆಳೆಯುತ್ತದೆ" ಎಂದಿರುವ ಅವರು ಈಗಿನ ಪ್ರತಿಭಟನಾ ಆಂದೋಲನದ ಕೂಗು ಎಲ್ಲೆಡೆ ಕೇಳಿಸುವಂತೆ ಮಾಡಲು ತಮ್ಮ ಪಕ್ಷ ತನ್ನ ಕೈಲಾದೆಲ್ಲ ಮಾಡುತ್ತದೆ ಎಂದು ಭರವಸೆ ನೀಡುತ್ತಾ ಈ ಪರೀಕ್ಷಣೆಗಳನ್ನು ನಿಲ್ಲಿಸಿ ಪರಮಾಣು ನಿಶ್ಯಸ್ತ್ರೀಕರಣದ ಹರಿಕಾರರಾಗಿ ಎಂದು ಫ್ರೆಂಚ್ ಸರಕಾರಕ್ಕೆ ಕರೆ ನೀಡಿದ್ದಾರೆ.

(ಐ.ಎನ್.ಎನ್)

ಇರಾಕೀ ಪಕ್ಷಾಂತರದಲ್ಲಿ ಅಮೇರಿಕಾದ ಕೈವಾಡ?

ಇತ್ತೀಚೆಗೆ ಭಾರೀ ಸುದ್ದಿ ಮಾಡಿದ ಇರಾಕಿನ ಕೈಗಾರಿಕಾ ಮಂತ್ರಿ ಹುಸೇನ್ ಕಮಾಲ್‌ಹುಸೇನ್ ಮತ್ತು ಆತನ ತಮ್ಮ ದೇಶಬಿಟ್ಟು ಜೋರ್ಡಾನ್‌ಗೆ ಪಲಾಯನ ಮಾಡುವಲ್ಲಿ ಅಮೇರಿಕಾದ ನೆರವು ಇತ್ತು ಎಂದು ಒಬ್ಬ ಇಸ್ರೇಲೀ ವಕ್ತಾರ ಹೇಳಿರುವುದಾಗಿ 'ಜೆರುಸಲೇಂ ಪೋಸ್ಟ್' ಪತ್ರಿಕೆ ವರದಿ ಮಾಡಿದೆ.

ಕನಿಷ್ಠ ಒಂದು ವಾರದ ಮೊದಲು ಅಮೇರಿಕಾದ ಜೋರ್ಡಾನ್ ದೊರೆಗೆ ಈ ಪಕ್ಷಾಂತರ ಯೋಜನೆಯ ಬಗ್ಗೆ ತಿಳಿಸಿ ಅವರು ಜೋರ್ಡಾನ್ ಗೆ ಬರಲು ಒಪ್ಪಿಗೆ ಪಡೆದಿತ್ತು ಎಂದು ಭದ್ರತೆಯ ಪರಿಶೀಲನೆ ನಡೆಸುವ ಈ ಅಧಿಕಾರಿ ಹೇಳಿದ್ದಾನೆ. ಸಿ.ಐ.ಎ. ತನ್ನ ಪ್ರಯತ್ನಕ್ಕೆ ಬಹುಮಾನ ನೀಡುತ್ತದೆ ಎಂದು ಗೊತ್ತಾದ ಮೇಲಷ್ಟೇ ಕಮಾಲ್ ಹಸನ್ ಪಕ್ಷಾಂತರ ಮಾಡುವ ನಿರ್ಧಾರ ಕೈಗೊಂಡನಂತೆ. ಇದರ ವಿವರ ಆತನ ಹೆಂಡತಿಗೆ ಹಾಗೂ ಆತನ ತಮ್ಮನ ಹೆಂಡತಿಗೆ ಅಂದರೆ ಇರಾಕೀ ಅಧ್ಯಕ್ಷ ಸದ್ದಾಂ ಹುಸೇನ್‌ಗೆ ತಿಳಿದಿತ್ತೋ ಇಲ್ಲವೋ ಎಂಬುದು ಇಲ್ಲಿ ಅಪ್ರಸ್ತುತ ಎಂದು ಈ ಅಧಿಕಾರೀ ಹೇಳಿದ್ದಾನೆ. ಪಕ್ಷಾಂತರ ನಡೆಯುವ ಮೊದಲೇ ಜೋರ್ಡಾನ್ ದೊರೆಯನ್ನು ಬೆಂಬಲಿಸುವ ಸಾರ್ವಜನಿಕ ಹೇಳಿಕೆಯನ್ನು ಅಧ್ಯಕ್ಷ ಕ್ಲಿಂಟನ್ ನೀಡಬೇಕೆಂದು ದೊರೆ ಒತ್ತಾಯಿಸಿದಾಗ ಅಧ್ಯಕ್ಷ ಕ್ಲಿಂಟನ್ ಒಪ್ಪಿದುದಾಗಿಯೂ ಈ ಅಧಿಕಾರಿ ತಿಳಿಸಿದ್ದಾನೆ.

ಆಗಸ್ಟ್ 12ರಂದು ಅಮೇರಿಕನ್ ವಿಮಾನವಾಹಕ ಯುದ್ಧ ಹಡಗು ಪೂರ್ವ ಮೆಡಿಟರೇನಿಯನತ್ತ ಹೊರಟಿದ್ದು, ಅಮೇರಿಕಾದ ನಾವಿಕರು ಜೋರ್ಡಾನಿನ ಅಕಾಬಾ ಬಂದರಿನಲ್ಲಿ ಬಂದಿಳಿದದ್ದು ಜೋರ್ಡಾನ್‌ನ ಮೇಲೆ ಇರಾಕ್ ಪ್ರತೀಕಾರ ನಡೆಸದಂತೆ ಕೈಗೊಂಡ ಅಮೇರಿಕನ್ ಕ್ರಮಗಳಾಗಿದ್ದವು.

ಟಿಬೇಟ್ ಸ್ವಾಯತ್ತ ಪ್ರದೇಶ 30ನೇ ವಾರ್ಷಿಕೋತ್ಸವ

ಟಿಬೇಟಿನಾದ್ಯಂತ ಸಂಭ್ರಮದ ಆಚರಣೆ

1959ರಲ್ಲಿ ಕ್ರೂರ ಪಾಳೆಯಗಾರಿಕೆಯ ಕಪಿಮುಷ್ಟಿಯಿಂದ ಟೀಬೇಟ್ ವಿಮೋಚನೆಗೊಂಡಿತ್ತು. ತನ್ನ ದೇಶದ ಸುಮಾರು 56 ಅಲ್ಪಸಂಖ್ಯಾತ ರಾಷ್ಟ್ರೀಯ ಗುಂಪುಗಳಿಗೆ ಸ್ವಾಯುತತ್ತೆ ನೀಡಿ ದೇಶದ ಐಕ್ಯತೆಯನ್ನು ಬಲಗೊಳಿಸುವ ಚೀಣೀ ಸರಕಾರದ ನೀತಿಗೆ ಅನುಗುಣವಾಗಿ ಸೆಪ್ಟೆಂಬರ್ 1, 1965 ರಂದು ಟಿಬೇಟ್ ಸ್ವಾಯತ್ತ ಪ್ರದೇಶ ರಚನೆಯಾಯಿತು. ಈ ಸೆಪ್ಟೆಂಬರ್ 1ರಂದು ಟಿಬೇಟಿನಾದ್ಯಂತ 30ನೇ ವಾರ್ಷಿಕೋತ್ಸವವನ್ನು ಸಂಭ್ರಮದಿಂದ ಆಚರಿಸಿ ಬೈಜಿಂಗ್ ನಲ್ಲಿ ನಡೆದ ಮಹಿಳಾ ಸಮ್ಮೇಳನದಲ್ಲಿ ಮತ್ತು ಇತರೆಡೆ ಪಾಶ್ಚಿಮಾತ್ಯರು ಹಾಗೂ ಅವರ ಟಿಬೇಟಿಯನ್ನರು ನಡೆಸಿರುವ ಅಪಪ್ರಚಾರವನ್ನು ಬಯಲಿಗೆಳೆದಿದ್ದಾರೆ. ಒಂದು ಸಾವಿರ ವರ್ಷಗಳಿಗಿಂತಲೂ ಹೆಚ್ಚು ಸಮಯದಿಂದ ಚೀಣಾದ ಭಾಗವಾಗಿದ್ದ ಈ ಪ್ರದೇಶದಲ್ಲಿ ಕೇವಲ ಶೇ. 5 ಒಡೆಯರು ಇಡೀ ಟಿಬೇಟಿನ ಸಂಸತ್ತಿನ ಮೇಲೆ ಒಡೆತನ ಹೊಂದಿದ್ದರು. ಉಳಿದ ಶೇ. 95 ಮಂದಿ ಅವರ ಜೀತದ ತೊತ್ತುಗಳಾಗಿ ನಾನಾ ರೀತಿಯ ಹಿಂಸೆ ಅನುಭವಿಸುತ್ತಿದ್ದು ಟಿಬೇಟ್ ಆಗ ಅತ್ಯಂತ ಹಿಂದುಳಿದ ಪ್ರದೇಶವಾಗಿತ್ತು. ಈ ಪ್ರದೇಶ ಚೀಣಾದ ಕ್ರಾಂತಿಯ ವಿಜಯದೊಂದಿಗೆ ಟಿಬೇಟ್ ನಲ್ಲೂ ಪಾಳೆಯಗಾರಿ ಶೋಷಣೆಯ ವಿರುದ್ಧ ... ಬಲಬಂದು ಕೊನೆಗೂ 1959ರಲ್ಲಿ ಶಾಂತಿಯುತವಾಗಿ ಈ ಪಾಳೆಯಗಾರಿಕೆಯಿಂದ ವಿಮೋಚನೆ ಹೊಂದಿ, ಪ್ರಜಾಪ್ರಭುತ್ವ ಸುಧಾರಣೆಗಳನ್ನು ನಡೆಸಿ ಜನಸಾಮಾನ್ಯರ ಜೀವನ ಮಟ್ಟ ಈ ಮೂರು ದಶಕಗಳಲ್ಲಿ ಭಾರೀ ಉನ್ನತಿ ಕಂಡಿದೆ. ಉದಾಹರಣೆಗೆ, 1950ರ ದಶಕದಲ್ಲಿ ಟಿಬೇಟನ್ನರ ಸರಾಸರಿ ಆಯಸ್ಸು 35.5 ವರ್ಷ. ಈಗ ಅದು 65 ವರ್ಷ. ಟಿಬೇಟಿನ ಆರ್ಥಿಕ ಈಗ 10ಶೇ. ದರದಲ್ಲಿ ಏರುತ್ತಿದೆ. ಇದರಲ್ಲಿ ಚೀಣಾದ ಇತರ ಪ್ರದೇಶಗಳ ಜನಗಳ ಸಹಕಾರವನ್ನು ಟಿಬೇಟಿನ ಜನ ಸೆಪ್ಟೆಂಬರ್ 1 ರಂದು ಸ್ಮರಿಸಿಕೊಂಡರು ❑

ಲೋಕಸಂಚಾರ

ಅಮೇರಿಕದೊಳಗೊಂದು ಇಣುಕು

'ಜಪಾನಿನ ಮೇಲೆ ಅಣುಬಾಂಬ್ ಹಾಕಿದ್ದರಿಂದ ನಮ್ಮಜೀವ ಉಳಿಯಿತು'!

ಎಂತಹ ಅಸಭ್ಯ ಮಾತು ಎನ್ನುತ್ತೀರಾ? ಈ ಮಾತು ಆಗಸ್ಟ್ 7-1 ರ ನಡುವೆ ಸಾವಿರ ಸಾವಿರ ಬಾರಿ ಅಮೇರಿಕದಲ್ಲಿ ಪುನಃ ಪುನಃ ಕೇಳಿಬಂತು. ರೇಡಿಯೋ, ಟಿವಿಗಳಲ್ಲಿ (Victory Over Japan V-J ಚಿನ್ನದ ಹಬ್ಬದ (50ನೇ ವಾರ್ಷಿಕೋತ್ಸವ) ಈ ಸಂದರ್ಭದಲ್ಲಿ ಅಮೇರಿಕದ ತುಂಬಾ ಜಪಾನಿನ ಮೇಲೆ ಅಣುಬಾಂಬ್ ಹಾಕಿದ್ದವರ ಬಗ್ಗೆ ಅಮೇರಿಕ ಕ್ಷಮೆ ಕೇಳಬೇಕು ಅಥವಾ ಕನಿಷ್ಠ ವಿಷಾದ ವ್ಯಕ್ತಪಡಿಸಬೇಕು ಎಂಬ ಬಗ್ಗೆ ಸಾರ್ವಜನಿಕ ಚರ್ಚೆ ನಡೆಯಿತು. ಇದಕ್ಕೆ ಪ್ರತಿಕ್ರಿಯೆಯಾಗಿ ಅಥವಾ ಅದರ ವಿರುದ್ಧ ರಕ್ಷಣಾ ಕ್ರಮವಾಗಿ ಬಲಪಂಥೀಯ ಶಕ್ತಿಗಳು, ಜಪಾನಿನ ಮೇಲೆ ಅಣುಬಾಂಬ್ ಹಾಕದಿದ್ದರೆ ಎರಡನೇ ಮಹಾಯುದ್ಧ ಮುಗಿಯುತ್ತಿರಲಿಲ್ಲ, ವಿಶ್ವಶಾಂತಿಗಾಗಿ ಅಣುಬಾಂಬ್ ಉಪಯೋಗಿಸುವುದು ಅನಿವಾರ್ಯವಾಗಿತ್ತು ಎಂಬದು ಮುಂಡಿಸುತ್ತಿದ್ದರು. ಇದರ ಭಾಗವಾಗಿ ಜಪಾನಿನ ಮೇಲೆ ಯುದ್ಧದ ಕೊನೆಯ ಹಂತದಲ್ಲಿ ಭಾಗವಹಿಸಿದ ಜಪಾನಿಯರ ಕೈಯಲ್ಲಿ ಯುದ್ಧಬಂದಿಗಳಾಗಿ ಸಿಕ್ಕಿಬಿದ್ದು ಚಿತ್ರಹಿಂಸೆ ಅನುಭವಿಸಿದ ಮಾಜಿ ಅಮೇರಿಕನ್ ಯೋಧರ ಜತೆ ಇಂಟರ್ ವ್ಯೂ ಗಳಲ್ಲಿ ಮೇಲಿನ ಮಾತು ಕೇಳಿಬಂದಿದ್ದು ಕೆಲವು ಮಾಜಿ ಯೋಧರಿಗೆ ಹಾಗನಿಸಿರುವುದು ಆಶ್ಚರ್ಯವೇನಲ್ಲ, ಆದರೆ ಅದನ್ನೇ ಇಡೀ ದೇಶದ ಅಭಿಪ್ರಾಯವೋ ಎನ್ನುವಂತೆ ಪ್ರಚಾರ ಮಾಡಲಾಯಿತು.

ಇದೇ ಮುಖ್ಯ ಪ್ರಚಾರವಾದರೂ, ಶಾಂತಿಪರ ದನಿ ಬಹಳ ಕ್ಷೀಣವಾಗೇನಿರಲಿಲ್ಲ. ಜಪಾನಿನ ಮೇಲೆ ಅಣುಬಾಂಬ್ ಹಾಕದಿದ್ದರೆ ಯುದ್ಧ ಮುಗಿಯುತ್ತಿರಲಿಲ್ಲ ಎಂಬ ವಾದವನ್ನು ಹಲವು ಇತಿಹಾಸಕಾರರು ಪುರಾವೆಗಳ ಮೂಲಕ ಪ್ರಶ್ನಿಸಿದರು. ಜಪಾನಿನ ಮೇಲೆ ಸೋವಿಯೆತ್ ಒಕ್ಕೂಟ ಯುದ್ಧ ಆರಂಭಿಸಿದ್ದು, ಜಪಾನಿನ ಮೇಲೆ ತೀವ್ರ ಒತ್ತಡ ಬಿದ್ದಿತ್ತು. ಜಪಾನಿನ ಯುದ್ಧ ವಿಮಾನ ಇತರ ಉಪಕರಣಗಳು ಆದಾಗಲೇ ಸಾಕಷ್ಟು ನಷ್ಟವಾಗಿದ್ದರಿಂದ ಕೆಲವು ದಿನಗಳಿಗಿಂತ ಹೆಚ್ಚು ಯುದ್ಧ ಮುಂದುವರೆಯುತ್ತಿರಲಿಲ್ಲ, ಅಣುಬಾಂಬಿನ ಬೆದರಿಕೆಯನ್ನು ಬಳಸಿ, ರಾಜಕೀಯ ಒತ್ತಡ ತರಬಹುದಿತ್ತು. ಅದು ಅಮೇರಿಕದ ಸರ್ಕಾರಕ್ಕೆ ಬೇಕಿರಲಿಲ್ಲ, ಕೆಲವು ಸಾವಿರ ಅಮೇರಿಕನ್ ಸೈನಿಕರ ಪ್ರಾಣ ಉಳಿಸಲು, ಎರಡು ನಗರಗಳ ನೆಲಸಮ ಮಾಡುವುದು ಮತ್ತು ಲಕ್ಷಾಂತರ ಅಸಹಾಯ ನಾಗರಿಕರ ಸಾಮೂಹಿಕ ಹತ್ಯೆಯನ್ನು ಶಾಂತಿಪರ ಎಂದು ಸಮರ್ಥಿಸಿಕೊಳ್ಳುವುದು ಅಸಭ್ಯತನದ ಪರಮಾವಧಿ ಎಂದು ಹಲವರು ಟೀಕಿಸಿದರು. ಎರಡನೇ ಮಹಾಯುದ್ಧದ ನಂತರ ಜಗತ್ತಿನಲ್ಲಿ ಅಧಿಪತ್ಯ ಸ್ಥಾಪಿಸುವುದು, ತನ್ನ ತೋಳ್ಬಲ ಪ್ರದರ್ಶಿಸುವುದು ಅಣುಬಾಂಬ್ ಹಾಕುವುದರ ಏಕಮಾತ್ರ ಉದ್ದೇಶವಾಗಿತ್ತು ಎಂದು ಹಲವರು ಸ್ಪಷ್ಟವಾಗಿ ಹೇಳಿದರು. ಇದಕ್ಕೆ ಪ್ರತಿಯಾಗಿ ಜಪಾನು ಏಷ್ಯಾದ ಹಲವಾರು ದೇಶಗಳಲ್ಲಿ ನಡೆಸಿದ ಅಪರಾಧಗಳ ಮೇಲೆ ವಿಷಾದ ವ್ಯಕ್ತಪಡಿಸಿಲ್ಲ, ನಿಜವಾಗಿಯೂ ಜಪಾನ್ ತನ್ನ ಆಕ್ರಮಣಕೋರತನದಿಂದ ಅಣುಬಾಂಬ್ ಹಾಕಲೇ ಬೇಕಾದ ಪರಿಸ್ಥಿತಿ ಉಂಟುಮಾಡಿದ್ದಕ್ಕೆ ವಿಷಾದ ವ್ಯಕ್ತಪಡಿಸಬೇಕು ಎಂಬ ಬೇಸರದ ವಾದ ಹೂಡಿದರು. ಶಾಂತಿಪರ ಸಮತೋಲನದ ಅಭಿಪ್ರಾಯವನ್ನು 'ಜಪಾನ್-ಪರ' 'ಯುದ್ಧ-ಪರ' ಎಂದು ಹಳಿಯಲಾಯಿತು.

ಒಂದು ಕಡೆ ಈ ವಿವಾದವಾದರೆ ವಿ.ಜೆ. ದಿನದಂದು ಜನರ ನೈಜ ಶಾಂತಿಪರ ಭಾವನೆಗಳು ಪ್ರದರ್ಶಿತವಾದವು. 50 ವರ್ಷಗಳ ಹಿಂದೆ ಯುದ್ಧ ಮುಗಿಯಿತು ಎಂಬ ಸುದ್ದಿ ಕೇಳಿದಾಗ ತಮಗೆ ಏನನಿಸಿತು ಎಂಬ ಬಗ್ಗೆಗೂ ರೇಡಿಯೋ, ಟಿವಿ ಪತ್ರಿಕೆಗಳಲ್ಲಿ ಆ ದಿನ ನೋಡಿದವರ ಅನ್ನಿಸಿಕೆಗಳು ಹೃದಯ ಸ್ಪರ್ಶಿಯಾಗಿದ್ದವು. ಈ ರಸ್ತೆಯಲ್ಲೆಲ್ಲಾ ಜನ ಉರುಳಾಡಿ ಜನ ಕುಣಿದಾಡಿದರಂತೆ. ಆ ದಿನ ಹಿಂದಿರುಗಿದ ಸೈನಿಕರಿಗಂತೂ ಅದು ಮರೆಯಲಾಗದ ಅನುಭವ. ಆಗ 20 ವರ್ಷದ ಯುವಕನಾಗಿದ್ದ ಈಗ ಎಪ್ಪತ್ತು ವರ್ಷದ ಮಾಜಿ ಯೋಧನೊಬ್ಬನಿಗಂತೂ ಅದು ರೋಮಾಂಚಕಾರಿ ಅನುಭವವಾಗಿತ್ತು ಅಂದ. ಎದುರಿಗೆ ಸಿಕ್ಕಿದ ಹುಡಿಗೆಯರೆಲ್ಲಾ ಅವನಿಗೆ ಅಪ್ಪಿ ಮುತ್ತಿಕ್ಕಿದರಂತೆ. ಅವರಿಂದೆಲ್ಲಾ ತಪ್ಪಿಸಿಕೊಂಡು ಅವನಿಗಾಗಿ ಕಾಯುತ್ತಿದ್ದ ತಾಯಿಯ ಹತ್ತಿರ ಬರುವಾಗ ಕೆನ್ನೆ, ತುಟಿ ಭಾರಿ ನೋವಾಗುತ್ತಂತೆ!

ಆ ರಾತ್ರಿ ಇಡೀ ಅಮೇರಿಕ ಮಲಗಲಿಲ್ಲ, ಎಷ್ಟೋ ನಗರಗಳಲ್ಲಿ ಆ ರಾತ್ರಿ ಸ್ವಯಂ ಸ್ಫೂರ್ತಿದಿಂದ ಭಾರಿ ರ್ಯಾಲಿಗಳು ನಡೆದವು. ಈ 50 ವರ್ಷಗಳಲ್ಲಿ ಅಂತಹ ರ್ಯಾಲಿಯನ್ನು ಮೀರಿಸುವುದು ಸಾಧ್ಯವಾಗಿಲ್ಲ, ನ್ಯೂಯಾರ್ಕ್ ನ ಟೈಂ ಚೌಕದಲ್ಲಿ ನಡೆದ ರ್ಯಾಲಿ ಅತಿದೊಡ್ಡದಾಗಿತ್ತಂತೆ. ಆ ರಾತ್ರಿಯನ್ನು ದುಃಖದಿಂದ ನೆನೆಸಿಕೊಳ್ಳುವವರು ಇನ್ನೊಂದು ಕಡೆ. ಕೊನೆಯ ದಿನಗಳ ಯುದ್ಧದಲ್ಲಿ ಪ್ರಾಣ ಕಳೆದುಕೊಂಡ ಅಮೇರಿಕನ್ ಸೈನಿಕರ ಮಡದಿಯರು ಜನತೆಯ ಹರ್ಷೋತ್ಸಾಹದಲ್ಲಿ ಪಾಲ್ಗೊಳ್ಳಲಾಗದೆ, ಅದರಿಂದ ದೂರವಿರಲಾಗದೆ ಸಂಕಟಪಟ್ಟರು. ಇಂತಹ ಹಲವರು ಯಾವುದೇ ಯುದ್ಧದ ಅಂತ್ಯದ ವಾರ್ಷಿಕೋತ್ಸವವನ್ನು ಬರಿಯ ವಿಜಯೋತ್ಸವವಾಗಿ ಆಚರಿಸುವುದು ಅಸಭ್ಯತನ, ಅದು ಗಂಭೀರ ಆಚರಣೆಯಾಗಿರಬೇಕು, ಅಂತಹ ಅಮಾನುಷ ಯುದ್ಧವನ್ನು ತಡೆಯುವುದು ಹೇಗೆ ಎಂಬ ವಿಚಾರ ಅದರ ಭಾಗವಾಗಿರಬೇಕು ಎಂದು ಅಭಿಪ್ರಾಯಪಟ್ಟರು.

-ಶರತ್ಚಂದ್ರ

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಸಂಪುಟ ಪುನರ್ರಚನೆ: ನಿರರ್ಥಕ ಕಸರತ್ತು

-ಪೊಲಿಟ್ ಬ್ಯೂರೋ

ಎಲ್ಲೆಡೆಗಳಿಂದ ಹೊಡೆತ, ಆಘಾತಗಳನ್ನು ಎದುರಿಸುತ್ತಿರುವ ನರಸಿಂಹರಾಯರ ಪಕ್ಷದ ಅಥವಾ ಸರ್ಕಾರದ ಕುಸಿಯುತ್ತಿರುವ ಅದೃಷ್ಟವನ್ನು ಸುಧಾರಿಸುವಲ್ಲಿ ಇತ್ತೀಚಿನ ಬಹುನಿರೀಕ್ಷಿತ ಸಂಪುಟ ಪುನರ್ರಚನೆ ಏನೂ ಮಾಡಿಲ್ಲ, ಮಂತ್ರಿಮಂಡಳಕ್ಕೆ ಯಾವುದೇ ಸಾಮರ್ಥ್ಯ ಇಲ್ಲದ, ಕಳೆಯಿಲ್ಲದ ಕೆಲವರನ್ನು ಜ್ಯೂನಿಯರ್ ಮಂತ್ರಿಗಳಾಗಿ ಸೇರಿಸಿಕೊಳ್ಳಲಾಗಿದೆಯಷ್ಟೆ -ಇದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಅವರು ಸಂಪುಟ ಪುನರ್ರಚನೆ ಬಗ್ಗೆ ವ್ಯಕ್ತಪಡಿಸಿದ ಪ್ರತಿಕ್ರಿಯೆ.

"ಸರ್ಕಾರದ ಆಡಳಿತ ನಿರ್ವಹಣೆಯನ್ನು ಸುಧಾರಿಸುವ ಬಗ್ಗೆ ಯಾವುದೇ ಗಂಭೀರತೆಯನ್ನು ಇದು ತೋರಿಸಿಲ್ಲ. ಕಾಂಗ್ರೆಸ್ ಪಕ್ಷ ಒಂದಾದ ಮೇಲೊಂದರಂತೆ ಎದುರಿಸಬೇಕಾಗಿ ಬಂದಿರುವ ಸೋಲುಗಳಿಂದ ನರಸಿಂಹರಾವ್ ಯಾವುದೇ ಪಾಠ ಕಲಿತಂತಿಲ್ಲ. ನೀತಿಗಳಲ್ಲಿ ಯಾವುದೇ ಸುಧಾರಣೆ ಅಥವಾ ಬದಲಾವಣೆಯ ಸೂಚನೆಯಂತೂ ಇದರಲ್ಲಿ ಇಲ್ಲ" ಎಂದು ಸುರ್ಜಿತ್ ಹೇಳಿದ್ದಾರೆ.

ಹೊಸ ಮಂತ್ರಿಗಳ ಅಸಾಮರ್ಥ್ಯದ ಬಗ್ಗೆ ಹೇಳುತ್ತಾ "ರಾಯರು, ಮುಂಬರುವ ಚುನಾವಣೆಗಳಿಗೆಂದು ಒಂದು ಪ್ರಚಾರ ಇಲಾಖೆ ರಚಿಸುವಂತಿದೆ. ಮಂತ್ರಿಗಳ ಆಯ್ಕೆ ಎಂಬುದು ಪಕ್ಷವನ್ನು ಒಟ್ಟಿಗಿಡಲು ನಡೆಸಿದ ನಾನಾ ಕಸರತ್ತುಗಳ ಫಲಿತಾಂಶವಷ್ಟೆ. ಜನಗಳ ಮೇಲೆ ಇದರ ಪರಿಣಾಮವೇನೂ ಇಲ್ಲ" ಎಂದು ಅವರು ಹೇಳಿದ್ದಾರೆ.

ಪ್ರಧಾನಮಂತ್ರಿಗಳು ಈ ಸಂಪುಟ ಪುನರ್ರಚನೆಯಿಂದ ಸರಕಾರದ ಸ್ವಚ್ಛ ಚಾರಿತ್ರ್ಯವನ್ನು ಪ್ರದರ್ಶಿಸ ಬಯಸಿದ್ದರೆ ಅದು ಅವರ ಭ್ರಮೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಯ ಸಂಪಾದಕೀಯ ಹೇಳಿದೆ. ಇದು ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಸಾಧ್ಯತೆಗಳನ್ನೇನೂ ಹೆಚ್ಚಿಸಿಲ್ಲ. ಏಕೆಂದರೆ ಪುನ್ರಚನೆಯ ಕಸರತ್ತಲ್ಲಿ ಗೆದ್ದವರು ಆರು ತಿಂಗಳ ಮಂತ್ರಿಗಿರಿಯ ಕಾಲದಲ್ಲಿ ಸಾಧ್ಯವಾದಷ್ಟು ಬಾಚಿಕೊಳ್ಳುವ ಯೋಚನೆಯಲ್ಲಿದ್ದರೆ, ಸೋತವರು ಗೊಣಗುತ್ತಿದ್ದಾರೆ. ಸರಕಾರ ತನ್ನ ಕೊನೆಯ ದಿನಗಳಲ್ಲಿ ನರಸಿಂಹರಾವ್ ಸರಕಾರದ ಈ ಚಿತ್ರ ಶೋಚನೀಯವೆಂದಿರುವ ಈ ಸಂಪಾದಕೀಯ ಈ ಪುನರ್ರಚನೆ ಜನಗಳ ಯಾವುದೇ ಸಮಸ್ಯೆಯನ್ನು ಪರಿಹರಿಸುವುದಿಲ್ಲ ಎಂದಿದೆ.

ಕಲ್ಲಿದ್ದಲು ಕಾರ್ಮಿಕರ ಆರು ದಿನಗಳ ಮುಷ್ಕರಕ್ಕೆ ಸಿಐಟಿಯು ಬೆಂಬಲ

ಕಲ್ಲಿದ್ದಲು ಉದ್ದಿಮೆಯ ಜಂಟಿ ದ್ವಿಪಕ್ಷೀಯ ಸಮಿತಿಯಲ್ಲಿರುವ 5 ಕೇಂದ್ರ ಕಾರ್ಮಿಕ ಸಂಘಟನೆಗಳು ಅಕ್ಟೋಬರ್ 16 ರಿಂದ 21ರ ವರೆಗೆ 6 ದಿನಗಳ ಮುಷ್ಕರ ನಡೆಸಲು ನಿರ್ಧರಿಸಿವೆ. ಏಳೂವರೆ ಲಕ್ಷ ಕಲ್ಲಿದ್ದಲು ಗಣಿ ಕಾರ್ಮಿಕರ ದೀರ್ಘ ಕಾಲದಿಂದ ಇರುವ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಕೋಲ್ ಇಂಡಿಯಾ ಆಡಳಿತ ವಿಳಂಬ ತಂತ್ರ ಅನುಸರಿಸುವುದನ್ನು ಪ್ರತಿಭಟಿಸಿ ಇಂಟಕ್, ಸಿಐಟಿಯು ಎಐಟಿಯುಸಿ, ಹೆಚ್.ಎಂ.ಎಸ್. ಹಾಗೂ ಬಿಎಂಎಸ್ ಸಂಘಗಳು ಈ ನಿರ್ಧಾರ ಕೈಗೊಂಡಿವೆ. ಸಿಐಟಿಯು ಕಾರ್ಯದರ್ಶಿ ಮಂಡಳಿ ಈ ನಿರ್ಣಯವನ್ನು ಸ್ವಾಗತಿಸುತ್ತಾ ಎಲ್ಲಾ ಕಲ್ಲಿದ್ದಲು ಗಣಿಗಳಲ್ಲಿ ಸಂಬಂಧಪಟ್ಟ ಸಂಘಗಳು ಈ ಮುಷ್ಕರ ಕಾರ್ಯಾಚರಣೆಗೆ ಒಗ್ಗಟ್ಟಿನಿಂದ ಸಿದ್ಧತೆ ನಡೆಸಬೇಕು ಎಂದು ಕರೆ ನೀಡಿದೆ.

ಏಪ್ರಿಲ್ 1, 1989 ರಿಂದ ಪೆನ್ಶನ್ ಗೆಂದು ಶೇ. 2 ರಷ್ಟು ಕಾರ್ಮಿಕರ ಸಂಬಳದಿಂದ ಮುರಿದುಕೊಳ್ಳುತ್ತಿದ್ದರೂ ಈ ಬಗ್ಗೆ ಆಡಳಿತ ಇನ್ನೂ ಧೃಢವಾಗಿ ಏನೂ ಹೇಳಿಲ್ಲ. ಹಿಂದಿನ ಒಪ್ಪಂದಗಳಲ್ಲಿ ನೀಡಿದ್ದ ಕೆಲವು ಸೌಲಭ್ಯಗಳನ್ನು ಹಿಂತೆಗೆದುಕೊಳ್ಳುವ ಸನ್ನಾಹವೂ ನಡೆದಿದೆ. ಸಿಐಟಿಯು ಬಿಟ್ಟು ಇತರ ಸಂಘಗಳು ಏಪ್ರಿಲ್ 29 ರಂದು ಒಂದು ತಿಳುವಳಿಕೆ ಪತ್ರಕ್ಕೆ ಸಹಿಹಾಕಿದ್ದರೂ ಆಡಳಿತದ ವಿಳಂಬ ನೀತಿಯಿಂದಾಗಿ ಒಪ್ಪಂದಕ್ಕೆ ಸಹಿ ಬಿದ್ದಿಲ್ಲ.

1989ರಲ್ಲೇ ಆಗಿನ ಕಲ್ಲಿದ್ದಲು ಮಂತ್ರಿಗಳು ಸಂಸತ್ತಿನಲ್ಲಿ ಪೆನ್ಶನ್ ಇತ್ಯಾದಿಗಳ ಬಗ್ಗೆ ತಿಳಿಯಪಡಿಸಿದ್ದರೂ ಅಧಿಕಾರಶಾಹೀ ಮುಗ್ಗರಿಕೆಗಳಿಂದಾಗಿ ಕಲ್ಲಿದ್ದಲು ಸಚಿವಾಲಯ ಇತ್ಯಾರ್ಥವನ್ನು ವಿಳಂಬ ಗೊಳಿಸುತ್ತಿದೆ ಎಂದು ಸಿಐಟಿಯು ಕಾರ್ಯದರ್ಶಿ ಮಂಡಳಿ ಹೇಳಿದೆ.

ಪಟಾಕಿ ಉದ್ದಿಮೆಯಲ್ಲಿ ಬಾಲ ದುಡಿಮೆಯನ್ನು ನಿಷೇಧಿಸಿ

-ಸಿಐಟಿಯು ಒತ್ತಾಯ

ಪಶ್ಚಿಮ ಬಂಗಾಳದ ಬಾಗ್ನಾನ್‌ನ ಒಂದು ಪಟಾಕಿ ಕಾರ್ಖಾನೆಯಲ್ಲಿ 20 ಕಾರ್ಮಿಕರು ಸತ್ತಿರುವ ಘಟನೆಯ ಬಗ್ಗೆ ಸಿಐಟಿಯು ಕಾರ್ಯದರ್ಶಿ ಮಂಡಳಿ ಆಘಾತ ವ್ಯಕ್ತಪಡಿಸಿದೆ. ಇವರಲ್ಲಿ ಬಹುಮಂದಿ ಬಾಲಕಾರ್ಮಿಕರು. ಈ ಕಾರ್ಖಾನೆಯು ಲೈಸೆನ್ಸ್ ಪಡೆಯದೆ ಮತ್ತು ಮಕ್ಕಳನ್ನು ದುಡಿಸಿಕೊಂಡು ಉತ್ಪಾದನೆ ನಡೆಸಲು ಆಡಳಿತ ಬಿಟ್ಟಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ಕೆಲವು ತಿಂಗಳ ಹಿಂದೆ ಹರ್ಯಾಣದ ರೋಹ್ಟಕ್ ನಲ್ಲಿ ಇದೇ ರೀತಿಯ ಕಾರ್ಖಾನೆಯಲ್ಲಿ ನಡೆದ ಸ್ಫೋಟದಲ್ಲಿ 23 ಮಂದಿ ಕಾರ್ಮಿಕರು ಸತ್ತಿದ್ದರು. ಅವರಲ್ಲಿ ಬಹುಪಾಲು ಹೆಂಗಸರು ಮತ್ತು ಮಕ್ಕಳು.

ಈ ಘಟನೆಯ ಆಮೂಲಾಗ್ರ ತನಿಖೆ ನಡೆಸಿ ಈ ಕಾನೂನು ಬಾಹಿರ ಕಾರ್ಖಾನೆಯ ಮಾಲಕರಿಗೆ ಮತ್ತು ತಮ್ಮ ಕರ್ತವ್ಯ ಮರೆತ ಸರ್ಕಾರಿ ಅಧಿಕಾರಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಪಟಾಕಿ ಕಾರ್ಖಾನೆಗಳಲ್ಲಿ ಹಾಗೂ ಇತರ ಅಪಾಯಕಾರೀ ಉದ್ದಿಮೆಗಳಲ್ಲಿ ಬಾಲ ದುಡಿಮೆಯನ್ನು ನಿಷೇಧಿಸಬೇಕು ಎಂದು ಸಿಐಟಿಯು ಪಶ್ಚಿಮ ಬಂಗಾಳ ಸರ್ಕಾರ ಹಾಗೂ ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿದೆ.

ಮಹಿಳಾ ಸಮಾವೇಶ

ಗುರುಪುರ: ಜನವಾದಿ ಮಹಿಳಾ ಸಂಘಟನೆಯ ಗುರುಪುರ ಘಟಕದ ಪ್ರಥಮ ಸಮಾವೇಶವು ಕನ್ನಿಕಂಬಳ ರಾಧಾಕೃಷ್ಣ ಮಂದಿರದಲ್ಲಿ ಕಾಂ. ಮಾಲತಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಮಾವೇಶದ ಉದ್ಘಾಟನೆಯನ್ನು ರಾಜ್ಯ ಸಮಿತಿ ಅಧ್ಯಕ್ಷೆ ಕಾಂ. ನೀಲಾ ಕೆ. ನೆರವೇರಿಸಿ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು.

ಸಮಾವೇಶವು ಅಧ್ಯಕ್ಷರನ್ನಾಗಿ ಕಾಂ ಮಾಲತಿ, ಪ್ರಧಾನ ಕಾರ್ಯದರ್ಶಿಯನ್ನಾಗಿ ನಾಗವೇಣಿ ಎಲ್.ಬಂಗೇರ, ಉಪಾಧ್ಯಕ್ಷರಾಗಿ ಸವಿತಾ ಮಿಜಾರು, ಜಂಟಿ ಕಾರ್ಯದರ್ಶಿಯಾಗಿ ಸುಂದರಿದಾಸ್ ರನ್ನು ಆಯ್ಕೆ ಮಾಡಿತು. ಸಭೆಯನ್ನು ನಾಗವೇಣಿ ಸ್ವಾಗತಿಸಿ ಕೊನೆಗೆ ವಂದಿಸಿದರು.

ರಾಜಕೀಯದ ಅಪರಾಧೀಕರಣ.............

ಪುಟ 5 ರಿಂದ

ವಾಳಶಾಹಿ ದೇಶಗಳಲ್ಲಿ ಕಂಡು ಬರುವ ದೊಡ್ಡ ಸಂಘಟಿತ ಅಪರಾಧಗಳಿಗೂ ವ್ಯತ್ಯಾಸವಿದೆ. ಅಮೇರಿಕಾ, ಪಶ್ಚಿಮ ಯುರೋಪು, ಜಪಾನುಗಳಲ್ಲಿ ದೊಡ್ಡ ಬಂಡವಾಳಶಾಹಿ ಹಾಗೂ ಪ್ರಭುತ್ವ ಗುತ್ತೇದಾರಿ ಬಂಡವಾಳಶಾಹಿಯ ಬೆಳವಣಿಗೆಯೊಂದಿಗೆ ಮಾಫಿಯಾಗಳು, ಅಪರಾಧಿ ಸಿಂಡಿಕೇಟ್‌ಗಳೂ ಮೂಡಿಬಂದವು. ವ್ಯಾಪಾರದಲ್ಲಿ ಕಾನೂನುಬದ್ಧ ಯಾವುದು, ಕಾನೂನುಬಾಹಿರ ಯಾವುದು ಎಂಬುದನ್ನು ಪ್ರತ್ಯೇಕಿಸುವ ಗೆರೆ ಬಹಳ ತೆಳ್ಳಗಿರುತ್ತದೆ. ಪ್ರಭುತ್ವದ ಅಂಗವಾಗಿರುವವರನ್ನು, (ಇದರಲ್ಲಿ ರಾಜಕಾರಣಿಗಳೂ ಸೇರುತ್ತಾರೆ) ತಮ್ಮ ಅಡಿಯಾಳಾಗಿ ಮಾಡುವವರು ದೊಡ್ಡ ಬಂಡವಾಳಶಾಹಿಗಳು. ಭಾರತದಲ್ಲೂ ಈ ವಿದ್ಯಮಾನ ಬಹಳ ವೇಗವಾಗಿ ಹರಡುತ್ತಿದೆ. -ವಿಶೇಷವಾಗಿ ಈಗ ಉದಾರೀಕರಣದ ಅವಧಿಯಲ್ಲಿ. ಹಿಂದಿನ ದಶಕಗಳಲ್ಲಿ ವ್ಯಾಪಾರಿ-ಭೂಮಾಲಕ ವರ್ಗಗಳು ರಚಿಸಿಕೊಂಡಿದ್ದ ಕಾನೂನುಬಾಹಿರ ಜಾಲ ಹಾಗೂ ಕಪ್ಪು ಹಣ ರಾಜಕೀಯವನ್ನು ಕುಲಗೆಡಿಸಿತ್ತು. ಉದಾರೀಕರಣದಿಂದ ಹಿಂದೆ ಸಾಮಾನ್ಯವಾಗಿ ಪರೋಕ್ಷ ರೂಪದಲ್ಲಿದ್ದದ್ದು ಈಗ ಬಹಿರಂಗವಾಗಿ ನಡೆಯುತ್ತಿದೆ, ಅದನ್ನು ಮುಕ್ತ ಮಾರುಕಟ್ಟೆ ನೀತಿಗಳೆಂದು ಸಮರ್ಥಿಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ಕ್ರಿಮಿನಲ್ 'ಉದ್ದಿಮೆ'ಗಳಿಗೆ ಹೆಚ್ಚುತ್ತಿರುವ ಉದ್ಯೋಗವಿಲ್ಲದ, ಪಾಪರಾದ ಮತ್ತು ಬೇರುಗಳಿಲ್ಲದ ಜನಸಮೂಹ ಒಂದು ಸಿದ್ಧ ಆಹಾರವಾಗಿ ದೊರೆಯುತ್ತಿದೆ.

ಶ್ರೀಮಂತರ ಅಪರಾಧಗಳು -ಬಡವರ ಅಪರಾಧಗಳು

ಗುತ್ತೇದಾರಿಗಳ, ಹಳ್ಳಿ-ಪಟ್ಟಣಗಳ ಶ್ರೀಮಂತರ ಅಪರಾಧಗಳನ್ನು ಬಂಡವಾಳಶಾಹಿ-ಭೂಮಾಲಕ ಆಳ್ವಿಕೆಯು ಅಪರಾಧಗಳೆಂದೇ ಭಾವಿಸುವುದಿಲ್ಲ. ಭ್ರಷ್ಟ ರಾಜಕಾರಣಿಗಳ, ಸಿವಿಲ್ ಅಧಿಕಾರಿಗಳ, ಪೋಲೀಸ್ ಅಧಿಕಾರಿಗಳ ಹಾಗೂ ದೊಡ್ಡ ಕಾಂಟ್ರಾಕ್ಟರುಗಳ ಕೂಟ ರಚಿಸುವವರು ಇದೇ ಆಳುವ ವರ್ಗಗಳ ಮಂದಿ. ಅಪರಾಧೀಕರಣದ ಮೂಲ ಇದು. ಈ ಒಟ್ಟಾರೆ ವ್ಯವಸ್ಥೆಯಲ್ಲಿ ಕ್ರಿಮಿನಲ್ ಚಟುವಟಿಕೆಗಳಲ್ಲಿ ರಾಜಕೀಯ ನಂಟು ಒಂದು ಪ್ರಮುಖ ಕೊಂಡಿಯೆಂಬುದು ನಿಜ, ಆದರೆ ಇದರ ಹಿಂದಿರುವ ಮೂಲಭೂತ ನಂಟನ್ನಾಗಲೀ, ಅದರ ಸೂತ್ರಧಾರರನ್ನಾಗಲೀ ಎಂದೂ ಮುಟ್ಟುವುದೂ ಇಲ್ಲ. ನೂರಾರು ಕೋಟಿ ರೂ .ಗಳಷ್ಟು ತೆರಿಗೆ ವಂಚನೆ ಮಾಡುವ ಯಾವುದೇ ದೊಡ್ಡ ವ್ಯಾಪಾರೀ ಮನೆತನವನ್ನು ಶಿಕ್ಷಿಸಲಾಗಿದೆಯೇ? ಅವರಿಗೆ ಕಾನೂನನ್ನು ಅನ್ವಯಿಸಿದರೂ ನ್ಯಾಯಾಂಗ ತಡಮಾಡದೆ ಅನಿರ್ದಿಷ್ಟ ಕಾಲದವರೆಗೆ ತಡೆಯಾಜ್ಞೆ ನೀಡಿ ಅವರಿಗೆ ಪರಿಹಾರ ಒದಗಿಸುತ್ತದೆ, ಶಿಕ್ಷೆ ನೀಡುವುದಿಲ್ಲ.

ಗ್ರಾಮೀಣ ಜನರನ್ನು ಹೆದರಿಸಿ, ಹಿಂಸಿಸಿ, ಅತ್ಯಾಚಾರ ನಡೆಸುವ, ಕೊಲ್ಲುವ ಯಾವುದೇ ಭೂಮಾಲಕ ತಾನು ಒಂದು ಕ್ರಿಮಿನಲ್ ಕೃತ್ಯ ಮಾಡುತ್ತಿದ್ದೇನೆ ಎಂದು ಭಯ ವಿಹಲ್ವನಾಗುವುದಿಲ್ಲ. ನಿಜಸಂಗತಿಯೆಂದರೆ ಸರಕಾರದ ಪ್ರಕಾರ ಕೃಷಿರಂಗದಲ್ಲಿ "ಈಗ ಯಾವುದೇ ಕಾನೂನು-ವ್ಯವಸ್ಥೆಯ ಸಮಸ್ಯೆಯಿಲ್ಲ" ಗೃಹ ರಾಜ್ಯ ಖಾತೆ ಮಂತ್ರಿ ಪಿ.ಎಂ. ಸಯೀದ್ ಹೀಗೆಂದು ಇತ್ತೀಚೆಗೆ ಲೋಕಸಭೆಯಲ್ಲಿ ಘೋಷಿಸಿದರು. ಅದೇ ಮಂತ್ರಿ ಹರಿಜನ-ಗಿರಿಜನರ ಮೇಲೆ ಅತ್ಯಾಚಾರ ಎಲ್ಲೆಡೆ ವಿಶೇಷವಾಗಿ ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ, ರಾಜಸ್ತಾನಗಳಲ್ಲಿ ಹೆಚ್ಚಿದೆಯೆಂದೂ ಒಪ್ಪಿಕೊಳ್ಳುತ್ತಾರೆ. ಈಗಿರುವ ಆಳುವ ವರ್ಗದ ಬುದ್ಧಿಯ ಪ್ರಕಾರ ಭೂಮಾಲಕರ, ಗ್ರಾಮೀಣ ಶ್ರೀಮಂತರ ದಬ್ಬಾಳಿಕೆ 'ಕಾನೂನು-ವ್ಯವಸ್ಥೆಯ' ಪ್ರಶ್ನೆಯಲ್ಲ, ಗ್ರಾಮೀಣ ಬಡವರ ಬಂಡಾಯ ಮಾತ್ರವೇ 'ಕಾನೂನು-ವ್ಯವಸ್ಥೆ' ಪ್ರಶ್ನೆ. ಭೂಮಾಲಕರ, ಗ್ರಾಮೀಣ ಶ್ರೀಮಂತರ ದಬ್ಬಾಳಿಕೆ ಮುಂತಾದ ಕ್ರಿಮಿನಲ್ ಚಟುವಟಿಕೆಗಳನ್ನು "ಹರಿಜನ-ಗಿರಿಜನರ ಮೇಲೆ ಅತ್ಯಾಚಾರ" ಎಂಬ ಶೀರ್ಷಿಕೆಯಡಿ ಹಾಕಿ ಬಿಡುತ್ತಾರೆ. ರಾಜಕೀಯಕ್ಕೆ ಬರುವ ಹಣಕಾಸು ಕೇವಲ ಕಳ್ಳಸಾಗಾಣಿಕೆದಾರರು ಅಥವಾ ಕ್ರಿಮಿನಲ್‌ಗಳಿಂದ ಮಾತ್ರವಲ್ಲ, ಗೌರವಾನ್ವಿತ ದೊಡ್ಡ ವ್ಯಾಪಾರಸ್ಥರು ಹಾಗೂ ಭೂಮಾಲಕರು ತಪ್ಪು ದಾರಿಯಿಂದ ಗಳಿಸಿದ ಹಣವೂ ರಾಜಕೀಯ ರಂಗಕ್ಕೆ ಬರುತ್ತಿದೆ. ಸಮಾಜದ 'ಗೌರವಾನ್ವಿತ' ಸ್ತಂಭಗಳ 'ಕ್ರಿಮಿನಲ್ ಕೃತ್ಯಗಳನ್ನು ಸರಕಾರ ಸಹಿಸಿಕೊಳ್ಳುತ್ತಿರುವಾಗ, ಅದಕ್ಕೆ ಪ್ರೋತ್ಸಾಹ ನೀಡುತ್ತಿರುವಾಗ ಇಕ್ಬಾಲ್ ಮಿರ್ಚಿ ಅಥವಾ ದಾವೂದ್ ಇಬ್ರಾಹಿಂಗಳಂತಹ ಕ್ರಿಮಿನಲ್ ಗಳನ್ನು ತಡೆಯುವುದಷ್ಟೇ ಸಾಕಾಗುವುದಿಲ್ಲ.

ಕಾಂಗ್ರೆಸ್ ಸರಕಾರ ಎಂದೂ ಈ ಜಾತಿಯ ಕ್ರಿಮಿನಲ್‌ಗಳ ವಿರುದ್ಧ ಕ್ರಮ ಕೈಗೊಂಡಿಲ್ಲ. ಈಗ ಉದಾರೀಕರಣದ ನಂತರವಂತೂ ಶೇರು ಹಗರಣ, ಹವಾಲಾ ಹಗರಣ, ಸಕ್ಕರೆ ಹಗರಣ ಮತ್ತಿತರ ಹತ್ತು ಹಲವು ಖಾಸಗೀಕರಣದ ಹಗರಣಗಳಂತಹ ಕ್ರಿಮಿನಲ್ ಚಟುವಟಿಕೆಗಳ ವಿರುದ್ಧ ಸರಕಾರ ಕಠಿಣ ಕ್ರಮ ಕೈಗೊಳ್ಳುತ್ತದೆಂದು ನಿರೀಕ್ಷಿಸುವುದು ಭೋಳೆತನವಾಗುತ್ತದಷ್ಟೆ. ಈ ಜಾತಿಯ ಕ್ರಿಮಿನಲ್‌ಗಳಿಗೆ ನೆರವಾಗುವ ಯಾವುದೇ ಮಂತ್ರಿಯನ್ನು ಹೊಣೆ ಮಾಡಲು ಅಥವಾ ಶಿಕ್ಷಿಸಲು ಸಾಧ್ಯವಿಲ್ಲ. ಜಪಾನ್, ಇಟೆಲಿಗಳಂತೆ ಇಡೀ ಮಂತ್ರಿಮಂಡಳಗಳೇ ಆಳುವ ವರ್ಗದ ಕ್ರಿಮಿನಲ್ ಚಟುವಟಿಕೆಗಳ ಭಾಗವಾಗಿ ಬಿಡಬಹುದು. ಆದರೆ ಬಂಡವಾಳಶಾಹಿ ನೀತಿ ನಿಯಮಗಳಿಗೆ ಇಂತಹ ಚಟುವಟಿಕೆಗಳು ಹೊರಗಿನ "ಸಭ್ಯತನ" ಮೀರದಂತೆ ಸ್ವಲ್ಪ ಮಿತಿಹಾಕುವುದಕ್ಕೆ ಪ್ರಯತ್ನಿಸುವುದನ್ನು ಬಿಟ್ಟು ಮತ್ತೇನೂ ಮಾಡುವ ಸಾಮರ್ಥ್ಯವಿದ್ದಂತಿಲ್ಲ. ಸಾಮಾಜಿಕ ಪರಿಸ್ಥಿತಿಗಳ ಜಾಡ್ಯ ರಾಜಕೀಯವನ್ನು ತಟ್ಟುತ್ತದೆ. ಅದರಲ್ಲೂ ಹೆಚ್ಚಾಗಿ ಬಂಡವಾಳಶಾಹಿ ರಾಜಕೀಯವನ್ನು.

ಏಕೈಕ ಮಾರ್ಗ

ರಾಜಕೀಯದ ಅಪರಾಧೀಕರಣವನ್ನು ಎದುರಿಸುವ ಏಕೈಕ ಮಾರ್ಗವೆಂದರೆ ಮೇಲಿನಿಂದ ಅದನ್ನು ಪೋಷಿಸುವ ವರ್ಗಗಳನ್ನು ಶಿಸ್ತಿಗೊಳಪಡಿಸುವುದು, ಶಿಕ್ಷಿಸುವುದು, ಹೀಗಾಗಬೇಕಾದರೆ ಮೊದಲು ಹರ್ಷದ್ ಮೆಹ್ತಾಗಳನ್ನು ಭವ್ಯೀಕರಿಸುವ, ಹಿಂದುಜಾಗಳನ್ನು ರಕ್ಷಿಸುವ, ಚಂದ್ರಸ್ವಾಮಿಗಳನ್ನು ಸಾಕುವ ಕಾಂಗ್ರೆಸ್ ಆಳ್ವಿಕೆ ಪ್ರತಿಪಾದಿಸುವ ಮೌಲ್ಯಗಳನ್ನು, ನೀತಿ-ನಿಯಮಗಳನ್ನು ತಿರಸ್ಕರಿಸಬೇಕು. ಈಗಿನ ಉದಾರೀಕರಣದ ಭರ ಭ್ರಷ್ಟಾಚಾರ ಮತ್ತು ಅಪರಾಧೀಕರಣ ಒಂದು ಸಾಂಸ್ಥಿಕ ರೂಪ ಪಡೆಯುವಂತೆ ಪೋಷಣೆ ಒದಗಿಸುತ್ತಿದೆ. ಆದ್ದರಿಂದ ರಾಜಕೀಯ ಅಪರಾಧೀಕರಣವನ್ನು ತಡೆಯಬೇಕಾದರೆ ಈ ನೀತಿಗಳ ವಿರುದ್ಧ ನಡೆಯುತ್ತಿರುವ ಹೋರಾಟ ಯಶಸ್ವಿಯಾಗಲೇಬೇಕಾಗುತ್ತದೆ.

ಕ್ರಿಮಿನಲ್ ಆಗಿಬಿಟ್ಟ ರಾಜಕೀಯ ವ್ಯವಹಾರವು ದುಡಿಯುವ ಜನಗಳಿಗೆ ಮತ್ತು ಸಾಮಾನ್ಯ ನಾಗರಿಕರಿಗೆ ಒಂದು ದೊಡ್ಡ ಪೀಡೆ. ಏಕೆಂದರೆ ಇಂತಹ ಕ್ರಿಮಿನಲ್ ಚಟುವಟಿಕೆಗಳ ಪರಿಣಾಮಗಳನ್ನು ಎದುರಿಸಬೇಕಾದವರು ಈ ಸಾಮೂಹಿಕ ವ್ಯವಸ್ಥೆಯಲ್ಲಿ ದನಿಯೆತ್ತಲಾರದ ದಮನಕ್ಕೊಳಗಾದ ಜನರೇ, ಒಂದೆಡೆ ಗೂಂಡಾ ಮುಖಂಡರು ಇನ್ನೊಂದೆಡೆ ಭ್ರಷ್ಟಗೊಂಡ, ಭ್ರಷ್ಟರೊಂದಿಗೆ ರಾಜಿಮಾಡಿಕೊಂಡ ಪೋಲೀಸ್ ಯಂತ್ರದ ನಡುವೆ ಸಿಲುಕಿಕೊಂಡ ಜನಸಾಮಾನ್ಯರಿಗೆ ಯಾವುದೇ ಹಕ್ಕು ಅಥವಾ ನ್ಯಾಯ ಎಲ್ಲಿಂದ ಸಿಗಬೇಕು? ಇಂತಹ ಪ್ರಜಾಪ್ರಭುತ್ವಕ್ಕೆ ಸಂಪೂರ್ಣ ವಿರುದ್ಧವಾದ ವಾತಾವರಣದಲ್ಲಿ ಅತ್ಯಂತ ಬಲಪಂಥೀಯ ಹಾಗೂ ಕೋಮುವಾದಿ ಸಂಘಟನೆಗಳು- ಶಿವಸೇನೆ, ವಿ.ಹೆಚ್.ಪಿ.ಭಜರಂಗ ದಳದಂತವುಗಳು ಬೆಳೆಯುತ್ತವೆ. ತಮ್ಮ ಪ್ರತೀಕಾರದದ ರಾಜಕೀಯಕ್ಕೆ, ಭಯೋತ್ಪಾದಕ ತಂತ್ರಗಳಿಗೆ ಸಮರ್ಥನೆ ಪಡೆಯಲು ಅವಕ್ಕೆ ಸಾಧ್ಯವಾಗುತ್ತದೆ. ನೂರಾರು ಅರೆಸೈನಿಕ ಪಡೆಗಳ ಕಣ್ಮುಂದೆ ಬಾಬ್ರಿ ಮಸೀದಿಯನ್ನು ಎಗ್ಗಿಲ್ಲದೆ ಧ್ವಂಸ ಮಾಡಿದ್ದು ಪ್ರಭುತ್ವ ಹೇಗೆ ಅಪರಾಧೀಕರಣದೆದುರು ಮೊಣಕಾಲೂರಿದೆ ಎಂಬುದಕ್ಕೊಂದು ಜ್ವಲಂತ ಉದಾಹರಣೆ.

ಎಲ್ಲಾ ಪಕ್ಷಗಳೂ ಅಪರಾಧೀಕರಣಕ್ಕೆ ಪ್ರೋತ್ಸಾಹ ನೀಡುತ್ತವೆ ಎಂಬ ಕೂಗಿನ ಹಿಂದೆ ಒಂದು ಸ್ಪಷ್ಟ ವರ್ಗ ಉದ್ದೇಶವಿದೆ. ಅದೆಂದರೆ ಬಡವರು ಮತ್ತು ಶೋಷಿತರ ಪರವಾಗಿ ಹೋರಾಡುವ ಪಕ್ಷಗಳು ಮತ್ತು ಅನ್ಯಾಯವನ್ನು ಶಾಶ್ವತಗೊಳಿಸಲು ಹೋರಾಡುವ ಪಕ್ಷಗಳ ನಡುವಿನ ವ್ಯತ್ಯಾಸವನ್ನು ಕಾಣದಂತೆ ಮಾಡುವುದು. ಗೂಂಡಾ ರಾಜಕಾರಣಿಗಳನ್ನು ತಡೆಹಿಡಿದು ಅವರನ್ನು ಅವರಿಗೆ ಪೋಷಣೆ ನೀಡುತ್ತಿರುವ ಅವರ ಯಜಮಾನರುಗಳೊಂದಿಗೆ ಶಿಕ್ಷಿಸಬಲ್ಲ ವಿಶ್ವಾಸಾರ್ಹತೆ ಕೇವಲ ಎಡ ಪಕ್ಷಗಳಿಗೆ ಮಾತ್ರ.

ತಕ್ಷಣದ ಗುರಿ- ದೂರಗಾಮೀ ಗುರಿ

ಮುಂಬರುವ ಚುನಾವಣೆಗಳಲ್ಲಿ ರಾವ್ ಸರಕಾರದ ಸ್ಥಾನದಲ್ಲಿ ಬೇರೊಂದು ಸರಕಾರವನ್ನು ತರುವ ಪ್ರಶ್ನೆ ಮುಖ್ಯವಾಗಿಬಿಡುತ್ತದೆ. ಅಪರಾಧೀಕರಣ ಮತ್ತು ಭ್ರಷ್ಟಾಚಾರದ ಬಗ್ಗೆ ಬಹಿರಂಗ ಉಪೇಕ್ಷೆ ಮಾತ್ರವಲ್ಲ ಶಾಮೀಲಿಗಾಗಿ ಕೂಡಾ ಈ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಬೇಕಾಗಿದೆ. ಕೇಂದ್ರದಲ್ಲಿ ಹೀಗೆ ಇದ್ದ ಕಾಂಗ್ರೆಸ್ಸೇತರ ಸರಕಾರಗಳ ದೋಷಗಳು, ವರ್ಗ ಮಿತಿಗಳು ಏನೇ ಇದ್ದರೂ ಕ್ರಿಮಿನಲ್ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಕಾಂಗ್ರೆಸ್ 'ಸಾಧನೆ'ಗೆ ಸರಿಗಟ್ಟುವಂತಹ ಮಟ್ಟಕ್ಕೆ ಅವರು ಬಂದಿದ್ದಾರೆ ಎಂದಂತೂ ಅವರನ್ನು ಆಪಾದಿಸುವಂತಿಲ್ಲ. ಪ್ರಜಾಪ್ರಭುತ್ವ ರಾಜಕೀಯ ಪರಿಸ್ಥಿತಿಯನ್ನು ಉಲ್ಲಂಘಿಸುವ ಶಕ್ತಿಗಳನ್ನು ತಡೆಗಟ್ಟುವ ಪರ್ಯಾಯ ಧೋರಣೆಯಲ್ಲಿ ಚುನಾವಣಾ ಸುಧಾರಣೆಗಳನ್ನು ಜ್ಯಾರಿಗೆ ತರುವ, ರಾಜಕೀಯ ಮತ್ತು ಧರ್ಮವನ್ನು ಪ್ರತ್ಯೇಕಿಸುವುದು, ಕೋಮುವಾದಿ-ಜಾತೀವಾದಿ ರಾಜಕೀಯವನ್ನು ಎದುರಿಸುವ ಅಂಶಗಳನ್ನು ಪ್ರಮುಖವಾಗಿ ಸೇರಿಸಬೇಕು.

ಇದು ತಕ್ಷಣದ ಗುರಿಯಾಗಿರಬೇಕು. ದೂರಗಾಮಿ ಗುರಿಯೆಂದರೆ ದೊಡ್ಡ ಬಂಡವಾಳಶಾಹಿಗಳು, ಉತ್ಪಾದನಾ ಸಾಧನಗಳ ಒಡೆಯರು ಕಾನೂನಿನ ವ್ಯಾಪ್ತಿಯೊಳಗೇ ಕಾರ್ಯ ನಿರ್ವಹಿಸುವಂತೆ, ಹಾಗೆ ಮಾಡದಿದ್ದರೆ ಶಿಕ್ಷೆ ಅನುಭವಿಸುವಂತೆ ಮಾಡಲು ಜನಗಳನ್ನು ರಾಜಕೀಯವಾಗಿ ಅಣಿನೆರೆಸುವುದು.

ಅಧಿಕಾರದಲ್ಲಿರುವ ರಾಜಕಾರಣಿಗಳಿಗೂ ಇದು ಅನ್ವಯವಾಗಬೇಕು. ಇದು ಸುಲಭ ಸಾಧ್ಯವಾದ ಕೆಲಸವೇನಲ್ಲ. ವರ್ಗ ಬಲಾಬಲವನ್ನು ಹೇಗೆ ಬದಲಿಸಲು ನಾವು ಶಕ್ತರಾಗುತ್ತೇವೆ ಎಂಬುದನ್ನು ಇದು ಅವಲಂಬಿಸಿದೆ. ಆ ಗುರಿಯತ್ತ ಸಾಗಲು ಕೂಡಾ ಆಳುವ ವರ್ಗಗಳು ಪೋಷಿಸಿ ಬೆಳೆಸಿರುವ ಭ್ರಷ್ಟಾಚಾರ ಮತ್ತು ಅಪರಾಧೀಕರಣದ ವಿರುದ್ಧ ನಿರಂತರ ಹೋರಾಟ ಅಗತ್ಯ.